# ಕೊಡವ ಜನಪದ ಆಟಗಳು



ಡಾ. ಎಂ.ಪಿ. ರೇಖಾ

# 'ಕೊಡವ ಜನಪದ ಆಟಗಳು'

ಡಾ. ಎಂ.ಪಿ. ರೇಖಾ

'ಕೊಡವ ಜನಪದ ಆಟಗಳು'

"**Kodava Janapada Aatagalu**" Published by the Karnataka Kodava Sahithya Academy, Madikeri

ಆದ್ಯ ಮುದ್ರಣ : 2013

ಪ್ರತಿ : 500

© ಎಲ್ಲಾ ಹಕ್ಕ್‌ನ ಕಾತ್ ಬೆಚ್ಚಿತ್.

ಕ್ರಯ : 77 ಉರ್‌ಪಿಯ

Price : Seventy Five Rupees

ಪ್ರಕಟ ಪಡ್‌ತ್‌ನವು :

**ರಿಜಿಸ್ಟ್ರಾರ್**

**ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ**

ಮ್ಯಾನ್ಸ್ ಕಾಂಪೌಂಡ್, ಮಡಿಕೇರಿ - 571 201

ಫೋನ್ : 08272 - 229074

ಮುಖಪುಟ ವಿನ್ಯಾಸ : ಸತೀಶ್ ಬಿ.ಆರ್.

ಅಚ್ಚ್‌ಕಾರ :

**ಶಕ್ತಿ ಪ್ರಿಂಟರ್ಸ್, ಮಡಿಕೇರಿ**

# ಮುಂಜೊಲ್

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಕೊಡವ ತಕ್ಕ್, ಸಾಹಿತ್ಯ, ಜನಪದ, ಕಲೆ, ಸಂಸ್ಕೃತಿನ ಪ್ರಪಂಚಕ್ಕ್ ಪರಿಚಯ ಮಾಡಿಕೊಡ್‌ಕೊಂಡು ಎಣ್ಣುವ ಆಸೆ ಪುರ್‌ಡ್‌ಲ್ ಕಾರ್ಬಾರ್ ಮಾಡಿಯಂಡುಂಡ್. ಇದಂಗ್ ಒತ್ತಾಸೆಯಾಯಿತ್ ಮಾಡ್‌ನ ಸಂಶೋಧನಾ ಕಾರ್ಬಾರ್‌ನ ಪುಸ್ತಕ ರೂಪತ್ ಕೊಂಡಬರಂಡು ಎಣ್ಣುವ ಯೋಜನೆ ಇಟ್ಟಿತ್. ಕನ್ನಡ ಪಿಂಞ ಸಂಸ್ಕೃತಿ ಇಲಾಖೆ ಆಂಜ ಚೆನ್ನಂಗ್ ಅಕಾಡೆಮಿಕ್ ಈ ಯೋಜನೆಕಾಯಿತ್ ಪಣ ಬುಡ್‌ಗಡೆ ಮಾಡಿತ್ ತಜ್ಞಂಗಳುಂಡ್ ಸಂಶೋಧನೆ ಪಿಂಞ ಅಧ್ಯಯನ ಮಾಡ್‌ವಕ್ ಕಾರಣ ಆಯಿತ್.

ಶ್ರೀಮತಿ ಡಾ. ತೀತಿರ ರೇಖಾ ವಸಂತ್ **'ಕೊಡವ ಜನಪದ ಆಟಗಳು'** ವಿಷಯತ್ ಸಮಗ್ರವಾನ ಸಂಶೋಧನೆ ಮಾಡಿತ್ ಅದ್‌ನ ಎಳ್ತ್‌ಲ್ ಕೊಂಡಬಂದಿತ್. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಇದ್‌ನ ಬೊಳಿಪಡ್‌ತಿತ್ ನಿಂಗಡ ಮಿಂಞತ್ ಬೆಚ್ಚಿತ್. ನಂಗಡಲ್ಲಿ ಉಳ್ಳ ಅದೆಚ್ಚಕೋ ಕೊಡವ ಜನಪದ ಕಳಿ ಇಂದ್ ಇಲ್ಲೆ. ಆಚೆಂಗಿ ಅದಂಗ್ ಉಳ್ಳ ಚೋದ್ ಉಂಡೇಉಂಡ್. ಇಂಥ ಕಳಿ ಮಾಂಜತನಕೆ ಜನಮನತ್ ಇರಂಡು ಎಣ್ಣ್‌ವಾಂಡ ಕೂಟ್‌ಲ್ ಕೊಡವ ಸಾಹಿತ್ಯಕ್ ಇದೋರ್ ಮೊದ ಆಡ್ ಎಣ್ಣ್‌ವದ್ ಅಕಾಡೆಮಿರ ಚಿಂತನೆ.

ಈ ನಿಟ್ಟ್‌ಲ್ ಸಂಶೋಧನೆ ಮಾಡಿತ್ ಕೃತಿ ರಚನೆ ಮಾಡ್‌ನ ಎಳ್ತ್‌ಕಾರ್ತಿ ಶ್ರೀಮತಿ ಡಾ. ತೀತಿರ ರೇಖಾ ವಸಂತ್‌ಕ್, ಚಾಯೋಡೆ ಅಚ್ಚ್ ಮಾಡಿತಂದ ಶಕ್ತಿ ಪ್ರಿಂಟರ್ಸ್‌ಕ್, ಮೂಡ್‌ಪಾಳೆಕ್ ರಂಗ್ ಕೂಟ್‌ನ ಕಲಾವಿದ ಸತೀಶ್‌ಕ್, ಎಲ್ಲಾಂಗಿಂಜ ಯೋಜನೆಕ್ ಸಹಕರಿಚಿಟ್ಟ ಕನ್ನಡ ಪಿಂಞ ಸಂಸ್ಕೃತಿ ಇಲಾಖೆಕ್ ವಂದನೆ. ಕೊಡವ ತಕ್ಕ್ - ಸಾಹಿತ್ಯಾಭಿಮಾನಿಯಡ ಮನೆಲ್ ಈ ಕೃತಿ ಇಂಜಿತ್, ಕೊಡವಾಮೆರ ಬೊಳ್‌ಚೆಕ್, ಕೇಳಿಕ್ ಸಹಾಯ ಆಡ್‌ಂದ್ ಬಯಂದವಿ.

ಮಡಿಕೇರಿ.
01.02.2013

ಅಡ್ಡಂಡ ಸಿ. ಕಾರ್ಯಪ್ಪ
ಅಧ್ಯಕ್ಷ
ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ.

# ಕೃತಜ್ಞತೆಗಳು

'ಕೊಡವ ಜನಪದ ಆಟಗಳು' ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಬಹುಪಾಲು ಕಣ್ಮರೆಯಾಗುವ, ತನ್ನ ಮೂಲರೂಪವನ್ನು ಕಳೆದುಕೊಳ್ಳುವ ಹಂತದಲ್ಲಿರುವಾಗ ಸಕಾಲಕ್ಕೆ ಸಂಸ್ಕೃತಿ – ಪರಂಪರೆಯ ಕುರಿತು ಸದಾ ಚಿಂತಿಸುವ ಕರ್ನಾಟಕ ಸರ್ಕಾರವು ಕನ್ನಡ–ಸಂಸ್ಕೃತಿ ಇಲಾಖೆಯ ಮೂಲಕ ಫೆಲೋಶಿಪ್ ನೀಡಿ ಅಧ್ಯಯನಕ್ಕೆ ಪ್ರೋತ್ಸಾಹಿಸಿದೆ. ಸಂಸ್ಕೃತಿ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ನನ್ನ ಅನಂತ ವಂದನೆಗಳು.

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯು ಈ 'ಫೆಲೋಶಿಪ್'ನ ಅಧ್ಯಯನವನ್ನು ಪೂರ್ಣಗೊಳಿಸಲು ನೀಡಿದ ಸಂಪೂರ್ಣ ಸಹಕಾರಕ್ಕಾಗಿ ಅಕಾಡೆಮಿ ಅಧ್ಯಕ್ಷರು, ರಿಜಿಸ್ಟ್ರಾರ್ ಹಾಗೂ ಸದಸ್ಯರಿಗೆ ನನ್ನ ಕೃತಜ್ಞತೆಗಳು.

ಅಧ್ಯಯನದ ಅವಧಿಯಲ್ಲಿ ಮಾಹಿತಿ ಕಲೆಹಾಕಲು ಸಹಕರಿಸಿದ ನನ್ನಮ್ಮ ಮಾಯಣಮಾಡ ಸುಮತಿ ಪೆಮ್ಮಯ್ಯ, ಡಾ.ಸುಭಾಶ್ ನಾಣಯ್ಯ, ಅನಿಲ್ ಎಚ್.ಟಿ, ಬಾಚರಣಿಯಂಡ ಅಪ್ಪಣ್ಣ, ವಿಘ್ನೇಶ್ ಮೂರ್ನಾಡು ಹಾಗೂ ಬಲಮುರಿ ಗ್ರಾಮಸ್ಥರಿಗೆ ನನ್ನ ಮನದಾಳದ ನೆನಕೆಗಳು.

ನನ್ನ ಕೆಲಸ ಕಾರ್ಯಗಳಿಗೆ ಪ್ರೀತಿಯ ಪ್ರೇರಣೆ ನೀಡುವ ಕಾವೇರಿ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ, ಕಾಲೇಜಿನ ಪ್ರಾಂಶುಪಾಲರು, ಸಹೋದ್ಯೋಗಿ ಮಿತ್ರರು, ಗ್ರಂಥಾಲಯದ ಅಧಿಕಾರಿಗಳು ಹಾಗೂ ಸ್ನೇಹಿತರಿಗೆ ವಂದನೆಗಳು.

ಅಂದವಾಗಿ ಡಿ.ಟಿ.ಪಿ ಮಾಡಿಕೊಟ್ಟು ಸಹಕರಿಸಿದ ಅಗಸ್ಟಿನ್ ಪಾಲ್‌ಗೆ ನನ್ನ ಪ್ರೀತಿಯ ಧನ್ಯವಾದಗಳು.

ನನ್ನೆಲ್ಲಾ ಕಾರ್ಯಚಟುವಟಿಕೆಗಳ ಬೆನ್ನೆಲುಬಾಗಿರುವ ಬಾಳಸಂಗಾತಿ ವಸಂತ, ಮಗ ವಿಧು ಉತ್ತಪ್ಪ, ಮಗಳು ವರ್ಣಮಾಚಮ್ಮರ ಸಹಕಾರವನ್ನು ನೆನೆಯಲೇಬೇಕು. ಈ ಅಧ್ಯಯನದ ಸಂದರ್ಭದಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿದ ಸರ್ವರಿಗೂ ಮತ್ತೊಮ್ಮೆ ವಂದನೆಗಳು.

**ಡಾ. ಎಂ.ಪಿ.ರೇಖಾ**

**ಸಹ ಪ್ರಾಧ್ಯಾಪಕರು, ಕಾವೇರಿ ಪದವಿ ಕಾಲೇಜು**

**ಗೋಣಿಕೊಪ್ಪಲು, ಕೊಡಗು ಜಿಲ್ಲೆ.**

**ಮೊ:9448504049**

# ಪರಿವಿಡಿ

ಪೀಠಿಕೆ

1. ಮಕ್ಕಳ ಆಟಗಳು
   - ಅ) ಸಮೂಹದ ಆಟಗಳು
   - ಆ) ಹೆಣ್ಣು ಮಕ್ಕಳ ಆಟಗಳು
   - ಇ) ಗಂಡು ಮಕ್ಕಳ ಆಟಗಳು

2. ವಯಸ್ಕರ ಆಟಗಳು
   - ಅ) ಮಹಿಳೆಯರ ಆಟಗಳು
   - ಆ) ಪುರುಷರ ಆಟಗಳು

3. ವೃದ್ಧರ ಆಟಗಳು

4. ಸಂಕೀರ್ಣ

ಅನುಬಂಧ

- ಅ) ಆಟಗಳ ಪಟ್ಟಿ
- ಆ) ಆಕರಗಳು
- 1) ಮಾಹಿತಿದಾರರು
- 2) ಕೃತಿಗಳು
- ಇ) ಆಟಗಳ ಚಿತ್ರಗಳು

# ಪೀಠಿಕೆ :

ಮನುಷ್ಯನ ಚಟುವಟಿಕೆಗಳು ಆರಂಭಗೊಂಡ ದಿನದಿಂದಲೇ ಆಟಗಳೂ ಪ್ರಾರಂಭಗೊಂಡಿರಬೇಕು. ಮನುಷ್ಯರ ನಡುವಿನ ಭಾವನೆಗಳ ಸಂಪರ್ಕಕ್ಕೆ ಭಾಷೆ ಕೊಂಡಿಯಾದಂತೆ ಆತನಿಗೆ ದೈಹಿಕ, ಮಾನಸಿಕ ಆರೋಗ್ಯವನ್ನು ಕಾಪಾಡಿ ಕೊಟ್ಟಿರುವುದು 'ಆಟ'ವೆನ್ನಬಹುದು. "ಆಟಗಳು ಇಂದು ನಿನ್ನೆಯವಲ್ಲ. ಬಗೆ ಬಗೆಯ ಆಟಗಳು ಪ್ರಾಚೀನ ಈಜಿಪ್ಟ್, ಗ್ರೀಸ್, ಬ್ಯಾಬಿಲೋನಿಯಾ, ಭಾರತ ಮತ್ತು ಚೀನಾಗಳಲ್ಲಿ ಐದು ಸಾವಿರ ವರ್ಷಗಳ ಹಿಂದೆಯೇ ಇದ್ದುವೆಂಬುದಕ್ಕೆ ಪುರಾವೆಗಳಿವೆ. ಅಂದಿನ ಈಜಿಪ್ಟಿನಲ್ಲಿ ಮಲ್ಲಯುದ್ಧ, ಅಂಗಸಾಧನೆ, ಭಾರ ಎತ್ತುವುದು, ಎಸೆಯುವುದು, ಚೆಂಡಾಟ, ಗೂಳಿಕಾಳಗ, ಗಾಳಹಾಕಿ ಮೀನು ಹಿಡಿಯುವುದು ಜನಪ್ರಿಯವಾಗಿದ್ದವು. ಬೊಂಬೆ, ಆಟಿಗೆ ದೋಣಿ, ಗೋಲಿ, ಬುಗುರಿ, ಚೆಂಡು, ಕೆಲ ಹಲಗೆ ಆಟಗಳು ಆ ಕಾಲದಲ್ಲೆ ಮಕ್ಕಳ ಆಟದ ಸಾಮಗ್ರಿಗಳಾಗಿ ರೂಪುಗೊಂಡಿದ್ದವು. ಪುರಾತನ ಅಸ್ಸೀರಿಯಾ–ಬ್ಯಾಬಿಲೋನಿಯಗಳಲ್ಲಿ ಮುಷ್ಟಿಯುದ್ಧ, ಕುಸ್ತಿ, ಬಿಲ್ಲುಗಾರಿಕೆ ಪ್ರಚಲಿತವಿದ್ದ ಆಟಗಳು. ಗ್ರೀಸಿನಲ್ಲಂತು ಇಲಿಯಡ್, ಒಡೆಸ್ಸಿಗಳಲ್ಲಿ ವರ್ಣಿತವಾಗಿರುವ ಮಲ್ಲಯುದ್ಧ, ಮುಷ್ಟಿಯುದ್ಧ ಮುಂತಾದ ಕ್ರೀಡೆಗಳನ್ನು ಅತಿಥಿ ಸತ್ಕಾರಕ್ಕಾಗಿ ಏರ್ಪಡಿಸಲಾಗುತ್ತಿತ್ತು. ಧಾರ್ಮಿಕ ಉತ್ಸವಗಳಲ್ಲಿ ಓಟ ಸ್ಪರ್ಧೆ, ಕುದುರೆ ಪಂದ್ಯ, ಕುಸ್ತಿ, ಚಕ್ರ ಎಸೆತ ಮುಂತಾದ ಪಂದ್ಯಗಳು ಏರ್ಪಡುತ್ತಿದ್ದವು". (ಜನಪದ ಆಟಗಳು, ಪ್ರ.ಸಂ. ಡಾ.ಎಸ್.ಕೆ. ಕರೀಂಖಾನ್, 1990, ಪು. 4).

ಭಾರತವೂ ಕೂಡ ಕ್ರೀಡೆಗಳ ಬಗೆಗೆ ಪ್ರೇಮವನ್ನು ಹೊಂದಿದ ದೇಶವಾಗಿದೆ. ಹರಪ್ಪ–ಮೊಹೆಂಜದಾರೋ ಅವಶೇಷಗಳಲ್ಲಿ ಅನೇಕ ಆಟಿಕೆಗಳ ಅವಶೇಷಗಳು ದೊರಕಿದ್ದನ್ನು ಇತಿಹಾಸದ ಮೂಲಗಳು ತಿಳಿಸುತ್ತವೆ. ಭಾರತೀಯ ಸಂಸ್ಕೃತಿಯ ಮೂಲಗಳನ್ನು ಗಮನಿಸಿದಾಗ ತಾವಿರುವ ಪ್ರದೇಶಕ್ಕೆ ಹೊಂದಿಕೊಳ್ಳುವ, ತಮ್ಮ ಸಾಮಾಜಿಕ ಜೀವನಕ್ಕೆ ಬೇಕಾಗುವ ಹಾಗೆಯೇ ತಮ್ಮ ದುಡಿಮೆಗೂ ಅನುಕೂಲ ವಾಗುವ ನೆಲೆಯಲ್ಲಿ ಆಟಗಳನ್ನು ರೂಪಿಸಿಕೊಂಡಿರುವುದು ಕಂಡುಬರುತ್ತದೆ.

ಒಂದು ಸಂದರ್ಭದಲ್ಲಿ ಹುಟ್ಟಿಕೊಂಡ ಜನಪದ ಆಟಗಳು ತಲೆಮಾರುಗಳಲ್ಲಿ ಹಾಗೆಯೇ ಮುಂದುವರಿಯಲಿಲ್ಲ. ಬದಲಿಗೆ ಕೆಲವಾರು ಆಟಗಳು ಪೂರ್ಣವಾಗಿ ನಶಿಸಿಹೋದವು. ಮತ್ತೆ ಕೆಲವು ಮೂಲರೂಪವನ್ನು ಬಿಟ್ಟು ಹೊಸ ರೂಪವನ್ನು ಪಡೆದುಕೊಂಡುವು. ಕೆಲವಾರು ಆಟಗಳು ಹೊಸದಾಗಿ ಹುಟ್ಟಿಕೊಂಡವು. ಆದರೆ ಓಟ, ಈಜು ಮುಂತಾದ ಕೆಲವು ನಿರ್ದಿಷ್ಟ ಆಟಗಳು ಮಾತ್ರ ಎಲ್ಲಾ ತಲೆಮಾರು

ಗಳಲ್ಲೂ ಯಾವುದೇ ಬದಲಾವಣೆ ಹೊಂದದೆ ಮುಂದುವರಿದುಕೊಂಡೇ ಬಂದಿವೆ.

ದಟ್ಟ ಅರಣ್ಯದ ನಡುವೆ ವ್ಯವಸಾಯವನ್ನೇ ಪ್ರಧಾನ ಕಾಯಕವಾಗಿಸಿಕೊಂಡ ಕೊಡವರು ಇಲ್ಲಿಯ ಪ್ರಾದೇಶಿಕ ಸಾಮಾಜಿಕ ವ್ಯವಸ್ಥೆಗೆ ಸರಿಹೊಂದುವಂತಹ ಹಲವಾರು ಆಟಗಳನ್ನು ತಮ್ಮ ಸಂಸ್ಕೃತಿಯ ಭಾಗವಾಗಿಸಿಕೊಂಡಿದ್ದಾರೆ. ಇಲ್ಲಿ "ಕೊಡವ ಜನಪದ ಆಟಗಳು" ಎಂಬ ಶೀರ್ಷಿಕೆಯನ್ನು ಎಲ್ಲಾ ಕೊಡವ ಭಾಷಿಕ ಸಮುದಾಯಗಳ ಆಟಗಳು ಎಂಬ ಅರ್ಥದಲ್ಲಿ ಬಳಸಲಾಗಿದೆ.

ಕರ್ನಾಟಕದ ಪುಟ್ಟ ಜಿಲ್ಲೆಯಾದ ಕೊಡಗು ಬೆಟ್ಟಗುಡ್ಡ, ನದಿ-ತೋಡುಗಳು, ದೇವರಕಾಡುಗಳು, ಕಾಫಿ-ತೋಟಗಳೊಂದಿಗೆ ಭತ್ತದ ಗದ್ದೆಗಳನ್ನು ಹೊಂದಿದ್ದು ಸಮೃದ್ಧ ನಾಡೆಂದೇ ಪ್ರಸಿದ್ಧವಾಗಿದೆ. ಕರ್ನಾಟಕದ ಭಾಗವಾಗಿರುವ ಹಾಗೆಯೇ ಪ್ರತ್ಯೇಕವಾಗಿಯೂ ತನ್ನದೇ ಆದ ನೆಲೆಯಲ್ಲಿ ಗುರುತಿಸಿಕೊಂಡಿದೆ. ಭಾಷಿಕ ಹಾಗೂ ಸಾಂಸ್ಕೃತಿಕ ನೆಲೆಗಳಲ್ಲಿ 'ಕೊಡಗು' ಒಂದು ಪ್ರತ್ಯೇಕ ಅನನ್ಯತೆಯನ್ನು ಹೊಂದಿದೆ.

ಆದಿವಾಸಿಗಳ ನೆಲೆ, ವೀರಯೋಧರ ಉತ್ಪಾದನಾ ಸ್ಥಾನ ಹಾಗೂ ಸೌಂದರ್ಯದ ಬೀಡು ಎಂಬ ಜನಪ್ರಿಯ ಮನೋಧರ್ಮ ಕೂಡ ಕೊಡಗಿನ ಕುರಿತಾಗಿ ಇದೆ. ನಿರಂತರವಾಗಿ ಅನ್ಯಸಂಸ್ಕೃತಿಯ ಪ್ರಭಾವಕ್ಕೆ ಒಳಗಾದರೂ ತನ್ನ ಮೂಲದ ಅನನ್ಯತೆಗಳನ್ನು, ಸಾಂಸ್ಕೃತಿಕ ಅನುಸಂಧಾನಗಳನ್ನು ಆಧುನಿಕೋತ್ತರ ಕಾಲಘಟ್ಟದಲ್ಲೂ ಉಳಿಸಿಕೊಂಡಿರುವ ವಿಶೇಷತೆ ಈ ನಾಡಿನದ್ದಾಗಿದೆ.

ಇಂದಿಗೂ ಶೇಕಡಾ 45ರಷ್ಟು ಕೊಡಗಿನ ಭೂಭಾಗ ಅರಣ್ಯದ ಭಾಗವಾಗಿಯೇ ಉಳಿದಿರುವುದು ಕೊಡವ ಭಾಷಿಕ ಸಮುದಾಯಗಳಲ್ಲಿರುವ ಧಾರ್ಮಿಕ ಭಾವನೆಯಿಂದ. ಪ್ರತಿಯೊಂದು ಊರಿನಲ್ಲೂ 'ದೇವರಕಾಡು' ಎಂಬ ಹೆಸರಿನಲ್ಲಿ ಕಾಡುಗಳನ್ನು ರಕ್ಷಿಸಲಾಗುತ್ತಿದೆ. ಈ ದೇವರಕಾಡನ್ನು ಕಾಯಲು ಕೇರಿಗೊಬ್ಬ ಅಯ್ಯಪ್ಪ, ಗ್ರಾಮಕ್ಕೊಬ್ಬಳು ಭಗವತಿಯೂ ಇದ್ದಾರೆ. ಈ ದೇವ-ದೇವತೆಯರ ಹಬ್ಬ-ಉತ್ಸವಗಳ ಆಚರಣೆಯ ಸಂದರ್ಭದಲ್ಲಿ ಹಲವಾರು ಆರಾಧನೆಗಳನ್ನು ನಡೆಸಲಾಗುತ್ತದೆ. ಕೆಲವಾರು ಜನಪದ ಆಟಗಳು ಇಂತಹುಗಳ ಭಾಗವೇ ಆಗಿವೆ.

ಕೊಡಗು ಹಾಗೂ ಕೊಡವರ ಉಲ್ಲೇಖ ಪೌರಾಣಿಕವಾಗಿ ಕ್ರಿ.ಶ. 1ನೆಯ ಶತಮಾನದಲ್ಲಿ ರಚಿಸಲಾಗಿದೆ ಎಂದು ನಂಬಲಾಗಿರುವ 'ಕಾವೇರಿ ಪುರಾಣ'ದಲ್ಲಿ ಕಾಣಸಿಗುತ್ತವೆ. ಹಾಗೆಯೇ ಚಾರಿತ್ರಿಕವಾಗಿ ಕ್ರಿ.ಶ. 2ನೆಯ ಶತಮಾನದಲ್ಲಿ ರಚನೆಯಾಗಿರುವ ತಮಿಳಿನ 'ಸಂಗಂ' ಸಾಹಿತ್ಯದಲ್ಲಿ ಕೊಡಗು/ಕೊಡವರ ಉಲ್ಲೇಖಗಳು ಬರುತ್ತವೆ.

ಕ್ರಿ.ಶ. 11ನೆಯ ಶತಮಾನದ 'ಹುಣಸೂರು' ಶಾಸನದಲ್ಲಿ ಮೊದಲಿಗೆ ಕೊಡವರ ಉಲ್ಲೇಖ ಶಾಸನದಲ್ಲಿ ಬಂದಿದೆ (1174 ರ ಕನ್ನಡ ಶಾಸನ ಸಂಖ್ಯೆ, 20).

ಕನ್ನಡದ ಲಿಪಿ ಬಳಸಿ ಕೊಡವ ಭಾಷೆಯಲ್ಲಿ ರಚಿತವಾದ ಸಾಹಿತ್ಯವೂ ಈ ಭಾಷೆಯಲ್ಲಿ ಬೆಳೆದು ಬಂದಿದೆ. ಭಾಷಾವರ್ಗೀಕರಣದ ಪ್ರಕಾರ ಕೊಡವ ಭಾಷೆಯು ದಕ್ಷಿಣದ್ರಾವಿಡ ಭಾಷಾವರ್ಗಕ್ಕೆ ಸೇರುತ್ತದೆ. ಈ ಭಾಷೆಯು 23 ಸಮುದಾಯಗಳ ಮಾತೃಭಾಷೆಯಾಗಿದೆ.

ಕೊಡಗಿನ/ಕೊಡವರ ಸಾಮಾಜಿಕ ಜೀವನದ ಕೇಂದ್ರಬಿಂದುವೆಂದರೆ ಇವರ 'ಕುಟುಂಬ' ಅಥವಾ 'ವಕ್ಕ'. ಈ ವಕ್ಕದ ಮೂಲ 'ಐನ್‌ಮನೆ'. ಒಂದು ವಕ್ಕ / ಮನೆತನಕ್ಕೆ ಸೇರಿದ ಸದಸ್ಯರೆಲ್ಲರೂ ಈ 'ಐನ್‌ಮನೆ'ಯಲ್ಲಿ (ಮೂಲಮನೆ) ಜೀವಿಸುತ್ತಿದ್ದ ಅವಿಭಕ್ತ ಕುಟುಂಬ ಪರಂಪರೆ ಈ ಸಂಸ್ಕೃತಿಯ ಮೇಲೆ ಅಪಾರವಾದ ಪರಿಣಾಮವನ್ನು ಬೀರಿದೆ. ಕೊಡವರ ಜನಪದ ಆಟಗಳ ಮೇಲೂ ಇದರ ಪ್ರಭಾವ, ಪರಿಣಾಮಗಳನ್ನು ಗುರುತಿಸಬಹುದಾಗಿದೆ.

ಕೊಡವರ ವೀರಪರಂಪರೆಗೆ ದ್ಯೋತಕವೆನ್ನುವಂತೆ ಕೋವಿ/ಬಂದೂಕಿನ ಬಳಕೆ ಇವರ ಆಚರಣೆ, ಆರಾಧನೆಗಳಲ್ಲಿ ಕೋಲಿನಷ್ಟೇ ಸಹಜವಾಗಿರುವಂತೆ ಜನಪದ ಆಟಗಳಲ್ಲೂ ಸ್ಥಾನ ಪಡೆದುಕೊಂಡಿರುವುದನ್ನು ಕಾಣಬಹುದಾಗಿದೆ.

☆☆☆☆

# ಮಕ್ಕಳ ಆಟಗಳು

ಮಕ್ಕಳಾಟವು ಚಂದ, ಮತ್ತೆ ಯೌವನ ಚಂದ...... ಎಂಬಂತೆ ಮಕ್ಕಳು ಆಡುವ ಆಟಗಳು ಹೇಗಿದ್ದರೂ ಚಂದವೇ. ಅವು ಮನಸ್ಸಿಗೆ ಮುದ ನೀಡುತ್ತವೆ. ಕೊಡಗಿನ ಸಾಮಾಜಿಕ ಬದುಕಿನಲ್ಲಿ ಗಂಡು-ಹೆಣ್ಣುಗಳು ಪ್ರತ್ಯೇಕವಾಗಿ ನಡೆಸುವ ಆಚರಣೆಗಳೇ ಇಲ್ಲವೆನ್ನುವಂತಹ ರೀತಿ ಇದೆ. ಯಾವುದೇ ಆಚರಣೆಗಳನ್ನೂ ಗಂಡು-ಹೆಣ್ಣುಗಳಿಬ್ಬರೂ ಸೇರಿ ನಡೆಸಿಕೊಡುವ ಸಮಾನ ಮನೋಧರ್ಮ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ. ಇದೇ ಸನ್ನಿವೇಶವನ್ನು ಇಲ್ಲಿನ ಜನಪದ ಆಟಗಳಲ್ಲೂ ಕಾಣಬಹುದು. ಸಾಮಾನ್ಯವಾಗಿ ಇತರ ಕಡೆಗಳಲ್ಲಿ ಗಂಡುಮಕ್ಕಳು, ಹೆಣ್ಣುಮಕ್ಕಳು ಪ್ರತ್ಯೇಕವಾಗಿ ಆಡುವ ಕೆಲವಾರು ಆಟಗಳನ್ನು ಇಲ್ಲಿ ಇಬ್ಬರೂ ಸೇರಿ ಆಡುವುದನ್ನು ನೋಡಬಹುದು. ಆದರೂ ಪ್ರತ್ಯೇಕವಾಗಿ ಆಡುವ ಆಟಗಳೂ ಇಲ್ಲವೆಂದಿಲ್ಲ. ಹೀಗಾಗಿ ಸಾಮಾನ್ಯ ಆಟಗಳನ್ನು ಗಂಡು ಮಕ್ಕಳು - ಹೆಣ್ಣು ಮಕ್ಕಳು ಸೇರಿ ಆಡುವ ಸಮೂಹದ ಆಟಗಳು ಹಾಗೂ ಗಂಡು ಮಕ್ಕಳು ಮತ್ತು ಹೆಣ್ಣುಮಕ್ಕಳು ಪ್ರತ್ಯೇಕವಾಗಿ ಆಡುವ ಆಟಗಳೆಂದು ಪ್ರತ್ಯೇಕಿಸಿಕೊಳ್ಳಲಾಗಿದೆ.

## ಅ) ಸಮೂಹದ ಆಟಗಳು:

**(ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳೆಂಬ ವ್ಯತ್ಯಾಸವಿಲ್ಲದೆ ಇಬ್ಬರೂ ಸೇರಿ ಗುಂಪಿನಲ್ಲಿ ಆಡುವ ಆಟಗಳು):**

ಕೊಡಗು ಜಿಲ್ಲೆ ದೇಶದ ಚರಿತ್ರೆಯಲ್ಲಿ 'ಸಾಹಸ ಪ್ರಧಾನ' ಗುಣಕ್ಕೆ

ಹೆಸರಾಗಿರುವಂತೆ, ಆಟಗಳಲ್ಲೂ ಸಾಹಸ ಪ್ರಧಾನವಾದ ಕ್ರೀಡೆಗಳೇ ಇಲ್ಲಿನವರ ಆಸಕ್ತಿಯೂ ಆಗಿದೆ. ಇಲ್ಲಿ ಸಹಜ, ಸುಂದರ ಬದುಕನ್ನು ಸಾಗಿಸಲು ಹೆಣ್ಣು-ಗಂಡೆಂಬ ವ್ಯತ್ಯಾಸವಿಲ್ಲದೆ ಇಬ್ಬರೂ ಧೈರ್ಯ, ಸಾಹಸ, ಗಟ್ಟಿತನಗಳನ್ನು ಅನಿವಾರ್ಯವಾಗಿ ಮೈಗೂಡಿಸಿಕೊಳ್ಳಬೇಕಾದ ಪರಿಸ್ಥಿತಿ ಇದೆ. 'ಬೆಳೆಯ ಸಿರಿ ಮೊಳಕೆಯಲ್ಲಿ' ಎಂಬಂತೆ ಬದುಕಿನ ಭಾವನೆಗಳು ಗಟ್ಟಿಗೊಳ್ಳಬೇಕಾದ ಬಾಲ್ಯದಲ್ಲೇ ಜನಪದರು ಇವರಿಬ್ಬರನ್ನು ಸರಿಸಮಾನವಾಗಿಯೇ ಬೆಳೆಸಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಆದ್ದರಿಂದ ಮಕ್ಕಳಾಟಗಳನ್ನು ಗಮನಿಸಿದಾಗಲೂ, ಕರ್ನಾಟಕದ ಇತರ ಭಾಗಗಳಲ್ಲಿ ಗಮನಿಸಿದಾಗ ಗಂಡು ಮಕ್ಕಳು ಮಾತ್ರ ಆಡುವ ಹಲವಾರು ಆಟಗಳನ್ನು ಇಲ್ಲಿ ಹೆಣ್ಣು ಮಕ್ಕಳು ಆಡುವುದು ಕಂಡುಬರುತ್ತದೆ.



## ೧. ಗೋಲಿ ಕಳಿ (ಗೋಲಿ ಆಟ):

ಇದು ನಶಿಸುವ ಅಂಚಿನಲ್ಲಿರುವ ಆಟ. ಆಟಗಾರರ ಸಂಖ್ಯೆಗೆ ಇಲ್ಲಿ ಯಾವುದೇ ಮಿತಿ ಇಲ್ಲ. ಎಷ್ಟು ಮಕ್ಕಳಾದರೂ ಸೇರಿಕೊಳ್ಳಬಹುದು. ಗಂಡುಮಕ್ಕಳು, ಹೆಣ್ಣಮಕ್ಕಳು ಎಲ್ಲರೂ ಈ ಆಟವನ್ನು ಆಡುತ್ತಾರೆ. ಒಟ್ಟಿಗೆ ಅಥವಾ ಕೆಲವೊಮ್ಮೆ ಪ್ರತ್ಯೇಕವಾಗಿಯೂ ಆಡುತ್ತಾರೆ. ಹೊರಾಂಗಣ ಹಾಗೂ ಒಳಾಂಗಣ ಎರಡೂ ಕಡೆಗಳಲ್ಲಿ ಆಡಲಾಗುತ್ತದೆ. ಬೇಸಿಗೆಯ ಸಮಯದಲ್ಲಿ ಸಾಧಾರಣವಾಗಿ ಅಂಗಳ, ಮೈದಾನಗಳಲ್ಲಿ, ಮಳೆಗಾಲದಲ್ಲಿ

ಮನೆಯ ಹಜಾರದಲ್ಲಿ ಆಡುತ್ತಾರೆ. ವರ್ಷದ ಎಲ್ಲಾ ಸಮಯದಲ್ಲೂ ಈ ಆಟವನ್ನು ಆಡಲಾಗುತ್ತದೆ. ಬಹಳ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿರುವ ಈ ಆಟದ ಹಿನ್ನೆಲೆಯಲ್ಲಿ 'ಬದುಕೆಂದರೆ ಗೋಲಿ ಆಟವೇನಲ್ಲ' ಎಂಬ ಗಾದೆಯ ಮಾತು ಬಳಕೆಯಲ್ಲಿದೆ. ಉತ್ತರ ಕರ್ನಾಟಕದ ಕಡೆಯಲ್ಲಿ ಈ ಆಟವನ್ನು 'ಗೋಟಿ ಆಟ' ಎಂದೂ ಕರೆಯುತ್ತಾರೆ. ಇದರ ಕುರಿತಾಗಿ ಯಾವುದೇ ಹಾಡು/ಪದ ಬಳಕೆಯಲ್ಲಿಲ್ಲ. ಈ ಆಟಕ್ಕೆ ಬೇಕಾಗುವ ಸಾಮಗ್ರಿಗಳೆಂದರೆ ಗೋಲಿಗಳು ಮತ್ತು ಗೆರೆ ಎಳೆಯುವ ಬಳಪ.

**ಈ ಆಟದಲ್ಲಿ ಸುಮಾರು ಮೂರು, ನಾಲ್ಕು ವಿಧಾನಗಳಿವೆ.**

೧) ಸಮತಟ್ಟಾದ ನೆಲದಲ್ಲಿ ಸಣ್ಣದಾದ ಗುಂಡಿ/ತಗ್ಗು ತೆಗೆದು ಅದಕ್ಕೆ ನೇರವಾಗಿ ೮-೧೦ ಅಡಿ ದೂರದಲ್ಲೊಂದು ಗೆರೆ ಹಾಕಬೇಕು. ಈ ಗೆರೆಯ ಆಚೆ ನಿಂತು ಆಡಬೇಕು. ಸರದಿಯ ಪ್ರಕಾರವಾಗಿ ಆಟಗಾರ ಗೆರೆಯಾಚೆ ನಿಂತು ಗೋಲಿಯನ್ನು ಗುಂಡಿಗೆ ಬೀಳಿಸಬೇಕು. ಅನಂತರ ಹಾಕಿದ ಗೋಲಿಯ ಮೇಲೆ ಮತ್ತೊಂದು ಗೋಲಿಯನ್ನು ಹೊಡೆಯಬೇಕು.

೨) ಸಮತಟ್ಟಾದ ಜಾಗದಲ್ಲಿ ವೃತ್ತಾಕಾರವಾಗಿ ಒಂದು ಗೆರೆಯನ್ನು ಎಳೆಯುತ್ತಾರೆ. ವೃತ್ತದ ಒಂದು ಕಡೆಗೆ ೩-೪ ಅಡಿ ದೂರದಲ್ಲಿ ಅಡ್ಡಗೆರೆಯೊಂದನ್ನು ಎಳೆಯಲಾಗುತ್ತದೆ. ಸರದಿಯಂತೆ ಆಟಗಾರರು ಗೆರೆಯ ಹಿಂದೆ ಕೂತು ವೃತ್ತದೊಳಗೆ ಹರಡಿರುವ ಗೋಲಿಗಳಿಗೆ ಗುರಿಯಿಟ್ಟು ಹೊಡೆಯಬೇಕು. ತಾಗಿದರೆ ಗೆದ್ದಂತೆ, ಹೊಡೆದ ಗೋಲಿ ವೃತ್ತದಿಂದ ಹೊರಹೋಗಬೇಕು.

೩) ಒಂದು ಚಿಕ್ಕ ವೃತ್ತ ಹಾಗೂ ಒಂದು ದೊಡ್ಡ ವೃತ್ತವನ್ನು ನಡುವಿನ ಅಂತರ ೩-೫ ಅಡಿಗಳಷ್ಟಿರುವಂತೆ ಬರೆಯಬೇಕು. ಚಿಕ್ಕವೃತ್ತದ ಗೆರೆಯ ಮೇಲೆ ಹೆಬ್ಬೆರಳನ್ನಿಟ್ಟು ತೋರುಬೆರಳು ಅಥವಾ ಮಧ್ಯದ ಬೆರಳಿನಿಂದ ಇನ್ನೊಂದು ವೃತ್ತದಲ್ಲಿರುವ ಗೋಲಿಗೆ ಹೊಡೆಯಬೇಕು. ವೃತ್ತದಿಂದ ಹೊರಗೆ ಹೋದ ಗೋಲಿಯನ್ನು ಆತ ಗೆದ್ದಂತೆ. ಹಿಂದೆ ಗೋಲಿಯಾಗಿ ಕಾಡುಗಳಲ್ಲಿ ಸಿಗುವ 'ಚಿಟ್ಟೆಗೋಲಿ' ಎಂಬ ಮುಳ್ಳುಬಳ್ಳಿಯ ಕಾಯಿಗಳನ್ನು ಬಳಸುತ್ತಿದ್ದರು. ಅನಂತರದಲ್ಲಿ ಗಾಜಿನ ಗೋಲಿಗಳು ಬಳಕೆಯಲ್ಲಿ ಬಂದವು.

## ೨. ಬುಗುರಿ ಕಳಿ (ಬುಗುರಿ ಆಟ):

ಸಾಮಾನ್ಯವಾಗಿ ಗಂಡು ಮಕ್ಕಳು ಹೆಚ್ಚಾಗಿ ಆಡುವ ಈ ಆಟವನ್ನು ಹೆಣ್ಣುಮಕ್ಕಳೂ, ಕೆಲವೊಮ್ಮೆ ಪುರುಷರೂ ಆಡುತ್ತಾರೆ. ಇದನ್ನು 'ಬುಗುಡಿಯಾಟ' ಎಂದೂ ಕರೆಯುತ್ತಾರೆ. ಇನ್ನೂ ರೂಢಿಯಲ್ಲಿ, ಚಾಲ್ತಿಯಲ್ಲಿರುವ ಗ್ರಾಮೀಣ ಆಟವಾಗಿರುವ ಇದು ಅತಿ ಪ್ರಾಚೀನವಾದ ಆಟವಾಗಿದ್ದು ಸಾಧಾರಣವಾಗಿ ಕರ್ನಾಟಕದ ಎಲ್ಲಾ ಕಡೆಗಳಲ್ಲೂ ಚಾಲ್ತಿಯಲ್ಲಿದೆ. ಈ ಆಟಕ್ಕೆ ಬೇಕಾಗಿರುವ ಸಾಮಗ್ರಿಗಳೆಂದರೆ, ಗೋಲಾಕಾರವಾದ ಮರದ ತುಂಡು, ಚೂಪಾದ ಒಂದು ಮೊಳೆ, ಐದಾರು ಅಂಗುಲ ಉದ್ದದ ದಪ್ಪ ದಾರ.

ಭಾರತದ ಬಹುತೇಕ ಕಡೆಗಳಲ್ಲಿ ಪ್ರಚಲಿತವಾದ ಜನಪದ ಆಟಗಳಲ್ಲಿ ಇದೂ ಒಂದು. ಜಾಗತಿಕ ಜಾನಪದ ಪರಂಪರೆಯಲ್ಲಿ ಈ ಆಟಕ್ಕೆ ತನ್ನದೇ ಆದ ಇತಿಹಾಸವಿದೆ. ಜಪಾನ್, ಚೀನಾ, ನ್ಯೂಜಿಲ್ಯಾಂಡ್‌ಗಳಲ್ಲೂ ಈ ಆಟ ರೂಢಿಯಲ್ಲಿದೆ. ಆಧುನಿಕ ಬುಗುರಿಗಳನ್ನು ಸ್ಪ್ರಿಂಗ್‌ಯುಕ್ತವಾಗಿ, ತಿರುಗುವಾಗ ಹಲವು ಬಣ್ಣಗಳು ಕಾಣುವಂತೆ ಮಾಡಿ ಮಕ್ಕಳನ್ನು ಆಕರ್ಷಿಸುವ ಮಾದರಿಯಲ್ಲಿ ತಯಾರಿಸಲಾಗುತ್ತಿದೆ. ಉತ್ತರ ಕರ್ನಾಟಕದ ಕಡೆ ಇದನ್ನು 'ಗಿಚ್ಚ ಬುಗರಿಯಾಟ' ಎಂದೂ ಕರೆಯುತ್ತಾರೆ.

ದೇಹವನ್ನು ತಿರುಗುವ ಬಣ್ಣದ ಬುಗುರಿಗೆ ಹೋಲಿಸುವ ಕ್ರಮ ಜನಪದದಲ್ಲಿದೆ. ಹಾಗೆಯೇ ಸಿಟ್ಟು ಬಂದಾಗ ನಿನ್ನನ್ನು ಬುಗುರಿಯಂತೆ ತಿರುಗಿಸಿಬಿಡುತ್ತೇನೆ ಎಂಬ ಸಾಹಸದ ಮಾತನ್ನೂ ಆಡುವುದು ರೂಢಿಯಲ್ಲಿದೆ.

ಆಟವಾಡುವಾಗ ಗೋಲಾಗಿ ಕೆತ್ತಿದ ಕಟ್ಟಿಗೆಯ ತುಂಡೊಂದರ ಕೆಳಭಾಗವನ್ನು ಚೂಪಾಗಿಸಿ ಅದಕ್ಕೆ ಚೂಪಾದ ಮೊಳೆಯನ್ನು ಜಡಿಯಬೇಕು. ಬುಗುರಿ ತಿರುಗಲು ಕೆಳಭಾಗದಲ್ಲಿರುವ ಈ ಮೊಳೆ ಕಾರಣ. ಐದಾರು ಅಂಗುಲ ಉದ್ದದ ದಪ್ಪದಾರವನ್ನು ಬುಗುರಿಗೆ ಸುತ್ತಿ ಜಾಣ್ಮೆಯಿಂದ ಜೋರಾಗಿ ಎಳೆಯಬೇಕು. ಆಗ ಬುಗುರಿ ನೆಲದ ಮೇಲೆ ತಿರುಗಲಾರಂಭಿಸುತ್ತದೆ. ಆಟವನ್ನು ಕರಗತ ಮಾಡಿಕೊಂಡವರು ದಾರದ ಸಹಾಯದಿಂದ ಆ ತಿರುಗುವ ಬುಗುರಿಯನ್ನು ಅಂಗೈಗೆ ತೆಗೆದುಕೊಂಡು ತಿರುಗಿಸುತ್ತಾರೆ. ಆಟವಾಡುವ ರೀತಿಯಲ್ಲಿ ಹೆಚ್ಚಿನ ವ್ಯತ್ಯಾಸಗಳಿಲ್ಲದಿದ್ದರೂ ಆಟಕ್ಕೆ ವಿಭಿನ್ನ ಬುಗುರಿಗಳನ್ನು ಬಳಸುತ್ತಾರೆ. ಆವುಗಳಿಗೆ ಬಣ್ಣದ ಬುಗುರಿ, ಮೊರೆಯುವ ಬುಗುರಿ, ಗೂಟಬುಗುರಿ, ಸಪಾಟ ಬುಗುರಿ ಎಂದೆಲ್ಲಾ ಹೆಸರುಗಳಿವೆ. ಕೆಲವೊಮ್ಮೆ

ಕೊಬ್ಬರಿಯ ಗುಂಡೊಂದರ ಮಧ್ಯದಲ್ಲಿ '+' ಆಕಾರದಲ್ಲಿ ಕಡ್ಡಿಗಳನ್ನು ಕಟ್ಟಿ ಅದರ ಮಧ್ಯಕ್ಕೆ ದಾರವನ್ನು ಪದರಾಗಿ ಕಟ್ಟಿ ತಿರುಗಿಸುತ್ತಾ ಆಡುತ್ತಾರೆ. ಶಾಲೆಗಳಲ್ಲಿ, ಮನೆಗಳಲ್ಲಿ ಹಾಗೇ ದನಕರುಗಳನ್ನು ಕಾಯುವಾಗ ಮಕ್ಕಳು ಹೆಚ್ಚಾಗಿ ಈ ಆಟವನ್ನು ಆಡುವುದನ್ನು ಈಗ ಕಾಣಬಹುದು.

## ೩. ಕಬಡ್ಡಿ ಕಳಿ (ಕಬಡ್ಡಿಯಾಟ):

ಮಕ್ಕಳಿಂದ ಹಿಡಿದು ವಯಸ್ಕರವರೆಗೆ ಆಡುವ ಮಹತ್ವದ ಆಟವಿದು. ಜಾನಪದ ಹಿನ್ನೆಲೆ ಇರುವ ಈ ಆಟದ ನಿಯಮಗಳು ಆರಂಭದಲ್ಲಿ ತುಂಬಾ ಸಡಿಲವಾಗಿದ್ದವು. ಅನಂತರದ ದಿನಗಳಲ್ಲಿ ಈ ಆಟವು ಜಾಗತಿಕ ಮಟ್ಟದಲ್ಲಿ ಬೆಳೆದುನಿಂತಾಗ ಕ್ರೀಡಾನಿಯಮಗಳನ್ನು ಬಿಗಿಗೊಳಿಸಲಾಯಿತು.

ಕೊಡಗಿನ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳೂ ಸೇರಿದಂತೆ ಈ ಆಟವನ್ನು ನಿತ್ಯವೂ ಆಡುತ್ತಿದ್ದು ಮನೆಗಳಲ್ಲಿ, ಸರ್ಕಾರಿ ಶಾಲೆಗಳಲ್ಲಿ ಕಂಡುಬರುತ್ತಿತ್ತು. ಇಂದು ಬಹುತೇಕ ಮಧ್ಯಮವರ್ಗದ, ಶ್ರೀಮಂತವರ್ಗದ ಮಕ್ಕಳು ಕಾನ್ವೆಂಟ್ ಶಾಲೆಗಳಿಗೆ ಹೋಗುವುದರಿಂದ ಕೇವಲ ಬಡವರ ಮಕ್ಕಳ ಆಟವಾಗಿ ಉಳಿದುಕೊಳ್ಳುತ್ತಿದೆ. ಹೀಗಾಗಿ ಇದು ನಶಿಸುವ ಅಂಚಿನಲ್ಲಿರುವ ಆಟವೆನ್ನಬಹುದು.

ಕಾಲಾವಧಿಯ ನಿರುಕಿಲ್ಲದೆ ಸಾಮಾನ್ಯವಾಗಿ ಸಮತಟ್ಟಾದ ಮೈದಾನ ಅಥವಾ ಸ್ಥಳಗಳಲ್ಲಿ ಈ ಆಟವನ್ನು ಆಡುತ್ತಾರೆ. ಇದರಲ್ಲಿ ಪ್ರತೀ ತಂಡದಲ್ಲಿ ೭ ಅಥವಾ ೯ ಆಟಗಾರರಿರುತ್ತಾರೆ. ಹಳೆಯ ಆಟಗಳಲ್ಲಿ ಒಂದಾದ ಇದನ್ನು ಆಡಲು ಯಾವುದೇ ಸಾಮಗ್ರಿಗಳು ಬೇಕಾಗಿಲ್ಲ. ಕರ್ನಾಟಕದ ಎಲ್ಲಾ ಕಡೆಗಳಲ್ಲೂ ಇದನ್ನು 'ಕಬಡ್ಡಿ' ಆಟವೆಂದೇ ಕರೆಯಲಾಗುತ್ತದೆ.

ಸಮತಟ್ಟಾದ ಮೈದಾನದಲ್ಲಿ ಸುಮಾರು ೧೩ ಮೀಟರ್ ಉದ್ದ ಮತ್ತು ೧೦ ಮೀಟರ್ ಅಗಲವಿರುವ ಹಾಗೆ ಚೌಕವಾಗಿ ಗೆರೆಯನ್ನು ಹಾಕಲಾಗುತ್ತದೆ. ಅನಂತರ ಇದನ್ನು ಸಮಭಾಗವಮಾಡಿ ಮಧ್ಯದಲ್ಲಿ ಒಂದು ಗೆರೆಯನ್ನು ಹಾಕಲಾಗುತ್ತದೆ. ಮಧ್ಯಗೆರೆಯಿಂದ ಸುಮಾರು ಎರಡೂವರೆ ಮೀಟರ್ ಅಂತರದಲ್ಲಿ ಎರಡೂ ಕಡೆಗಳಿಗೂ ಒಂದೊಂದು ಗೆರೆಗಳನ್ನು ಹಾಕಲಾಗುತ್ತದೆ. ಇವುಗಳನ್ನು 'ಜೀವಗೆರೆ'ಗಳು ಎನ್ನುತ್ತಾರೆ. ಯಾರು ಮೊದಲು ಆಡುತ್ತಾರೆ ಎಂಬುದನ್ನು ಎರಡು ಗುಂಪಿನ

ಮುಖಂಡರು ಸೇರಿ ಟಾಸ್ ಹಾಕಿಸುವ ಮೂಲಕ ನಿರ್ಧರಿಸುತ್ತಾರೆ. ಅನಂತರದಲ್ಲಿ ಪ್ರತಿತಂಡದ ಸದಸ್ಯರು ತಾವು ಆಯ್ಕೆಮಾಡಿಕೊಂಡ ಮನೆಯ 'ಜೀವಗೆರೆ'ಯ ಹಿಂದೆ ನಿಲ್ಲುತ್ತಾರೆ. ಆಟ ಆರಂಭವಾದಾಗ ತಂಡದಿಂದ ಒಬ್ಬ ಕಬಡ್ಡಿ.... ಕಬಡ್ಡಿ.... ಎನ್ನುತ್ತಾ ಮುಂದೆ ಬಂದು ಜೀವಗೆರೆಯನ್ನು ಮುಟ್ಟಿ, ವಿರುದ್ಧ ತಂಡದ ಸದಸ್ಯರನ್ನು ಮುಟ್ಟಿ ಮಧ್ಯಗೆರೆಗೆ ಹಿಂತಿರುಗಿ ಬರುತ್ತಾನೆ. ಈತ ಹೀಗೆ ಹೋಗಿ ಮುಟ್ಟಿದ ವಿರುದ್ಧ ತಂಡದ ಸದಸ್ಯರೆಲ್ಲರೂ ಔಟಾಗುತ್ತಾರೆ ಅಥವಾ ಎದುರಾಳಿ ತಂಡದವರು ಈತನನ್ನು ಹಿಡಿದು ಮಧ್ಯಗೆರೆ ಮುಟ್ಟದಂತೆ ಮಾಡಿ ಬೀಳಿಸಿದರೆ ಆಗ ಆತ ಔಟಾಗುತ್ತಾನೆ. ಎದುರಾಳಿಗಳು ಆಟಗಾರರನ್ನು ಹಿಡಿಯಲು ಬಂದಾಗ ನಿರ್ದಿಷ್ಟಪಡಿಸಿದ ಗೆರೆಯಿಂದ ಹೊರಗಡೆ ಕಾಲಿಟ್ಟರೆ ಆ ತಂಡ ಔಟಾಗುತ್ತದೆ. ತಂಡದಲ್ಲಿ ಔಟಾದವರ ಸಂಖ್ಯೆಯ ಮೇರೆಗೆ ಸೋತ, ಗೆದ್ದ ತಂಡವನ್ನು ಆಯ್ಕೆಮಾಡಲಾಗುತ್ತದೆ.

ಈ ಆಟದಲ್ಲಿ ದೀರ್ಘವಾಗಿ ಉಸಿರು ಬಿಗಿಹಿಡಿಯುವ ಶಕ್ತಿ ಇರುವವರು, ಜಾಣತನದಿಂದ ಎದುರಾಳಿಗಳಿಂದ ತಪ್ಪಿಸಿಕೊಳ್ಳುವವರು, ಜೊತೆಗೆ ಉತ್ತಮ ದೇಹ ಸಿರಿಯನ್ನು ಹೊಂದಿದವರು ಶ್ರೇಷ್ಟ ಆಟಗಾರರಾಗುತ್ತಾರೆ. ದೈಹಿಕ ಮತ್ತು ಮಾನಸಿಕ ಶಕ್ತಿಯನ್ನು ಒಟ್ಟಿಗೇ ಬೆಳೆಸುವುದರ ಮೂಲಕ ವ್ಯಕ್ತಿಯಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುವಲ್ಲಿ ಈ ಆಟ ಹೆಚ್ಚು ನೆರವಾಗುತ್ತದೆ.

## ೪. ಕಳ್ಳ-ಪೊಲೀಸ್ ಕಳಿ (ಮರ ಕೋತಿ ಆಟ, ಗಿಡ-ಮಂಗನಾಟ):

ಸಾಮಾನ್ಯವಾಗಿ ಬೇಸಿಗೆ ಕಾಲದಲ್ಲಿ, ಹೆಣ್ಣುಮಕ್ಕಳು ಗಂಡುಮಕ್ಕಳು ಎಂಬ ವ್ಯತ್ಯಾಸವಿಲ್ಲದೆ ಸಣ್ಣವರಿದ್ದಾಗ ಸೇರಿ ಆಡುವ ಆಟ. ಈ ಆಟದ ಕುರಿತಂತೆ ಅತ್ಯಂತ ಪ್ರಾಚೀನ ಉಲ್ಲೇಖಗಳಿಲ್ಲದಿದ್ದರೂ ಇದು ಹಳೆಯ ಆಟಗಳಲ್ಲೊಂದು. 'ಕೋತಿ ಆಟ' ಎಂಬ ಅರ್ಥದಲ್ಲಿ 'ಕೋಡಕಳಿ' ಎಂಬ ಹೆಸರಿನ ಪದ ಕೊಡವದಲ್ಲಿದೆ. ಇದೇ ಮುಂದೆ 'ಕಳ್ಳ-ಪೊಲೀಸ್ ಆಟವಾಗಿ ಹೆಸರು ಬದಲಾಗಿರಬಹುದು. ಉತ್ತರ ಕರ್ನಾಟಕದ ಕಡೆಗಳಲ್ಲಿ ಇದನ್ನು ಗಿಡಮಂಗನಾಟವೆಂದು ಕರೆಯುತ್ತಾರೆ. ಈ ಆಟಕ್ಕೆ ಯಾವುದೇ ಹಾಡು, ಪದ ಇರುವುದಿಲ್ಲ. ಆಟವಾಡಲು ಬಳಸುವ ಸಾಮಗ್ರಿ ಎಂದರೆ ಒಂದು ಸಣ್ಣಕೋಲು ಮಾತ್ರ. ಇಂತಿಷ್ಟೇ ಆಟಗಾರರಿರಬೇಕೆಂಬ ನಿಯಮವಿಲ್ಲದೆ, ಸಂಖ್ಯೆಯ

ಮಿತಿ ಇಲ್ಲದೆ ಎಷ್ಟು ಮಕ್ಕಳಾದರೂ ಸೇರಿಕೊಳ್ಳಬಹುದು. ಕನಿಷ್ಟ ಇಬ್ಬರಿರಬೇಕು.

ಅನೇಕ ಕೊಂಬೆಗಳಿರುವ ಮರದ ಕೆಳಗೆ ವೃತ್ತದ ಗೆರೆಯೊಂದನ್ನು ಹಾಕಿ ಅದರ ನಡುವೆ ನಿಂತವನು ತನ್ನೆರಡು ಕಾಲುಗಳ ಮಧ್ಯೆ ಕೋಲೊಂದನ್ನು ಬಗ್ಗಿ ದೂರಹೋಗುವಂತೆ ಎಸೆಯುತ್ತಾನೆ. ಎಸೆದ ನಂತರ ಆತನೂ ಸೇರಿದಂತೆ ಎಲ್ಲರೂ ಮರವೇರುತ್ತಾರೆ. ಮೊದಲೇ ಆರಿಸಿದ್ದ ಕಳ್ಳನಾದವನು ಆ ಕೋಲನ್ನು ಹೆಕ್ಕಿ ತಂದು ವೃತ್ತದಲ್ಲಿಟ್ಟು ಮರಹತ್ತಿ ಯಾರಾದರೊಬ್ಬನನ್ನು ಮುಟ್ಟಬೇಕು. ಎಲ್ಲರೂ ಕೆಳಗಿಳಿದು ಮತ್ತೆ ಹಿಂದಿನಂತೆಯೇ ಆಟ ಮುಂದುವರಿಯುತ್ತದೆ.

ಅಥವಾ ಮರವೇರುವುದರ ಬದಲು ಬಯಲಲ್ಲಿ ಓಡುತ್ತಿರುವವರಲ್ಲಿ ಒಬ್ಬನನ್ನು ಕಳ್ಳನಾಗಿ ಕೋಲು ಹಿಡಿದುಕೊಂಡ ಪೊಲೀಸ್ ಹಿಡಿದು ತರುತ್ತಾನೆ.

"ಆದಿಕವಿ ಪಂಪನಲ್ಲಿ 'ಮರಗೆರಸಿ' ಎಂಬ ಹೆಸರಿನಲ್ಲಿ ಈ ಆಟದ ಪ್ರಸ್ತಾಪ ಬಂದಿದೆ. ಪಂಪಭಾರತದ ದ್ವಿತೀಯ ಆಶ್ವಾಸದಲ್ಲಿ ಭೀಮನನ್ನು ಕಳ್ಳನನ್ನಾಗಿಸಿ 'ಮರಕೋತಿ'ಯಾಡುವ ಸ್ವಾರಸ್ಯಪೂರ್ಣ ವರ್ಣನೆ ಇದೆ. ಕುಮಾರವ್ಯಾಸ ಭಾರತದಲ್ಲೂ ಈ ಆಟದ ಉಲ್ಲೇಖವಿದೆ" (ಜನಪದ ಆಟಗಳು, ಪ್ರ.ಸಂ.ಡಾ.ಎಸ್.ಕೆ.ಕರೀಂಖಾನ್, ೧೯೬೦, ಪು.೧೧).

## ೫. ಕಣ್ಣಾಮುಚ್ಚಾಲೆ ಕಳಿ (ಕಣ್ಣಾಮುಚ್ಚಾಲೆ ಆಟ):

ಇದೊಂದು ಪ್ರಾಚೀನವಾದ ಆಟ. ಇತ್ತೀಚೆಗೆ ಇದು ಮಾಯಾವಾಗುತ್ತಿದ್ದು ನಶಿಸುವ ಅಂಚಿನಲ್ಲಿರುವ ಆಟವಾಗಿದೆ. ಆಟವಾಡಲು ಮಕ್ಕಳ ಗರಿಷ್ಟ ಸಂಖ್ಯೆಯ ಮಿತಿಇಲ್ಲದಿದ್ದರೂ ಕನಿಷ್ಟ ಮೂರು ಜನರಿರಲೇಬೇಕು. ಸಾಮಾನ್ಯವಾಗಿ ಹಿರಿಯರು ಅಂದರೆ ಮಹಿಳೆಯರಲ್ಲಿ ಅಜ್ಜಿ ಅಥವಾ ಅಮ್ಮ ಆಟವಾಡುವ ಮಕ್ಕಳ ನಡುವೆ ಒಬ್ಬರನ್ನು ಆರಿಸಿ (ಚುರುಕಿರುವ, ಗುಂಪಿನಲ್ಲಿ ಸ್ವಲ್ಪ ದೊಡ್ಡವರಾಗಿರುವವರನ್ನೇ ಆರಿಸಲಾಗುತ್ತದೆ) ಅವರ ಕಣ್ಣುಗಳನ್ನು ತನ್ನ ಕೈಗಳಿಂದ ಮುಚ್ಚಿಕೊಂಡು ಜೋರಾಗಿ

"ಕಣ್ಣೇ ಮುಚ್ಚೆ ಕಾಡೆಗೂಡೆ
ಉದ್ದಿನ ಮೂಟೆ ಉರುಳೇ ಹೋಯ್ತು
ನಮ್ಮಯ ಹಕ್ಕಿ ಬಿಟ್ಟೇ ಬಿಟ್ಟೆ
ನಿಮ್ಮಯ ಹಕ್ಕಿ ಅಡಗಿಸಿಕೊಳ್ಳಿ"

ಎಂದು ಹಾಡುತ್ತಾಳೆ ಅಷ್ಟರೊಳಗೆ ಉಳಿದವರೆಲ್ಲಾ ಬೇಕಾದ ಕಡೆಗಳಲ್ಲಿ ಅವಿತುಕೊಂಡಿರುತ್ತಾರೆ. ಕಣ್ಣುಬಿಟ್ಟ ಅನಂತರ ಆ ಮಗು ಅಡಗಿದವರನ್ನು ಹುಡುಕಲು ಹೋದಾಗ ಮೊದಲು ಪತ್ತೆಯಾದವರು ಮತ್ತೆ ಹುಡುಕುವವರಾಗುತ್ತಾರೆ. ಒಂದು ವೇಳೆ ಹುಡುಕುವಾಗ ಯಾರೂ ಸಿಗದೆ ಅಡಗಿಕೊಂಡವರೆಲ್ಲಾ ಬಂದು ಕಣ್ಣುಮುಚ್ಚಿದ್ದ ಅಜ್ಜಿ/ಅಮ್ಮನನ್ನು ಮುಟ್ಟಿದರೆ ಮೊದಲು ಮುಚ್ಚಿಸಿಕೊಂಡವರೇ ಮತ್ತೆ ಕಣ್ಣುಮುಚ್ಚಿಸಿಕೊಂಡು ಹುಡುಕುವವರಾಗಬೇಕಾಗುತ್ತದೆ. ಸಾಧಾರಣವಾಗಿ ಮನೆಯ ಸುತ್ತಲಲ್ಲಿ ಈ ಆಟವನ್ನು ಸಂಜೆಯ ವೇಳೆಯಲ್ಲಿ ಆಡಲಾಗುತ್ತದೆ. ಇದೇ ಆಟವನ್ನು ಮತ್ತೊಂದು ರೀತಿಯಲ್ಲೂ ಆಡಲಾಗುತ್ತದೆ. ಯಾರ ಕಣ್ಣು ಮುಚ್ಚುವುದೆಂದು ತೀರ್ಮಾನಿಸಿದ ಮೇಲೆ ಕಣ್ಣು ಮುಚ್ಚಿದವರು ೧೦, ೨೦, ೩೦, ೪೦, ೫೦, ೬೦, ೭೦, ೮೦, ೯೦, ೧೦೦ ಎಂದು ಹೇಳಿ ಕಣ್ಣು ಬಿಟ್ಟೆ ಎನ್ನುತ್ತಾರೆ. ಆತ ೧೦ ರಿಂದ ೧೦೦ ಹೇಳುವುದರೊಳಗೆ ಉಳಿದವರೆಲ್ಲರೂ ಅಡಗಿಕೊಳ್ಳುತ್ತಾರೆ. ಕಣ್ಣುಮುಚ್ಚಿಕೊಂಡವರು ಅಡಗಿಕೊಂಡವರನ್ನು ಹುಡುಕುತ್ತಾರೆ. ಆತ ಹುಡುಕಿ ಅವರನ್ನು ಮುಟ್ಟುವುದರೊಳಗೆ ಅವರು 'ದಸ್ತೋ' ಹೇಳಿದರೆ ಮತ್ತೆ ಅವರೇ ಕಣ್ಣುಮುಚ್ಚಿಸಿಕೊಂಡು ಅಂಕಿ ಹೇಳಬೇಕು. ಅಕಸ್ಮಾತ್ ಅಡಗಿದವರನ್ನು ಹುಡುಕಿ ಬೆನ್ನುಮುಟ್ಟಿ 'ದಸ್ತೋ' ಹೇಳಿದರೆ ಆಗ ಕಣ್ಣು ಕಟ್ಟಿಸಿಕೊಂಡು ಸಂಖ್ಯೆ ಹೇಳುವ ಸರದಿ ಅವರದಾಗುತ್ತದೆ.

## ೬. ಕಣ್ಣ್‌ಕಟ್ಟಿಕಳಿ (ಕಣ್ಣುಕಟ್ಟು ಆಟ):

ಸಾಮಾನ್ಯವಾಗಿ ಗಂಡುಮಕ್ಕಳು, ಹೆಣ್ಣುಮಕ್ಕಳು ಎಲ್ಲರೂ ಸೇರಿಕೊಂಡು ಮಳೆಗಾಲದಲ್ಲಾದರೆ ಮನೆಯ ಪಡಸಾಲೆಯಲ್ಲಿ, ಬೇಸಿಗೆಯಲ್ಲಾದರೆ ಮನೆಯ ಅಂಗಳದಲ್ಲಿ ಆಡುತ್ತಾರೆ. ಯಾರ ಕಣ್ಣಿಗೆ ಬಟ್ಟೆ ಕಟ್ಟುವುದೆಂದು ತೀರ್ಮಾನ ಮಾಡಿಕೊಂಡು, ಬಿಗಿಯಾಗಿ ಕಣ್ಣಿಗೆ ಬಟ್ಟೆಯನ್ನು ಕಟ್ಟಲಾಗುತ್ತದೆ. ಅನಂತರದಲ್ಲಿ ಅವರನ್ನು ನಿಧಾನವಾಗಿ ಎರಡು ಮೂರು ಸುತ್ತು ತಿರುಗಿಸುತ್ತಾರೆ. ಅನಂತರ ಎಲ್ಲರೂ ದೂರ ಸರಿದು ಚಪ್ಪಾಳೆ ತಟ್ಟುತ್ತಾ ಸುತ್ತಮುತ್ತ ಓಡಾಡುತ್ತಾರೆ. ಆಗ ಕಣ್ಣಿಗೆ ಬಟ್ಟೆಕಟ್ಟಿಕೊಂಡವರು ಅವರನ್ನು ಹೋಗಿ ಮುಟ್ಟಬೇಕು. ಆಟಕ್ಕೆ ಎಷ್ಟು ಜನರಾದರೂ ಇರಬಹುದು. ಅವರೆಲ್ಲಾ ಅಲ್ಲೇ ಸುತ್ತ ಮುತ್ತ ಮಾತಾಡಿಕೊಂಡು, ಓಡಾಡಿಕೊಂಡಿರುತ್ತಾರೆ. ಅವರ ಧ್ವನಿ, ನಗು, ಮಾತನ್ನು ಕೇಳುತ್ತಾ ಅವರಿರುವ ಕಡೆಗೆ

ನಿಧಾನವಾಗಿ ಸಾಗಿ ಮುಟ್ಟಲು ಪ್ರಯತ್ನಿಸುತ್ತಾರೆ. ಹೀಗೆ ಹುಡುಕುತ್ತಾ ಯಾರನ್ನಾದರೂ ಮುಟ್ಟಿದರೆ ಮುಂದಿನ ಸಲಕ್ಕೆ ಅವರು ಕಣ್ಣುಕಟ್ಟಿಕೊಳ್ಳಬೇಕು. ಹೀಗೆ ಆಟ ಮುಂದುವರೆಯುತ್ತದೆ. ಕಣ್ಣುಕಟ್ಟಿ ಆಡುವುದರಿಂದ ಸಾಧಾರಣವಾಗಿ ಹೆಚ್ಚು ವಸ್ತುಗಳಿಲ್ಲದ ಬಯಲಿನಲ್ಲಿ ಆಡಲಾಗುತ್ತದೆ. ಇದರಿಂದ ಹುಡುಕುವವರು ಎಡವಿ ಬೀಳುವುದು ತಪ್ಪುತ್ತದೆ.

ಇನ್ನೊಂದು ಬಗೆಯ ಆಟದಲ್ಲಿ ಒಬ್ಬರನ್ನು ಹೊರತುಪಡಿಸಿ ಉಳಿದವರೆಲ್ಲರೂ ಕಣ್ಣಿಗೆ ಬಟ್ಟೆಕಟ್ಟಿಕೊಳ್ಳುತ್ತಾರೆ. ಕಣ್ಣು ಕಟ್ಟಿಕೊಳ್ಳದಿರುವವನು ಅವರೆಲ್ಲರನ್ನೂ ಒಂದು ಬದಿಯಲ್ಲಿ ನಿಲ್ಲಿಸಿ ತಾನು ಮತ್ತೊಂದು ಕಡೆಗೆ ಹೋಗಿ ಅಲ್ಲಿ ಜೋರಾಗಿ ಶಬ್ದ ಮಾಡುತ್ತಾನೆ. ಕಣ್ಣುಕಟ್ಟಿಕೊಂಡವರೆಲ್ಲಾ ಶಬ್ದ ಮಾಡಿದವನನ್ನು ಮುಟ್ಟಲು ಹೋಗುತ್ತಾರೆ. ಆತ ತಪ್ಪಿಸಿಕೊಂಡು ಬೇರೆಕಡೆಗೆ ಹೋಗಿ ಅಲ್ಲಿ ಶಬ್ದ ಮಾಡುತ್ತಾನೆ. ಮುಟ್ಟಲು ಹೋಗುವ ರಭಸದಲ್ಲಿ ಕಣ್ಣುಕಟ್ಟಿಕೊಂಡವರೇ ಒಬ್ಬರನ್ನೊಬ್ಬರು ಹಿಡಿದುಕೊಳ್ಳುತ್ತಾರೆ. ಅಷ್ಟರಲ್ಲಿ ಬೇರೆಕಡೆಯಲ್ಲಿ ಶಬ್ದ ಕೇಳಿದಾಗ ಹಿಡಿದುಕೊಂಡವರನ್ನು ಬಿಟ್ಟು ಎಲ್ಲರೂ ಆ ಕಡೆಗೆ ಸಾಗುತ್ತಾರೆ. ಆಕಸ್ಮಿಕವಾಗಿ ಕಣ್ಣುಬಿಟ್ಟುಕೊಂಡು ಓಡಾಡುವವನನ್ನು ಯಾರಾದರೂ ಕಣ್ಣುಕಟ್ಟಿಕೊಂಡವರು ಮುಟ್ಟಿದರೆ, ಮುಂದಿನ ಸರದಿಯಲ್ಲಿ ಶಬ್ದಮಾಡುವ ಅವಕಾಶ ಅವನದಾಗುತ್ತದೆ. ಮುಟ್ಟಿಸಿಕೊಂಡವನು ಉಳಿದವರೊಂದಿಗೆ ಕಣ್ಣುಕಟ್ಟಿಸಿಕೊಳ್ಳುತಾನೆ. ಇದು ಬಹಳ ಸಂತೋಷ ಕೊಡುವ ಆಟವಾದರೂ ಈ ಕ್ರಮದಲ್ಲಿ ಆಡುವದು ಕಡಿಮೆಯೆ.

## ೭. ಪುಡಿಪ ಕಳಿ (ಹಿಡಿಯೋ ಆಟ):

ಹೆಚ್ಚು ಮಕ್ಕಳು ಗುಂಪು ಸೇರಿಕೊಂಡು ಆಡುವ ಆಟವಿದು. ಸಾಮಾನ್ಯವಾಗಿ ಮನೆಯ ಹೊರಗಿನ ಅಂಗಳದಲ್ಲಿ, ಮೈದಾನಗಳಲ್ಲಿ ಈ ಆಟವನ್ನು ಆಡಲಾಗುತ್ತದೆ. ಹೊರಾಂಗಣದ ಆಟವಾಗಿ ಬೇಸಿಗೆಕಾಲದಲ್ಲಿ ಆಡುತ್ತಾರೆ. ಸಂಖ್ಯೆಯು ನಿರ್ಬಂಧವಿಲ್ಲದಂತೆ ಮಕ್ಕಳೆಲ್ಲರೂ ಅಂಗಳದಲ್ಲಿ ಸೇರುತ್ತಾರೆ. ಅವರಲ್ಲಿ ಯಾರಾದರೂ ಒಬ್ಬರು ಉಳಿದವರನ್ನು ಓಡಿಸಿಕೊಂಡು ಹೋಗಿ ಹಿಡಿಯಬೇಕು. ಮೊದಲು ಹಿಡಿದವರು ಔಟಾಗುತ್ತಾರೆ. ಅನಂತರ ಔಟಾದವರು ಉಳಿದವರನ್ನು ಅಟ್ಟಿಸಿಕೊಂಡು ಹೋಗಿ ಹಿಡಿಯುತ್ತಾರೆ. ಹೀಗೆ ಆಟ ಮುಂದುವರಿಯುತ್ತದೆ. ತನ್ನನ್ನು ಆಕ್ರಮಣಮಾಡಿ

ಹಿಡಿಯಲು ಬರುವವರಿಂದ ತಪ್ಪಿಸಿಕೊಳ್ಳುವ ಚಾಣಾಕ್ಷತನವನ್ನು, ಬದುಕಿನಲ್ಲಿ ಎದುರಾಗುವ ಕಷ್ಟಗಳನ್ನು ಜಾಣತನದಿಂದ ತಪ್ಪಿಸಿಕೊಂಡು ಬಾಳ್ವೆ ನೀಗಿಸುವ ರೀತಿಯನ್ನು ಅಭ್ಯಾಸ ಮಾಡಿಸುವ ಸೂಕ್ಷ್ಮತೆಯನ್ನು ಈ ಆಟದಲ್ಲಿ ಕಾಣಬಹುದಾಗಿದೆ. ಇದೊಂದು ಹಳೆಯ ಆಟವಾಗಿದ್ದು ಇಂದಿಗೂ ಮಕ್ಕಳ ಆಟವಾಗಿ ಶಾಲೆಗಳಲ್ಲಿ, ಮನೆಯಂಗಳದಲ್ಲಿ ಆಡಲಾಗುತ್ತದೆ.

## ೮. ಕೈಚೌಕ ಕಳಿ (ಕರವಸ್ತ್ರದಾಟ):

ಹಳೆಯ ಗ್ರಾಮೀಣ ಆಟಗಳಲ್ಲಿ ಬಹಳ ಮುಖ್ಯವಾದ ಆಟವಿದು. ಸಾಮನ್ಯವಾಗಿ ಬೇಸಿಗೆಯ ಕಾಲದಲ್ಲಿ ಹೆಚ್ಚು ಜನ ಮಕ್ಕಳು ಅಂಗಳ ಅಥವಾ ಮೈದಾನದಲ್ಲಿ ಗುಂಪು ಸೇರಿ ಆಡುವ ಆಟ. ಆಟದಲ್ಲಿ ಇಂತಿಷ್ಟೇ ಮಕ್ಕಳಿರಬೇಕೆಂಬ ಸಂಖ್ಯೆಯ ಮಿತಿ ಇಲ್ಲ. ಆಡಲು ಬಂದ ಮಕ್ಕಳೆಲ್ಲರೂ ವೃತ್ತಾಕಾರವಾಗಿ ಕೂರುತ್ತಾರೆ. ಅವರಲ್ಲಿ ಒಬ್ಬಳು/ನು ಕರವಸ್ತ್ರವನ್ನು ಕೈಯೊಳಗೆ ಅಡಗಿಸಿಕೊಂಡು ವೃತ್ತಾಕಾರವಾಗಿ ಕುಳಿತವರ ಸುತ್ತಲೂ ಸುತ್ತುತ್ತಾನೆ. ಹೀಗೆ ಸುತ್ತುತಿದ್ದು ಯಾರಾದರೂ ಒಬ್ಬರ ಹಿಂದೆ ಕರವಸ್ತ್ರವನ್ನು ಇಟ್ಟು 'ಕರವಸ್ತ್ರಬಿಟ್ಟೆ'ನೆಂದು ಜೋರಾಗಿ ಹೇಳುತ್ತಾ ಸುತ್ತುತ್ತಿರುತ್ತಾಳೆ/ನೆ. ಆಗ ಕುಳಿತವರೆಲ್ಲರೂ ತಮ್ಮ ಬೆನ್ನಹಿಂದೆ ಕರವಸ್ತ್ರ ಇದೆಯೆ ಎಂದು ತಿರುಗಿ ನೋಡಿಕೊಳ್ಳುತ್ತಾರೆ. ಆಗ ಕರವಸ್ತ್ರ ಯಾರ ಹಿಂದೆ ಇದೆಯೋ ಅವರು ಅದನ್ನು ತೆಗೆದುಕೊಂಡು ಜೋರಾಗಿ ಓಡಿ ಕರವಸ್ತ್ರ ಇಟ್ಟವಳ/ನನ್ನು ಸಮೀಪಿಸಿ ಅವರ ಬೆನ್ನಿಗೆ ಗುದ್ದುತ್ತಾಳೆ/ನೆ. ಆಗ ಆತನು ಓಡಿ ತಪ್ಪಿಸಿಕೊಂಡು ತನ್ನನ್ನು ಗುದ್ದಲು ಬಂದವನು ಕುಳಿತಿದ್ದ ಸ್ಥಳದಲ್ಲಿ ಕುಳಿತುಕೊಳ್ಳುತ್ತಾನೆ. ಇನ್ನೊಮ್ಮೆ ಆತ ಈ ವೃತ್ತದ ಸುತ್ತಲೂ ಓಡುತ್ತಾ ಮೊದಲಿನಂತೆ ಆಟ ಪ್ರಾರಂಭವಾಗುತ್ತದೆ. ಒಂದುವೇಳೆ ಯಾರಾದರೂ ಕರವಸ್ತ್ರ ತನ್ನ ಹಿಂದೆ ಇರುವುನ್ನು ಗುರುತಿಸಿ ಎದ್ದು ಓಡದಿದ್ದರೆ ಅದನ್ನು ಇಟ್ಟವನು ಕುಳಿತವರೆಲ್ಲರನ್ನು ಒಮ್ಮೆ ಸುತ್ತಿಬಂದ ಅನಂತರ ಅವನ ಬೆನ್ನಿಗೆ ಗುದ್ದಿ ಆತನನ್ನು ಎಬ್ಬಿಸುತ್ತಾನೆ/ಳೆ. ಹೀಗೆ ಆಟ ಮುಂದುವರಿಯುತ್ತದೆ.

ಇದೇ ಆಟವನ್ನು ಮತ್ತೊಂದು ರೀತಿಯಲ್ಲೂ ಆಡಲಾಗುತ್ತದೆ. ಆಟ ಆಡುವ ಮಕ್ಕಳೆಲ್ಲರೂ ಸೇರಿ ತಮ್ಮಲ್ಲೇ ಎರಡು ಗುಂಪುಗಳನ್ನು ಮಾಡಿಕೊಳ್ಳುತ್ತಾರೆ. ಅನಂತರ ಎರಡೂ ಗುಂಪಿನ ಸದಸ್ಯರಿಗೆ ೧, ೨, ೩, ೪, .......... ಹೀಗೆ ಸಂಖ್ಯೆಯನ್ನು ಅಥವಾ

ಕೆಲವೊಮ್ಮೆ ಹೆಸರನ್ನು ನೀಡಲಾಗುತ್ತದೆ. ಆಟಕ್ಕೆ ಮೊದಲು ಒಂದು ಚಿಕ್ಕ ವೃತ್ತವನ್ನು ಬರೆದು ಅದರೊಳಗೆ ಕರವಸ್ತ್ರವನ್ನು ಇಡುತ್ತಾರೆ. ಎದುರು ಬದುರಾಗಿ ಕರವಸ್ತ್ರಕ್ಕೆ ಸಮಾನ ದೂರದಲ್ಲಿ ಒಂದೊಂದು ಗೆರೆಗಳನ್ನೆಳೆದು ಆಟದ ಹಿಂದೆ ಸಂಖ್ಯೆ ಅಥವಾ ಹೆಸರಿಗನುಗುಣವಾಗಿ ಅನುಕ್ರಮವಾಗಿ ಆಟಗಾರರನ್ನು ನಿಲ್ಲಿಸುತ್ತಾರೆ. ಅನಂತರ ಆಟವಾಡಿಸುವವರು ಯಾವುದಾದರು ಒಂದು ಸಂಖ್ಯೆಯನ್ನು ಕೂಗಿದಾಗ ಅದೇ ಸಂಖ್ಯೆಯ ಎರಡೂ ಗುಂಪಿನಲ್ಲಿರುವ ಮಕ್ಕಳು ಓಡಿಬಂದು ಕರವಸ್ತ್ರವನ್ನು ಎತ್ತಿಕೊಳ್ಳಬೇಕು. ಯಾರು ಹೆಚ್ಚುಸಲ ಕರವಸ್ತ್ರವನ್ನು ತೆಗೆದುಕೊಳ್ಳುತ್ತಾರೋ ಅವರು ಆಟದಲ್ಲಿ ಗೆಲ್ಲುತ್ತಾರೆ. ಇದು ಒಂದು ರೀತಿಯಲ್ಲಿ ಚಾಣಾಕ್ಷತನವನ್ನು, ಮಕ್ಕಳಲ್ಲಿ ಸೂಕ್ಷ್ಮತೆಯನ್ನು ಹೆಚ್ಚಿಸಲು ಸಹಕಾರಿಯಾಗಿರುವ ಆಟ. ಪ್ರಾಥಮಿಕ ಶಾಲಾ ಮಟ್ಟದಲ್ಲಿ ಈಗಲೂ ಸಣ್ಣ ಮಕ್ಕಳು ಈ ಆಟವನ್ನು ಆಡುತ್ತಾರೆ.



## ೯. ಕೋಟೆಕಳಿ (ಕೋಟೆ ಆಟ/ಹಸು-ಹುಲಿ ಆಟ):

ಹೆಚ್ಚು ಜನ ಮಕ್ಕಳು ಸೇರಿ ಯಾವುದೇ ಕಾಲದಲ್ಲೂ ಸಂಖ್ಯೆಯ ನಿರ್ಬಂಧವಿಲ್ಲದೆ ಆಡಬಹುದಾದ ಆಟವಿದು. ಆದರೂ ಹೆಚ್ಚಾಗಿ ಬೇಸಿಗೆಯ ಕಾಲದಲ್ಲಿ ಇದನ್ನು ಆಡಲಾಗುತ್ತದೆ. ಜನಪದ ಕಥನಗೀತೆಯಾಗಿ 'ಹಸು-ಹುಲಿ'ಯ ಗೀತೆ ಪ್ರಸಿದ್ಧವಾಗಿದೆ ಎಂಬುದನ್ನು ಬಿಟ್ಟರೆ ಯಾವುದೇ ಶಾಸನ, ಕಾವ್ಯಗಳಲ್ಲಿ ಈ ಆಟದ ಉಲ್ಲೇಖವಿಲ್ಲ. ಆಟವಾಡಲು ಯಾವುದೇ ಪ್ರತ್ಯೇಕ ಸಾಮಗ್ರಿಗಳ ಅವಶ್ಯಕತೆ ಇಲ್ಲ.


ಆಟವಾಡಲು ಸೇರಿದ ಮಕ್ಕಳೆಲ್ಲಾ ವೃತ್ತಾಕಾರದಲ್ಲಿ ಕೈ, ಕೈ ಹಿಡಿದುಕೊಂಡು ಕೋಟೆಯನ್ನು ರಚಿಸುತ್ತಾರೆ. ಒಬ್ಬರು ಕೋಟೆಯ ಒಳಗಡೆ ನಿಂತು 'ಹಸು'ವಾಗುತ್ತಾರೆ ಮತ್ತೊಬ್ಬರು ಕೋಟೆಯ ಹೊರಗೆ ನಿಂತು 'ಹುಲಿ'ಯಾಗುತ್ತಾರೆ. ಕೋಟೆಯ ಒಳಗಿರುವ ಹಸುವನ್ನು ಹಿಡಿಯಲು ಹುಲಿ ಹೊಂಚುಹಾಕುತ್ತದೆ. ಯಾವುದಾದರೂ ಕಡೆಯಿಂದ ಕೋಟೆಯೊಳಗೆ ನುಗ್ಗಲು ಪ್ರಯತ್ನಿಸುತ್ತದೆ. ಹರಸಾಹಸ ಮಾಡಿ ಯಾವುದಾದರೂ ಒಂದು ಕಡೆಯಲ್ಲಿ ದಾರಿಮಾಡಿಕೊಂಡು ಹುಲಿ ಒಳ ನುಗ್ಗಿ ಹಸುವನ್ನು ಕೋಟೆಯ ಒಳಗಡೆಗೆ ಹಿಡಿದ ಅನಂತರ ಮತ್ತಿಬ್ಬರು ಹಸು, ಹುಲಿಯಾಗುತ್ತಾರೆ. ಹೀಗೆ ಆಟ ಮುಂದುವರಿಯುತ್ತಾ ಹೋಗುತ್ತದೆ.

ದುಷ್ಟಶಕ್ತಿಗಳು ಬಂದಾಗ ಸಾಂಘಿಕ ನೆಲೆಯಲ್ಲಿ ಅದನ್ನು ತಡೆಯಲು ಪ್ರಯತ್ನಿಸುವ, ಹಾಗೆಯೇ ಕೋಮಲ ಅಸಹಾಯಕರನ್ನು ರಕ್ಷಿಸಬೇಕಾದ ಸೂತ್ರವನ್ನು ಸೂಚ್ಯವಾಗಿ ಒಳಗೊಂಡ ಆಟವಾಗಿ ಇದು ಕಂಡುಬರುತ್ತದೆ.

## ೧೦. ಕುದ್‌ರೆಕಳಿ (ಕುದುರೆ ಆಟ):

ಕನಿಷ್ಟ ಇಬ್ಬರು ಅಥವಾ ಮೂರು ಜನ ಮಕ್ಕಳು ಸೇರಿ ಆಡುವ ಆಟವಿದು. ಬಹುತೇಕ ಅಳಿವಿನ ಅಂಚಿನಲ್ಲಿರುವ ಆಟವಾದ ಇದು ಈಗ ಕಂಡುಬರುತ್ತಿಲ್ಲ. ಬಹಳ ಹಳೆಯಕಾಲದ ಆಟವಾದ ಇದನ್ನು ಯಾವುದೇ ಹೆಚ್ಚಿನ ಸಾಮಗ್ರಿಗಳಿಲ್ಲದೆಯೇ ಬೇಸಿಗೆ ಕಾಲದಲ್ಲಿ ಆಡಲಾಗುತ್ತದೆ. ಉತ್ತರ ಕರ್ನಾಟಕದ ಕಡೆಗಳಲ್ಲಿ 'ನೋಡುನೋಡು ತಿಮ್ಮಯ್ಯನಾಟ' ಎಂಬ ಹೆಸರಿನಲ್ಲಿ ಈ ಆಟವನ್ನು ಆಡುತ್ತಾರೆ.

ಇಬ್ಬರು ಒಂದೊಂದು ಕೈಹಿಡಿದುಕೊಂಡದ್ದರ ಮೇಲೆ ಮತ್ತೊಬ್ಬರು ತನ್ನ ಬಲಗಾಲನ್ನು ಹಾಕಿ ಇಬ್ಬರ ಭುಜಗಳನ್ನು ಹಿಡಿದುಕೊಂಡು ಒಂಟಿಕಾಲಲ್ಲಿ ಮುಂದೆ ಮುಂದೆ ಸಾಗುತ್ತಾರೆ. ಆಗ 'ಲಾಟ್‌ಲಾಟ್ ಕುದುರೆ' ಎಂದು ಹೇಳುತ್ತಾ ಹೋಗುತ್ತಾರೆ. ಆಟಗಾರರಾಗಿ ಇಬ್ಬರೇ ಇದ್ದಾಗ ಒಬ್ಬ ತನ್ನ ಎರಡೂ ಕೈಗಳನ್ನು ಹಿಂಬದಿಗೆ ಕಟ್ಟಿಕೊಂಡಾಗ ಮತ್ತೊಬ್ಬ ಆ ಕೈಯೊಳಗೆ ತನ್ನ ಕಾಲನ್ನು ಹಾಕಿ ಇಬ್ಬರೂ ಮುಂದೆ ಹಾಡುತ್ತಾ ಸಾಗುತ್ತಾರೆ. ಒಬ್ಬರ ನಂತರ ಒಬ್ಬರು ಸ್ಥಾನಬದಲಾಯಿಸಿಕೊಂಡು ಈ ಆಟವನ್ನು ಆಡುತ್ತಾರೆ. ಸಾಮಾನ್ಯವಾಗಿ ಕುದುರೆ-ಕೊಡಗಿಗೆ ಅಪರಿಚಿತ ಪ್ರಾಣಿಯಾದರೂ ಕೊಡವ ಭಾಷೆಯಲ್ಲಿ ಸೊಕ್ಕಿದ ಹುಡುಗಿಯರಿಗೆ 'ಕುದುರೆಯಂತಾಡುತ್ತಾಳೆ' ಎಂಬ ಬೈಗುಳದ ಮಾತು ಬಳಕೆಯಲ್ಲಿದೆ.



## ೧೧. ಕೇರ್‌ಬಲಿಪ್ಪೊ(ಹಗ್ಗ-ಜಗ್ಗಾಟ):

ಮಕ್ಕಳ ಜನಪದ ಆಟವಾಗಿ ಆರಂಭದಲ್ಲಿ ಚಾಲ್ತಿಯಲ್ಲಿದ್ದ ಈ ಆಟ ಇಂದು ಗ್ರಾಮೀಣ ಪ್ರದೇಶದ ಆಟಗಳ ನಡುವೆ ಪ್ರಮುಖ ಆಕರ್ಷಣೆಯನ್ನು ಪಡೆದುಕೊಂಡು ವಯಸ್ಕರ ಆಟವಾಗಿಯೂ ಚಾಲ್ತಿಯಲ್ಲಿದೆ. ಕಾಲದ ನಿರ್ಬಂಧವಿಲ್ಲದೆ ಈ ಆಟವನ್ನು ಗಂಡುಮಕ್ಕಳು, ಹೆಣ್ಣುಮಕ್ಕಳೆನ್ನದೆ ಎಲ್ಲರೂ ಆಡುತ್ತಾರೆ. ಬೇಸಿಗೆಯ ಕಾಲದಲ್ಲಿ ಅಂಗಳದಲ್ಲಿ, ಮಳೆಗಾಲದಲ್ಲಿ ಕೆಸರುಗದ್ದೆಯ ನಡುವಿನಲ್ಲಿ ಈ ಆಟವನ್ನು ಆಡುತ್ತಾರೆ.

ಗಂಡುಮಕ್ಕಳು, ಹೆಣ್ಣುಮಕ್ಕಳು ಪ್ರತೀ ಗುಂಪಿನಲ್ಲಿ ಸೇರಿಕೊಂಡು ಆಟವಾಡಿದರೆ ಕೆಲವೊಮ್ಮೆ ಗಂಡುಮಕ್ಕಳು, ಹೆಣ್ಣುಮಕ್ಕಳು ಪ್ರತ್ಯೇಕವಾಗಿಯೇ ಪಂದ್ಯ ಕಟ್ಟುತ್ತಾರೆ, ಆಟವಾಡುತ್ತಾರೆ. ಆಟದಲ್ಲಿ ತೊಡಗಿಸಿಕೊಳ್ಳುವವರು ಎರಡು ಗುಂಪುಗಳಾಗಿ ಒಂದೇ ಹಗ್ಗವನ್ನು ಎರಡು ಕಡೆಗೆ ಜಗ್ಗುತ್ತಾರೆ. ತಮ್ಮ ಕಡೆಗೆ ಹಗ್ಗವನ್ನು ಮತ್ತೊಂದು ಕಡೆಯ ಜನರ ಸಮೇತವಾಗಿ ಎಳೆದುಕೊಂಡಾಗ ಗೆಲುವು ಆ ತಂಡದವರದಾಗುತ್ತದೆ. ಯಾವುದೇ ಸಾರ್ವಜನಿಕ ಕ್ರೀಡಾ ಚಟುವಟಿಕೆಗಳನ್ನು ನಡೆಸುವಾಗಲೂ ಮಕ್ಕಳು, ಮಹಿಳೆಯರು, ಪುರುಷರು, ಹೀಗೆ ಪ್ರತ್ಯೇಕವಾಗಿ ಗುಂಪು ಮಾಡಿ ಪಂದ್ಯದ ಆಟವಾಗಿಯೂ ಇದನ್ನು ಆಡಲಾಗುತ್ತದೆ. ಮೂಲತಃ ಶೌರ್ಯ, ಸಾಹಸಕ್ಕೆ ಹೆಸರಾದ ನಾಡು ಕೊಡಗು. ಗುಂಪಿನಲ್ಲಿ ತಮ್ಮ ಶಕ್ತಿ, ಸಾಮರ್ಥ್ಯವನ್ನು ಪ್ರದರ್ಶಿಸಲು ದೊರಕುವ ಅವಕಾಶವಾಗಿ, ಆತ್ಮಸ್ಥೈರ್ಯವನ್ನು ಹೆಚ್ಚಿಸಿಕೊಳ್ಳಲು ಈ ಆಟ ನೆರವಾಗುತ್ತದೆ.

ಮಳೆಗಾಲದಲ್ಲಿ ಕೆಸರುಗದ್ದೆಗಳ ನಡುವೆ ಈ ಆಟವನ್ನು ಮೇಲಿನ ಕ್ರಮದಂತೆಯೇ ನಡೆಸಲಾಗುತ್ತದೆ. ಆ ಕೆಸರಲ್ಲಿ ಎದ್ದುಬಿದ್ದು ಸಂತೋಷಪಡುವ ಸಂಭ್ರಮ ಆಟಗಾರರದಾಗಿರುತ್ತದೆ. ಈ ಆಟವನ್ನು ನೋಡಲು ಸಾಕಷ್ಟು ಸಂಖ್ಯೆಯಲ್ಲಿ ಪ್ರೇಕ್ಷಕರು ಸೇರುತ್ತಾರೆ.

## ೧೨. ಕೇರ್ ಪಾರುವ ಕಳಿ (ಹಗ್ಗ ಜಿಗಿತದಾಟ):

ಹೆಚ್ಚಾಗಿ ಹೆಣ್ಣುಮಕ್ಕಳು ಈ ಆಟದಲ್ಲಿ ಆಸಕ್ತಿ ತೋರುತ್ತಾರೆ. ಆದರೆ ಗಂಡುಮಕ್ಕಳೂ ಕೂಡ ಈ ಆಟವನ್ನು ಆಡುತ್ತಾರೆ. ಸಣ್ಣವಯಸ್ಸಿನ ಮಕ್ಕಳಿಗಿಂತ ಸ್ವಲ್ಪ ದೊಡ್ಡವರು ಅಂದರೆ ೧೦ ವಯಸ್ಸಿಗೆ ಮೇಲ್ಪಟ್ಟಮಕ್ಕಳು ಈ ಆಟದಲ್ಲಿ ಭಾಗವಹಿಸುತ್ತಾರೆ. ಈ ಆಟವನ್ನು ಎರಡು ರೀತಿಗಳಲ್ಲಿ ಆಡಲಾಗುತ್ತದೆ.

೧) ಒಂದು ಮಾರುದ್ದದ ಹಗ್ಗವನ್ನು ತೆಗೆದುಕೊಂಡು ಅದರ ಎರಡೂ ತುದಿಗಳನ್ನು ಎರಡುಕೈಗಳಲ್ಲಿ ಹಿಡಿದುಕೊಂಡು ಜಿಗಿಯುತ್ತಾ ಮುಂದೆ ಹೋಗಬೇಕು. ಅದೇ ಸಮಯದಲ್ಲಿ ಹಗ್ಗವನ್ನು ಕೈಯಲ್ಲೇ ತಿರುಗಿಸುತ್ತ ಕಾಲಿಗೆ ಮುಟ್ಟುವಂತೆ ಕಾಲಕೆಳಗೆ ಹಾದುಹೋಗುವಂತೆ ತಿರುಗಿಸುತ್ತಾ ಸಾಗಬೇಕು. ಆರಂಭದಲ್ಲಿ ನಿಧಾನವಾಗಿ ಹಗ್ಗವನ್ನು ತಿರುಗಿಸುತ್ತಾ ಹಾರಿದರೆ ಅಭ್ಯಾಸವಾದ ಅನಂತರ ಹಗ್ಗವನ್ನು ತಿರುಗಿಸುತ್ತಾ ವೇಗವಾಗಿ ಓಡುತ್ತಾರೆ. ಹೀಗೆ ಓಡುವ ಸ್ಪರ್ಧೆಯನ್ನು ಕೆಲವೊಮ್ಮೆ ಆಯೋಜಿಸಲಾಗುತ್ತದೆ. ಇದು ವ್ಯಾಯಾಮದ ಭಾಗವಾಗಿಯೂ ಇಂದು ಪ್ರಚಲಿತದಲ್ಲಿದೆ. ಹೆಣ್ಣು ಮಕ್ಕಳಿಗೆ ದೈಹಿಕ ಆರೋಗ್ಯವನ್ನು ನೀಡುವ ಆಟವಾಗಿ ಇದು ಮುಖ್ಯವಾಗುತ್ತದೆ. ಸ್ಪರ್ಧೆ ಏರ್ಪಡಿಸಿದಾಗ ನಿಧಾನವಾಗಿ ಜಿಗಿಯುವ ಸಂದರ್ಭದಲ್ಲಿ ಹೆಚ್ಚುಸಲ ಜಿಗಿದವರು ಗೆಲ್ಲುತ್ತಾರೆ. ವೇಗವಾಗಿ ಜಿಗಿಯುತ್ತಾ ಓಡುವ ಸ್ಪರ್ಧೆಯಲ್ಲಿ ಬೇಗ ಗುರಿಮುಟ್ಟಿದವರು ಗೆಲ್ಲುತ್ತಾರೆ ಎಂಬ ನಿಯಮವಿದೆ.

೨) ಮತ್ತೊಂದು ರೀತಿಯ ಆಟದಲ್ಲಿ ಉದ್ದವಾದ ಹಗ್ಗವನ್ನು ಹಾರುವಷ್ಟು ಎತ್ತರಕ್ಕೆ ಸರಿಯಾಗಿ ಇಬ್ಬರು ಎರಡೂ ತುದಿಗಳಲ್ಲಿ ಹಿಡಿದುಕೊಳ್ಳುತ್ತಾರೆ. ಆಟದಲ್ಲಿ ಭಾಗವಹಿಸುವವರು ನಿಗಧಿಪಡಿಸಿದ ಸ್ಥಳದಿಂದ ಓಡಿಬಂದು ಹಗ್ಗವನ್ನು ಕೈಯಲ್ಲಾಗಲಿ ಕಾಲಲ್ಲಾಗಲೀ ಮುಟ್ಟದೆ ಹಾರಬೇಕು. ಸಾಮಾನ್ಯವಾಗಿ ಈ ರೀತಿಯ ಹಗ್ಗ ಜಿಗಿತವನ್ನು ಸ್ಪರ್ಧೆಯಾಗಿಯೇ ನಡೆಸುವುದಿದೆ. ಮಕ್ಕಳ ವಯಸ್ಸಿಗನುಗುಣವಾಗಿ ಜಿಗಿಯಬೇಕಾದ ಎತ್ತರವನ್ನು ಬದಲಾಯಿಸಲಾಗುತ್ತದೆ. ಒಂಟಿಯಾಗಿ ಹಾಗೂ ಒಟ್ಟಿಗೇ ಹಾರುವ ಕ್ರಮವಿದೆ.

ಹಿಂದಿನ ಕಾಲದಲ್ಲಿ ಹಗ್ಗವಾಗಿ 'ದೋಣಿಕೊಟ್ಟೆ ಬಳ್ಳಿ' ಎಂಬ ಬಳ್ಳಿಯನ್ನು ಬಳಸಲಾಗುತ್ತಿತ್ತು. ಆದರೆ ಈಗ ಈ ಬಳ್ಳಿಯ ಜಾಗವನ್ನು ನೈಲಾನ್ ಹಗ್ಗಗಳು ಆಕ್ರಮಿಸಿಕೊಂಡಿವೆ.

ಈ ಆಟದಲ್ಲಿ ಎಷ್ಟು ಜನರಾದರೂ ಭಾಗವಹಿಸಬಹುದು. ಸಾಮಾನ್ಯವಾಗಿ ಬೇಸಿಗೆಯ ಕಾಲದಲ್ಲಿ ಈ ಆಟವನ್ನು ಹೊರಾಂಗಣದ ಆಟವಾಗಿ, ಅಂಗಳ ಅಥವಾ ಮೈದಾನದಲ್ಲಿ ಆಡಲಾಗುತ್ತದೆ.

ಕೇವಲ ಸಮಯ ಕಳೆಯುವ ಆಟವಾಗಿರದೆ ಇದು ದೈಹಿಕ ಆರೋಗ್ಯವನ್ನು ವರ್ಧಿಸುವ ವ್ಯಾಯಾಮದ ಆಟವಾಗಿಯೂ ಇಂದು ಚಾಲ್ತಿಯಲ್ಲಿದೆ.

## ೧೩. ಬಸ್ ಕಳಿ (ಉಗಿಬಂಡಿಯಾಟ/ಬಸ್ ಆಟ):

ಹಳ್ಳಿಯ ಮಕ್ಕಳೆಲ್ಲ ಸೇರಿ ಸಂಜೆಯ ಹೊತ್ತಿನಲ್ಲಿ ಅಂಗಳ ಅಥವಾ ಮೈದಾನದಲ್ಲಿ ಸಂಖ್ಯೆಯ ಮಿತಿಇಲ್ಲದೆ ಆಡುವ ಆಟವಿದು. ಸಾಮಾನ್ಯವಾಗಿ ಅವರಲ್ಲಿ ಹಿರಿಯನಾದವನು ಮುಂದಿರುತ್ತಾನೆ. ಒಬ್ಬರ ಬೆನ್ನ ಹಿಂದಿನ ಅಂಗಿಯ ತುದಿಯನ್ನು ಮತ್ತೊಬ್ಬ ಹಿಡಿದು ಒಬ್ಬರ ಹಿಂದೆ ಮತ್ತೊಬ್ಬರು ಎಂಟು ಹತ್ತು ಜನ ಸೇರಿ ಅಂಗಳದ ಸುತ್ತಲೂ ಓಡುತ್ತಾ ಸಂಭ್ರಮದಲ್ಲಿ ಆಟವಾಡುತ್ತಾರೆ. ಕೊಡಗಿನಲ್ಲಿ ರೈಲಿನ ಪರಿಚಯ ಇಲ್ಲದಿರುವುದರಿಂದ ಎದುರಿನಲ್ಲಿ ಓಡುವವನು ಚಾಲಕನಾಗಿ ಕೈಗಳನ್ನು ತಿರುಗಿಸುತ್ತಾ ಸಾಗುತ್ತಾನೆ. ಹಿಂದಿನವರೆಲ್ಲಾ ಬಸ್‌ನ ಪ್ರಯಾಣಿಕರಾಗಿರುತ್ತಾರೆ.

ಆಟಕ್ಕೆ ಹೆಚ್ಚಿನ ಜನರಿಲ್ಲದಿದ್ದಾಗ ಇಬ್ಬರೇ ಇದ್ದರೆ ಬಾಳೆಯ ಗಿಡದ ಒಣಗಿದ ನಾರನ್ನು ಹಗ್ಗದಂತೆ ಮಾಡಿ ತುದಿಯಲ್ಲಿ ಗಂಟು ಸೇರಿಸಿ ಕಟ್ಟುತ್ತಾರೆ. ಇದನ್ನು ವೃತ್ತಾಕಾರವಾಗಿ ಮಾಡಿಕೊಂಡು ಇಬ್ಬರೂ ಅದರೊಳಗೆ ಸೇರಿಕೊಳ್ಳುತ್ತಾರೆ. ಹಗ್ಗವನ್ನು ಇಬ್ಬರ ಸೊಂಟಕ್ಕೆ ಬರುವಂತೆ ಇಟ್ಟುಕೊಂಡು ಒಂದು ನಿರ್ದಿಷ್ಟ ಅಂತರದಲ್ಲೇ ಓಡುತ್ತಾ ಹಗ್ಗ ಬೀಳದಂತೆ ಆಡುತ್ತಾರೆ. ಇಬ್ಬರು ಹುಡುಗಿಯರು, ಇಬ್ಬರು ಹುಡುಗರು ಇದ್ದಾಗ ಈ ಆಟವನ್ನು ಆಡುತ್ತಾರೆ.

"ರೈಲು ಬಂಡಿಯ ಪರಿಚಯವಿರುವ ಉತ್ತರ ಕರ್ನಾಟಕದ ಕಡೆಯಲ್ಲಿ ಈ ಆಟವನ್ನು 'ಉಗಿಬಂಡಿ' ಆಟವೆನ್ನುತ್ತಾರೆ. ಈ ಆಟದಲ್ಲಿ ಎದುರುಗಡೆಯಲ್ಲಿದ್ದು ಓಡುವವನು 'ಇಂಜಿನ್' ಆದರೆ ಉಳಿದವರೆಲ್ಲಾ ಅವನ ಹಿಂಬದಿಯ ಅಂಗಿಯನ್ನು ಹಿಡಿದುಕೊಂಡು ರೈಲಿನ ಡಬ್ಬಿಗಳಾಗುತ್ತಾರೆ. ಇಂಜಿನ್ ಆದವನು ಕ್ಕೂ....... ಕ್ಕೂ....... ಎಂದು ಸಿಳ್ಳೆಹಾಕುತ್ತಾ ಸಾಗುತ್ತಾನೆ. ಉಳಿದವರೆಲ್ಲಾ ಚುಕ್-ಬುಕ್, ಚುಕ್-ಬುಕ್ ಎಂದು ಶಬ್ದಮಾಡುತ್ತಾ ಎಲ್ಲರೂ ಒಮ್ಮೆ ನೇರವಾಗಿ, ಒಮ್ಮೆ ಅಂಕುಡೊಂಕಾಗಿ

ರೈಲಿನಂತೆ ಸಾಗಿ ಸ್ಟೇಶನ್ ಬಂತೆಂದು ಒಂದು ಕಡೆಯಲ್ಲಿ ನಿಲ್ಲುತ್ತಾರೆ". (ಜಾನಪದ ಆಟಗಳು, ಡಾ.ಮಲ್ಲಿಕಾರ್ಜುನ ಸಂ. ಮೇತ್ರಿ, ಪು.೪೦).

ಮಕ್ಕಳು ಯಾವುದೇ ಆಯಾಸವಿಲ್ಲದೆ, ಕಷ್ಟದ ಕಸರತ್ತಿಲ್ಲದೆ ಸಂತೋಷದಲ್ಲಿ, ಬೀಳುವ, ಏಳುವ ಭಯವಿಲ್ಲದೆ ಆಡುವ ಆಟವಾಗಿ ಜನಪ್ರಿಯವಾಗಿದೆ. ಹೀಗಾಗಿ ಈ ಆಟವನ್ನು ಮಕ್ಕಳು ಪ್ರೀತಿಯಿಂದ ಆಡುತ್ತಾರೆ.



## ೧೪. ದೋಣಿ ಕಳಿ (ದೋಣಿಯಾಟ):

ಇದು ಮಳೆಗಾಲದಲ್ಲಿ ಆಡುವ ಆಟ. ಮಳೆನಿಂತಿರುವಾಗ ಅಂಗಳದಲ್ಲಿ ಅಲ್ಲಲ್ಲಿ ನೀರು ನಿಂತ ಗುಂಡಿಯಲ್ಲಿ ಕಾಗದದಲ್ಲಿ ದೋಣಿಯ ಆಕಾರಮಾಡಿ ತೇಲಿ ಬಿಟ್ಟು ಯಾವ ದೋಣಿ ಮುಳುಗಿತು, ಯಾವ ದೋಣಿ ದೂರಕ್ಕೆ ತೇಲಿತು ಎಂದು ನೋಡುತ್ತಾ ಆಡುವ ಆಟ. ಸಣ್ಣ ಮಕ್ಕಳು ಈ ಆಟವನ್ನು ಮನೆಯ ಮುಂದಿನ ಅಂಗಳದ ನಿಂತ ನೀರಿನಲ್ಲಿ ಆಡಿದರೆ ಸ್ವಲ್ಪ ದೊಡ್ಡ ಮಕ್ಕಳು ಮನೆಯ ಸಮೀಪದ ತೋಡಿನ ನೀರಿಗೆ ಕಾಗದದ ದೋಣಿಮಾಡಿ ಬಿಟ್ಟು ಬದಿಯ 'ಏರಿ'ಯ/ತೆವುರಿಯ ಮೇಲೆ ದೂರದವರೆಗೆ ಓಡುತ್ತಾ ಯಾರ ದೋಣಿ ಮುಳುಗದೆ ಸಾಗುತ್ತದೆ ಎಂದು ನೋಡುತ್ತಾ ಆಡುತ್ತಾರೆ.

ಇತ್ತೀಚೆಗೆ ಈ ಅಟ ಹೆಚ್ಚಾಗಿ ಆಡುವುದು ಕಂಡುಬರುತ್ತಿಲ್ಲವಾಗಿ ನಶಿಸುವ ಅಂಚಿನಲ್ಲಿರುವ ಆಟವೆಂದು ಹೇಳಬಹುದು.

## ೧೫. ಪಾಸ್‌ಫ್ಯೆಲ್ ಕಳಿ (ಪಾಸ್ ಫ್ಯೆಲ್ ಆಟ):

ಇದು ಬಹುಪಾಲು ನಶಿಸಿಹೋಗಿರುವ ಆಟ. ಎರಡು ಕಾಗದದ ಚೂರುಗಳನ್ನು ತೆಗೆದುಕೊಂಡು ಒಂದರಲ್ಲಿ 'ಪಾಸ್' ಮತ್ತೊಂದರಲ್ಲಿ 'ಫ್ಯೆಲ್' ಎಂದು ಬರೆದು ಆ ಕಾಗದವನ್ನು ಒದ್ದೆ ಮಣ್ಣಿನೊಳಗೆ ಸೇರಿಸಿ ಉಂಡೆಮಾಡಿ ತೋಡಿನ ಬದಿಯಲ್ಲಿ ಬಿಡಲಾಗುತ್ತದೆ. ಯಾವ ಉಂಡೆ ಮೊದಲು ಒಡೆದು ಕಾಗದದ ಚೂರು ಮೇಲೆ ಬರುವುದೋ ಅದು ಸತ್ಯವೆಂದು ನಂಬಲಾಗುತ್ತದೆ. ಆಟವಾಡುವ ಎಲ್ಲರೂ ಹೀಗೆ ಮಾಡಿ ಆಡುತ್ತಾರೆ.

ಈ ಆಟದ ಹೆಸರು ನೋಡಿದರೆ ಶಾಲಾಶಿಕ್ಷಣ ಆರಂಭವಾದ ಅನಂತರದಲ್ಲೇ ಚಾಲ್ತಿಗೆ ಬಂದಿರುವಂತೆ ಕಾಣುತ್ತದೆ. ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದರ ಕುರಿತ ಭಯದಲ್ಲಿ ನಂಬಿಕೆಯನ್ನು ಹುಟ್ಟಿಸಿಕೊಳ್ಳಲು, ಪಾಸಾಗುವ ಭರವಸೆಯನ್ನು ತುಂಬಿಕೊಂಡು ನಿರಾತಂಕವಾಗಿರುವ ನೆಲೆಯಲ್ಲಿ ಇಂತಹ ಆಟಗಳು ಹುಟ್ಟಿಕೊಳ್ಳುವ ಸಾಧ್ಯತೆಯನ್ನು ಕಾಣುತ್ತೇವೆ. ಹೀಗೆಯೇ ಕೈಯ ಯಾವುದಾದರೂ ಎರಡು ಬೆರಳುಗಳಲ್ಲಿ ಒಂದಕ್ಕೆ ಪಾಸ್ ಮತ್ತೊಂದಕ್ಕೆ ಫ್ಯೆಲ್ ಎಂದು ಹೇಳಿ ಯಾರಿಂದಾದರೂ ಯಾವುದಾದರೊಂದು ಬೆರಳನ್ನು ಮುಟ್ಟಿಸಿಕೊಳ್ಳಲಾಗುತ್ತದೆ. ಅನಂತರ ಹಾಗೇ ಆಗುವುದೆಂದು ನಂಬಲಾಗುತ್ತದೆ. ಮೇಲೆ ತಿಳಿಸಿದ ಆಟ ಈಗ ಬಳಕೆಯಲ್ಲಿ ಕಂಡುಬರುವುದಿಲ್ಲ. ಆದರೆ ಬೆರಳುಗಳಲ್ಲಿ ಗುರುತಿಸುವ ಕ್ರಮವನ್ನು ಮಕ್ಕಳು ಈಗಲೂ ಆಡುತ್ತಾರೆ.

## ೧೬. ಆನೆ ಕಳಿ (ಆನೆ ಆಟ):

ಮಕ್ಕಳೇ ಸೇರಿಕೊಂಡು, ಕೆಲವೊಮ್ಮೆ ದೊಡ್ಡವರು ಮಕ್ಕಳನ್ನು ಆಡಿಸುವ ಆಟವಿದು. ಆನೆಯಾಗುವವರು ನಾಲ್ಕು ಕಾಲಿನಂತೆ ಮೊಣಕಾಲುಗಳನ್ನು ನೆಲಕ್ಕೆ ತಾಗಿಸಿ, ಕೈಗಳನ್ನು ನೆಲದಲ್ಲಿ ಊರಿಕೊಂಡು ತಲೆಯನ್ನು ಅಲ್ಲಾಡಿಸಿಕೊಂಡು ಬೆನ್ನ ಮೇಲೆ ಚಿಕ್ಕ ಮಕ್ಕಳನ್ನು ಕೂರಿಸಿಕೊಂಡು 'ಆನೆಬಂತು ದಾರಿ ಬಿಡಿ' ಎಂದು ಹೇಳುತ್ತಾ ಮುಂದೆ ಸಾಗುತ್ತಾರೆ. ಸಾಮಾನ್ಯವಾಗಿ ಒಳಾಂಗಣದ ಆಟವಾಗಿ ಇದನ್ನು ಆಡಲಾಗುತ್ತದೆ. ದೊಡ್ಡಮಕ್ಕಳೊಂದಿಗೆ ಓಡುತ್ತಾ, ನೆಗೆಯುತ್ತಾ ಆಟವಾಡಲಾಗದ ಸಣ್ಣಮಕ್ಕಳನ್ನು ಬೆನ್ನಲ್ಲಿ ಕೂರಿಸಿಕೊಂಡು ದೊಡ್ಡವರು ಈ ಆಟವಾಡಿಸುತ್ತಾರೆ. ಆಗ ಮಗು ಆನೆಯ ಬೆನ್ನಮೇಲೆ

ಕುಳಿತಿರುವಂತೆ ಸಂತೋಷಪಡುತ್ತದೆ. ಹಠಮಾರಿಗಳಾಗಿ ಅಳುವ ಮಕ್ಕಳನ್ನು ಖುಷಿಗೊಳಿಸಲು ಈ ಆಟ ಸಹಕಾರಿ.

## ೧೭. ಯಾಪಾರಬೆನ್ನ್ ಕಳಿ (ವ್ಯಾಪಾರಬೆನ್ನಾಟ/ಉಪ್ಪು ಮೂಟೆ ಆಟ):

ನೆಲದಲ್ಲಿ ಇನ್ನೂ ಸರಿಯಾಗಿ ಓಡಾಡಲೂ ಆಗದೆ, ಆಟವಾಡುವ ಮನಸ್ಸಿರುವ ಮಕ್ಕಳು ರಂಪಾಟ ಮಾಡಿದಾಗ ಅವರನ್ನು ಸಂತೋಷಪಡಿಸಲು ಈ ಆಟವನ್ನು ಆಡುತ್ತಾರೆ. ಕೆಲವೊಮ್ಮೆ ದೊಡ್ಡವರು ಬೆನ್ನಲ್ಲಿ ಈ ಮಗುವನ್ನು ಹೊತ್ತುಕೊಂಡು/ ತೂಗಿಸಿಕೊಂಡು ಮಗುವಿನ ಕಾಲುಗಳೆರಡನ್ನು ತನ್ನ ಸೊಂಟದ ಸುತ್ತಲೂ, ಕೈಗಳನ್ನು ಕೊರಳಿನ ಸುತ್ತಲೂ ಹಾಕಿಸಿಕೊಂಡು ತೂಗುತ್ತಾ ಎದುರಿರುವವರನ್ನು ಉಪ್ಪುಮೂಟೆ ಬೇಕಾ, ಮೆಣಸಿನ ಮೂಟೆ ಬೇಕಾ ಎಂದು ಕೇಳುತ್ತಾ ಹೋಗುತ್ತಾರೆ. ಎಲ್ಲರೂ ಬೇಡ, ಬೇಡ ಎಂದಾಗ ಮತ್ತೆ ಕೇಳುತ್ತಾ ಮುಂದೆ ಹೋಗುತ್ತಾರೆ. ಬೇಕು ಎಂದವರ ಮಡಿಲಿಗೆ ಈ ಮಗುವನ್ನು ಇಳಿಸಿಕೊಡುತ್ತಾರೆ. ಹೀಗೆ ದೊಡ್ಡ ಮಕ್ಕಳು ಸಣ್ಣಮಕ್ಕಳನ್ನು ಹೊತ್ತುಕೊಂಡು ಈ ಆಟವನ್ನು ಆಡುತ್ತಾರೆ. ಮನೆಮನೆಗಳಿಗೆ ಬೆನ್ನಮೇಲೆ ಹೊರೆ ಹೊತ್ತುಕೊಂಡು ಪದಾರ್ಥಗಳನ್ನು ಮಾರುತ್ತಾ ಹೋಗುವ ವ್ಯಾಪಾರಿಗಳನ್ನು ಅನುಕರಿಸುವಂತೆ ಈ ಆಟ ಹುಟ್ಟಿಕೊಂಡಿದೆ.

ಇದೇ ಆಟವನ್ನು ದೊಡ್ಡಮಕ್ಕಳು ಮತ್ತೊಂದು ರೀತಿಯಲ್ಲಿ ಆಡುತ್ತಾರೆ. ಪರಸ್ಪರ ವಿರುದ್ಧ ದಿಕ್ಕಿನಲ್ಲಿ ನಿಲ್ಲುವ ಮಕ್ಕಳಿಬ್ಬರು ಒಬ್ಬರ ಬೆನ್ನಮೇಲೆ ಮತ್ತೊಬ್ಬರನ್ನು (ಬೆನ್ನಮೇಲೆ ಬೆನ್ನು ಬರುವಂತೆ) ಹೊತ್ತುಕೊಂಡು ಸ್ವಲ್ಪದೂರ ಓಡಿ ಮತ್ತೆ ಇಳಿಸುತ್ತಾರೆ. ಹೀಗೆ ಯಾರು ಹೆಚ್ಚುಸಲಹೊತ್ತುಕೊಂಡು ಗುರಿ ಮುಟ್ಟುತ್ತಾರೋ ಅವರು ಗೆದ್ದಂತೆ. ಇಬ್ಬರೇ ಇದ್ದು ಈ ಆಟವನ್ನು ಆಡುತ್ತಾರೆ. ಕೆಲವೊಮ್ಮೆ ಹೆಚ್ಚು ಮಕ್ಕಳಿದ್ದಾಗ ಗುಂಪುಸೇರಿಕೊಂಡು ಎರಡು ಪ್ರತ್ಯೇಕ ಗುಂಪುಗಳ ನಡುವೆ ಸ್ಪರ್ಧೆ ಇಟ್ಟುಕೊಂಡೂ ಆಡುತ್ತಾರೆ.

ಹಿಂದೆಲ್ಲಾ ಎತ್ತಿನ ಗಾಡಿಗಳಿಗೆ ತುಂಬಿದ ಚೀಲದ ಹೊರೆಗಳನ್ನು ಹೊತ್ತುಹಾಕುವ ರೀತಿಯನ್ನು ಗಮನಿಸಿ ಅದನ್ನು ಅನುಕರಿಸುವಂತೆ ಈ ಆಟ ಹುಟ್ಟಿಕೊಂಡಿರಬಹುದು.

## ೧೮. ಕಾಂವ್ ಕಾಂವ್ ಕೊತ್ತ್ಂಜಿ (ಕಾಗೆ ಆಟ):

ಒಳಾಂಗಣ ಆಟವಾಗಿ ಯಾವುದೇ ಕಾಲದ ನಿರ್ಬಂಧವಿಲ್ಲದೆ ಆಡುವ ಆಟವಿದು. ದೊಡ್ಡವರು ಸಣ್ಣವರನ್ನು ಸೇರಿಸಿ ಈ ಆಟವನ್ನಾಡುತ್ತಾರೆ. ಕೈಯನ್ನು ಐದು ಬೆರಳುಜೊತೆ ಸೇರಿಸುವಂತೆ ಹಿಡಿದುಕೊಂಡು ಮುಂಗೈಯನ್ನು ಮತ್ತೊಂದು ಕೈಯ ಎರಡು ಬೆರಳಿನಿಂದ ಒತ್ತರಿಸಿ ಹಿಡಿದುಕೊಳ್ಳಬೇಕು. ಆಟವಾಡುವವರೆಲ್ಲರೂ ಹೀಗೆ ಕೈಮೇಲೆ ಕೈ ಇಟ್ಟು ಅನಂತರ ಅವರೆಲ್ಲರ ಕೈಮೇಲೆ ಆಟವಾಡಿಸುವವರು ಕೈ ಇಟ್ಟುಕೊಂಡು ಈ ಕೆಳಗಿನಂತೆ ಕೈಗಳನ್ನು ಅಲುಗಾಡಿಸುತ್ತಾ ಹಾಡುತ್ತಾರೆ.

"ಕಾಕೇಕಾ ಕಾಕೇಕಾ, ಕಾಕೆರ ಮಂಗಲ ಎಕ್ಕೇಕಾ
ನಾಳೆಪೊಲಾಕ ನಾರಾಚೆ, ಚೋಮಿಕ್ ಬೆಚ್ಚ ಪಾಚ್ಯುಂಡ್,
ಅದ್‌ನ ಕುಡಿಪಕ್ ದಾರುಂಡ್,
ನಂಗಡ ಚುಪ್ಪಿ ಕುಂಞ್ಯುಂಡ್,
(ಕಾಗೆಕ್ಕಾ ಕಾಗೆಕ್ಕಾ, ಕಾಗೆಯ ಮದುವೆ ಯಾವಾಗ,
ನಾಳೆ ಬೆಳಿಗ್ಗೆ ಭಾನುವಾರ, ದೇವರಿಗಿಟ್ಟ ಹಾಲುಂಟು
ಅದನ್ನು ಕುಡಿಯುವರ್‍ಯಾರುಂಟು,
ನಮ್ಮ ಪುಟ್ಟ ಮಗುವುಂಟು)

ಎಂದು ಹಾಡುತ್ತಾ ಕಕ್ಕುಳಿ, ಕಕ್ಕುಳಿ ಎಂದು ಮಕ್ಕಳಿಗೆ ಕಚಗುಳಿ ಇಟ್ಟು ನಗಿಸುತ್ತಾರೆ.

## ೧೯. ಕಥೆಕಥೆ ಕುಂಬಳ ಕಳಿ (ಕಥೆ ಕಥೆ ಕುಂಬಳ ಆಟ):

ಸಣ್ಣಮಕ್ಕಳಿಗೆ ಕಚಗುಳಿ ಇಟ್ಟು ನಗಿಸುವ ಈ ಮೇಲಿನ ಆಟದಂತೆ ಸ್ವಲ್ಪ ದೊಡ್ಡ ಮಕ್ಕಳಾದರೆ ಕೈಗಳನ್ನು ಒಂದರ ಮೇಲೊಂದರಂತೆ ಇಟ್ಟುಕೊಂಡು ಈ ಕೆಳಗಿನ ಕಥೆಯನ್ನು ಹಾಡಿನಂತೆ ಹಾಡುತ್ತಾ ಆಡುತ್ತಾರೆ. ಆ ಹಾಡು ಹೀಗಿದೆ-

ಕಥೆಕಥೆ ಕುಂಬಳ, ಕಲ್ಲ್ ಮೊಟ್ಟೆ ಓಣಿ
ಕಾಪುಲ್ ಕೋಳಿ, ಕಣ್ಣಿ ಕಾಚಿ
ಕಣ್ಣಿ ಕುಡಿಪಕ್ ಚಳ್ಳೆಕ್ ಪೋನ
ಚಳ್ಳೆಕ್ ಪೋನಲ್ಲಿ ಅಮೆನ ಕಂಡೆ

ಆಮೆನ ಕೆಟ್ಟೊಕ್ ಬಳ್ಳಿಕ್ ಪೋನ
ಬಳ್ಳಿ ಬಲಿಪಕ ಬರೆಕುತ್ತ ಬುದ್ದ,
ಬರೆ ಎನ್ನ್ ತಾತ್, ಮಣ್ಣ್ ತಾತ್
ಮಣ್ಣೆನ್ನ್ ಮಾಡ್ಯ, ಏರಿಕ್‌ಟ್ಟ
ಏರಿ ಎನ್ನ್ ತಾತ್, ಪಿಲ್ಲ್ ತಾತ್
ಪಿಲ್ಲೆನ್ನ್ ಮಾಡ್ಯ, ಪಯ್ಯುಕ್ ಕೊಡ್‌ತ
ಪಯ್ಯು ಎನ್ನ್ ತಾತ್, ಪಾಲ್ ತಾತ್
ಪಾಲೆನ್ನ್ ಮಾಡ್ಯ, ಪಟ್ಟಂಗ್ ಕೊಡ್‌ತ
ಪಟ್ಟ ಎನ್ನ್ ತಾತ್, ಚಾಂದ್ ತಾತ್
ಚಾಂದೆನ್ನ್ ಮಾಡ್ಯ, ಮಾವಂಗ್ ಕೊಡ್‌ತ
ಮಾಂವೆನ್ನ್ ತಾತ್, ಮೋವಳ ತಾತ್
ಮೋವಳೆನ್ನ್ ಮಾಡ್ಯ, ಮಂಗಲ ಕೈಚಂಡ.
(ಕಥೆ ಕಥೆ ಕುಂಬಳ, ಕಲ್ಲು ಮುಳ್ಳು ದಾರಿ
ಕಾಪಿನ ಕೋಳಿಯ ಸಾರನ್ನು ಮಾಡಿ
ಸಾರು ಕುಡಿಯಲು ಚಳ್ಳೆಗೆ ಹೋದೆ
ಚಳ್ಳೆಗೆ ಹೋದಲ್ಲಿ ಆಮೆಯ ಕಂಡೆ
ಆಮೆಯ ಕಟ್ಟಲು ಬಳ್ಳಿಗೆ ಹೋದೆ
ಬಳ್ಳಿ ಎಳೆಯುವಾಗಿ ಬರೆ ಜಾರಿ ಬಿದ್ದೆ
ಬರೆ ಏನು ಕೊಟ್ಟಿತು, ಮಣ್ಣನ್ನು ಕೊಟ್ಟಿತು
ಮಣ್ಣನೇನು ಮಾಡಿದೆ, ತೆವುರಿಗೆ ಹಾಕಿದೆ.
ತೆವುರಿ ಏನು ಕೊಟ್ಟಿತು. ಹುಲ್ಲನ್ನು ಕೊಟ್ಟಿತು
ಹುಲ್ಲನೇನು ಮಾಡಿದೆ, ಹಸುವಿಗೆ ಹಾಕಿದೆ
ಹಸುವೇನು ಕೊಟ್ಟಿತು, ಹಾಲನು ಕೊಟ್ಟಿತು
ಹಾಲನೇನು ಮಾಡಿದೆ, ಬ್ರಾಹ್ಮಣನಿಗೆ ಕೊಟ್ಟೆ
ಬ್ರಾಹ್ಮಣ ಏನು ಕೊಟ್ಟ, ಗಂಧವ ಕೊಟ್ಟ
ಗಂಧವನೇನು ಮಾಡಿದೆ, ಮಾವನಿಗೆ ಕೊಟ್ಟೆ

ಮಾವ ಏನು ಕೊಟ್ಟ, ಮಗಳನು ಕೊಟ್ಟ
ಮಗಳನೇನು ಮಾಡಿದೆ, ಮದುವೆ ಮಾಡಿಕೊಂಡೆ).

ಎಂದು ಹಾಡುತ್ತಾ ಕೈಕುಣಿಸುತ್ತಾ ಆಡುತ್ತಾರೆ. ಸಾಮಾನ್ಯವಾಗಿ ಮಳೆಗಾಲ ಹೆಚ್ಚಾಗಿ ಮನೆಯಿಂದ ಹೊರಗೆ ಹೋಗಲಾಗದ ಸಂದರ್ಭದಲ್ಲಿ ಮನೆಯ ಹಜಾರದಲ್ಲಿ ಅಥವಾ ಒಳಗಡೆಯ ಭಾಗದಲ್ಲಿ ಮಕ್ಕಳು ಈ ಹಾಸ್ಯ ಮಿಶ್ರಿತ ಕಥೆಯೊಂದನ್ನು ಕಥನ ಗೀತೆಯ ರೀತಿಯಲ್ಲಿ ಹಾಡುತ್ತಾ ನಲಿಯುತ್ತಾರೆ. ಒಬ್ಬರ ಕೈಯ ಮೇಲೆ ಮತ್ತೊಬ್ಬರು ಕೈ ಇಟ್ಟುಕೊಳ್ಳುವಾಗ ಬೇಕು ಬೇಕಂತಲೇ ಹಾಡು ಹೇಳುವಾಗ ಜೋರಾಗಿ ಚಿವುಟಿ ಅವರ ನಡುವೆ ಜಗಳವೇರ್ಪಡುವ ಸಂದರ್ಭಗಳೂ ಇರುತ್ತವೆ. ಆಟದ ಮೂಲಕ ಪ್ರಾಸಬದ್ಧವಾದ ಗೀತೆಯನ್ನು ಅಭ್ಯಾಸಮಾಡುವ, ಕಥೆಯನ್ನು ಹಾಡಿನಂತೆ ರಾಗವಾಗಿ ಹೇಳುವ ಅಭ್ಯಾಸವನ್ನು ಮಾಡಿಸುವುದರ ಮೂಲಕ ಮಕ್ಕಳ ಕ್ರಿಯಾಶೀಲತೆ, ನೆನಪಿನಶಕ್ತಿ ಇದರಿಂದ ಹೆಚ್ಚಾಗುತ್ತದೆ.

## ೨೦. ನೀರ್ ಕನ್‌ಚಿಕಳಿ (ನೀರು ಎರಚುವ ಆಟ):

ಸಹಜವಾಗಿಯೇ ಪ್ರಾಕೃತಿಕವಾಗಿ ಹುಟ್ಟಿಕೊಂಡಿರುವ ನದಿ, ತೋಡು, ತೊರೆಗಳಿಂದ ಕೂಡಿರುವ ಕೊಡಗಿನಲ್ಲಿ ನೀರಿನಲ್ಲಿ ಆಡುವುದೆಂದರೆ ಮಣ್ಣಿನಲ್ಲಿ ಆಡಿದಷ್ಟೇ ಸರಳ. ನೀರೊಳಗೆ ಇಳಿದ ಮಕ್ಕಳು, ಒಬ್ಬರ ಮುಖಕ್ಕೆ ಒಬ್ಬರು ನೀರೆರಚಿಕೊಂಡು ಆಟವಾಡಿದಾಗ ಮುಖ ತಿರುಗಿಸಿಕೊಂಡವರು ಸೋತಂತೆ. ಕೆಲವೊಮ್ಮೆ ಎರಡು ಗುಂಪುಗಳನ್ನಾಗಿ ಮಾಡಿಕೊಂಡು ನೀರೆರಚುವ ಆಟವಾಡುತ್ತಾರೆ. ಯಾರು ಕೈ ಸೋತು ಹೋಯಿತೆಂದು ನಿಲ್ಲುತ್ತಾರೋ ಅವರು ಗುಂಪಿನಿಂದ ಹಿಂದೆ ಸರಿಯಬೇಕು. ಕೊನೆಗೆ ಉಳಿಯುವವರು ಆಟದಲ್ಲಿ ಗೆದ್ದಂತೆ. ಮನರಂಜನೆಯೊಂದಿಗೆ ಮಕ್ಕಳಿಗೆ ದೈಹಿಕ ಶ್ರಮವನ್ನು ನೀಡುತ್ತಾ ಒಳ್ಳೆಯ ವ್ಯಾಯಾಮ ನೀಡುತ್ತದೆ. ಮಕ್ಕಳ ದೈಹಿಕ ಬೆಳವಣಿಗೆಗೆ ಅತ್ಯಂತ ಸಹಕಾರಿ.

## ೨೧. ವನ್ನೇರಿ ಟಿವ್ವೇರಿ ಕಳಿ (ಬೆರಳಾಟ):

ಸಣ್ಣಪ್ರಾಯದ ಮಕ್ಕಳು ಆಡುವ ಮುಖ್ಯವಾದ ಒಳಾಂಗಣದ ಆಟವಿದು. ಆಟದಲ್ಲಿ ಪಾಲ್ಗೊಳ್ಳುವ ಮಕ್ಕಳು ತಮ್ಮ ಕೈ ಬೆರಳುಗಳನ್ನು ನೆಲಕ್ಕೆ ಒತ್ತಿ ಹರಡಿಕೊಂಡು

ಕೂರುತ್ತಾರೆ. ಒಬ್ಬರು ಒಂದು ಬದಿಯಿಂದ ಕಿರುಬೆರಳಿನಿಂದಾರಂಭಿಸಿ ಪ್ರತಿಯೊಂದು ಪದಕ್ಕೂ ಒಂದೊಂದು ಬೆರಳನ್ನು ಮುಟ್ಟುತ್ತಾ – "ವನ್ನೇರಿ ಟಿವ್ವೇರಿ ಟಿಕ್ಕೇರಿ ಮ್ಯಾನ್, ಅಪ್ಪೊಂ ಜಪ್ಪೊ ಇಂಗ್ಲಿಷ್ ಮ್ಯಾನ್, ತೊಳ್ಳೊ, ತೊಳ್ಳೊ, ಟ್ವೆಂಟೀ ವನ್, ಆ, ಈ, ಕ್ಲಬ್" ಎಂದಾಗ 'ಕ್ಲಬ್' ಬಂದ ಬೆರಳನ್ನು ಮಡಚಬೇಕು. ಹೀಗೆ ಯಾರ ಒಂದು ಕೈಯ ಎಲ್ಲಾ ಬೆರಳುಗಳು ಮೊದಲು ಮಡಚಲ್ಪಡುತ್ತವೋ ಅವರು ಗೆದ್ದಂತೆ. ಕೊನೆಗೆ ಉಳಿದಿರುವ ಬೆರಳಿನವರೆಗೂ ಇದೇ ಪದವನ್ನು ಪುನರಾವರ್ತನೆಗೊಳಿಸುತ್ತಾ ಮುಂದುವರೆಸಲಾಗುತ್ತದೆ. ಕೊನೆಗೆ ಒಂದೇ ಬೆರಳು ಉಳಿದಾಗ ನೆಲದೊಂದಿಗೆ ಆ ಬೆರಳನ್ನು ಪದಹೇಳಿ ಮಡಚಲಾಗುತ್ತದೆ. ಆಟದಲ್ಲಿ ಕೊನೆಗೆ ಉಳಿದವರು ಮುಂದಿನ ಸಲದ ಆಟಕ್ಕೆ ಪದ ಹೇಳುವವರಾಗುತ್ತಾರೆ. ಹೀಗೆ ಆಟ ಮುಂದುವರಿಯುತ್ತದೆ. ಈ ಪದಗಳ ನಡುವೆ ಬರುವ ಇಂಗ್ಲಿಷ್ ಪದಗಳನ್ನು ಗಮನಿಸಿದಾಗ ಬಹುಶಃ ಬ್ರಿಟಿಷರ ಆಗಮನದ ಅನಂತರದಲ್ಲಿ ಮಕ್ಕಳ ಜನಪದ ಆಟಗಳ ಜೊತೆಯಲ್ಲಿ ಸೇರಿಕೊಂಡಿರುವಂತೆ ಕಂಡುಬರುತ್ತಿದೆ.


## ೨೨. ಕೊಡಮರಿಯೊಕಳಿ (ಲಾಗ ಹೊಡೆಯುವಾಟ):

ಚಿಕ್ಕ ಮಕ್ಕಳಿರುವಾಗಲಿಂದಲೇ ಆಡುವ ಆಟವಿದು. ಮಕ್ಕಳೆಲ್ಲಾ ಗುಂಪುಸೇರಿಕೊಂಡು ಒಬ್ಬೊಬ್ಬರಾಗಿ ಲಾಗ ಹಾಕುತ್ತಾ ವಿನೋದಕ್ಕಾಗಿ ಆಟವಾಡುತ್ತಾರೆ. ಅಂಗಳದಲ್ಲಿ ಮೈದಾನದಲ್ಲಿ ಸಾಮಾನ್ಯವಾಗಿ ಈ ಆಟವನ್ನು ಆಡಲಾಗುತ್ತದೆ. ಎಲ್ಲರೂ ಲಾಗಹಾಕುವಲ್ಲಿ ಸಮರ್ಥರಾದಾಗ ಒಂದು ನಿರ್ದಿಷ್ಟ ರೂಪದ ಅಂತರವನ್ನು ಗುರುತಿಸಿ ಸ್ಪರ್ಧೆಯಾಗಿಯೂ ಇದನ್ನು ಆಡುತ್ತಾರೆ. ಗುರುತುಮಾಡಿದ ದೂರವನ್ನು ಯಾರು ಲಾಗಹೊಡೆಯುತ್ತಾ ಸಾಗಿ ಮೊದಲು ತಲುಪುತ್ತಾರೋ ಅವರು ಗೆಲ್ಲುತ್ತಾರೆ. ಲಾಗ ಹಾಕುವಾಗ ಕೆಲವೊಮ್ಮೆ ಮುಂದಕ್ಕೆ ಹಾಕುವುದರ ಬದಲು ಹಿಂದಕ್ಕೂ ಲಾಗ ಹಾಕುವುದಿದೆ.

ಬೇಸಿಗೆ ಕಾಲದಲ್ಲಿ ಹೊರಗಿನ ಅಂಗಳ, ಮೈದಾನಗಳಲ್ಲಿ ಈ ಆಟವನ್ನು ಆಡಿದರೆ ಕೃಷಿ ಪ್ರಧಾನ ಪ್ರದೇಶವಾದ ಕೊಡಗಿನಲ್ಲಿ ಕುಯಿಲು ಕೆಲಸಮುಗಿಸಿ ಒಕ್ಕಲು ಮಾಡುತ್ತಿರುವಾಗ ಹುಲ್ಲನ್ನು ಮಾತ್ರ ಮೇಟಿಕಂಬದ ಸುತ್ತಲೂ ಹಾಕಿ ದನಗಳಿಂದ ತುಳಿಸಲಾಗುತ್ತದೆ. ಹೀಗೆ ಮೆದುಮಾಡಿದ ಹುಲ್ಲಿನ ಮೇಲೆ ಮಕ್ಕಳು ಮೇಟಿಕಂಬದ

ಸುತ್ತಲೂ ಲಾಗ ಹಾಕುತ್ತಾ, ಕೆಲವೊಮ್ಮೆ ತಲೆಕೆಳಗೆ ಕಾಲು ಮೇಲು ಮಾಡಿ ಲಾಗ ಹಾಕುತ್ತಾ ಆಟವಾಡುತ್ತಾರೆ. ಕೆಳಗಡೆ ಹುಲ್ಲಿರುವುದರಿಂದ ಲಾಗಹಾಕುವ ಅಭ್ಯಾಸವನ್ನು ಮೊದಲು ಮಕ್ಕಳು ಇಲ್ಲೇ ಕಲಿಯುತ್ತಾರೆ.

ಸಾಮಾನ್ಯವಾಗಿ ಕರ್ನಾಟಕದ ಇತರ ಕಡೆಗಳಲ್ಲಿ ಗಂಡುಮಕ್ಕಳ ಆಟವಾಗಿ ಗುರುತಿಸಿಕೊಂಡಿರುವ ಈ ಆಟವನ್ನು ಕೊಡಗಿನಲ್ಲಿ ಹೆಣ್ಣುಮಕ್ಕಳೂ ಆಡುವುದನ್ನು ಕಾಣಬಹುದು. ಇದು ಸಣ್ಣ ಮಕ್ಕಳು ಇಂದಿಗೂ ಆಡುತ್ತಿರುವ ಸಾಮಾನ್ಯ ಆಟವಾಗಿದೆ.



## ೨೩. ತಾರ್‌ಕೋಲ್ ಕಳಿ (ಚಿಣ್ಣಿದಾಂಡು ಆಟ/ಚಿಣ್ಣಿಕೋಲು ಆಟ):

ಇದೊಂದು ಎಲ್ಲಕಡೆ ಆಡುವ ಪ್ರಾಚೀನ ಆಟ. ವಿಶೇಷವೆಂದರೆ ಪಾಶ್ಚಿಮಾತ್ಯದಿಂದ ಪ್ರಾರಂಭವಾಗಿ ವಿಶ್ವದ ಬಹುತೇಕ ರಾಷ್ಟ್ರಗಳಲ್ಲಿ ಅಭಿಮಾನಿಗಳಿಗೆ ನಿಶೆಏರಿಸಿರುವ ಆಧುನಿಕ ಕ್ರೀಡೆಯಾದ 'ಕ್ರಿಕೆಟ್'ನ ಮೂಲಸ್ವರೂಪ ಈ ಚಿಣ್ಣಿದಾಂಡಿನಲ್ಲಿದೆ ಎಂದು ಹೇಳುತ್ತಾರೆ. ಅಲ್ಲಿ ಎರಡು ಭಾಗಕ್ಕೆ ಮೂರು ಮೂರು 'ವಿಕೆಟ್'ಗಳನ್ನು ನೆಟ್ಟು ಅದರ ಮೇಲೆ 'ಬೇಲ್' ಇಡುವುದು, ಈ ಕಡೆಯಿಂದ ಒಬ್ಬ ಕ್ರೀಡಾಪಟು 'ಬಾಲ್'ನಿಂದ 'ಬೇಲ್' ಬೀಳಿಸುವ ಕ್ರಮಕ್ಕೂ, ಚಿಣ್ಣಿದಾಂಡಿನಲ್ಲಿ ಬೇಲ್

ನಂತಿರುವ 'ಚಿಣ್ಣಿ'ಯನ್ನು ಚಿಕ್ಕ ಹಳ್ಳ ಕೊರೆದು ಆ ಹಳ್ಳಕ್ಕೆ ಚೂಪಾದ ಈ ಚಿಣ್ಣಿಯನ್ನು ಇಟ್ಟು ಅದನ್ನು ಎಗರಿಸಿ ದೊಣ್ಣೆಯಿಂದ ಬೀಸಿದರೆ ಈ ಚಿಣ್ಣಿ ಪುಟನೆಗೆದು ದೂರಕ್ಕೆ ಸಿಡಿಯುತ್ತದೆ. ಹೀಗಾಗಿ ದೊಣ್ಣೆ ಬಳಸಿ ಚಿಣ್ಣಿ ಹಾರಿಸುವುದು, ಕ್ರಿಕೆಟ್‌ನಲ್ಲಿ ಬ್ಯಾಟ್ ಬಳಸಿ ಬೇಲ್ ಹಾರಿಸುವುದು ಹೆಚ್ಚು ಕಡಿಮೆ ಒಂದೇ ಬಗೆಯಲ್ಲಿವೆ.

ಚಿಣ್ಣಿದಾಂಡ್‌ಗೂ ಕ್ರಿಕೆಟ್‌ಗೂ ಸಿಗುವ ಮೇಲ್ನೋಟದ ಸಾಮ್ಯ ಏನೇ ಇರಲಿ, ಚಿಣ್ಣಿದಾಂಡು ಅಪ್ಪಟ ಗ್ರಾಮೀಣ ಜನಪದ ಆಟ. ಬಯಲಿನಲ್ಲಿ ಆಡುವ ಈ ಆಟಕ್ಕೆ ಆಟಗಾರರ ಸಂಖ್ಯೆಗೆ ಮಿತಿ ಇಲ್ಲದಿದರೂ ಕನಿಷ್ಟ ಇಬ್ಬರಂತೂ ಬೇಕು. ಕರ್ನಾಟಕದ ವಿವಿಧ ಕಡೆಗಳಲ್ಲಿ ಗಂಡುಮಕ್ಕಳೇ ಇದನ್ನು ಆಡುತ್ತಿದ್ದರೂ ಕೊಡಗು ನಾಡಿನಲ್ಲಿ ಹೆಣ್ಣುಮಕ್ಕಳೂ ಈ ಆಟವನ್ನು ಆಡುವುದುಂಟು. ಕರ್ನಾಟಕದ ಇತರ ಭಾಗಗಳಲ್ಲಿ ಈ ಆಟವನ್ನು 'ಚಿಣಿಫಣಿ' ಎಂದೂ ಸಹ ಕರೆಯುತ್ತಾರೆ.

ಇಬ್ಬರೇ ಇದ್ದಾಗ ಪರಸ್ಪರ ಎದುರಾಳಿಗಳಾಗಿ ಅವರಿಬ್ಬರಿರುತ್ತಾರೆ. ಹೆಚ್ಚು ಮಕ್ಕಳಿದ್ದಾಗ ಒಂದೊಂದು ಗುಂಪು ಮಾಡಿಕೊಂಡು ಆಟವಾಡುತ್ತಾರೆ. ಈ ಆಟಕ್ಕೆ ಬೇಕಾಗುವ ಸಾಮಗ್ರಿಗಳೆಂದರೆ ಸುಮಾರು ಒಂದು ಒಂದೂವರೆ ಅಡಿ ಉದ್ದದ ಕೈಹಿಡಿತಕ್ಕೆ ಸರಿಯಾದ ಒಂದು ಕೋಲು. ಇದನ್ನು 'ಚಿಣ್ಣಿ' ಎನ್ನುತ್ತಾರೆ. ಅನಂತರದಲ್ಲಿ ನೆಲದಲ್ಲಿ ಸುಮಾರು ಅರ್ಧದಿಂದ ಒಂದು ಅಂಗುಲದಲ್ಲಿ ಆಳದ ಗುಂಡಿಯನ್ನು ತೋಡಬೇಕು. ಇದಕ್ಕೆ ಉತ್ತರ ಕರ್ನಾಟಕದಲ್ಲಿ 'ತುಚ್ಚಿ' ಎನ್ನುತ್ತಾರೆ. ಈ ಗುಂಡಿಯ ಮೇಲ್ಭಾಗದಲ್ಲಿ ಅಡ್ಡವಾಗಿ ಚಿಣ್ಣಿಯನ್ನಿಟ್ಟು ಆಟಗಾರ ಅದನ್ನು ಕೈಯಲ್ಲಿರುವ ಕೋಲಿನಿಂದ ಚಿಮ್ಮುತ್ತಾನೆ. ಇವನಿಗೆ ವಿರುದ್ಧವಾಗಿ ಆಡುವವನು ಅದನ್ನು ಕ್ಯಾಚ್ ಹಿಡಿಯಲು ಪ್ರಯತ್ನಿಸುತ್ತಾನೆ. ಸಿಕ್ಕರೆ ಆಟಗಾರ ಔಟ್ ಆಗುತ್ತಾನೆ. ಹಿಡಿಯದಿದ್ದರೆ ಆಟ ಮುಂದುವರೆಯುತ್ತದೆ. ಚಿಣ್ಣಿ ಎಷ್ಟು ದೂರ ಹೋಗಿ ಬಿದ್ದಿದೆ ಎಂಬುದನ್ನು ಒಂದು, ಎರಡು ಸಂಖ್ಯೆಯನ್ನು ಹೇಳುತ್ತಾ ದಾಂಡ್‌ನಿಂದ (ಕೋಲಿನಿಂದ) ಅಳೆಯುತ್ತಾರೆ. ಹೆಚ್ಚಿನ ಎಣಿಕೆ ಬಂದವರು ಗೆದ್ದಂತೆ. ಆಟಗಾರ ಹೊಡೆದ ಚಿಣ್ಣಿ ಗುಂಡಿಯ ಸಮೀಪದಲ್ಲಿ ಬಿದ್ದು ಆ ದೂರವನ್ನು ಎದುರಾಳಿ ಜಿಗಿದರೆ ಆಗ ಆಟಗಾರ ಔಟಾದಂತೆ. ಸಾಮಾನ್ಯವಾಗಿ ಒಬ್ಬ ಆಟಗಾರನಿಗೆ ಚಿಣ್ಣಿಯನ್ನು ಮೂರು ಸಲ ಪುಟಿಸಿ (ಹೊಡೆದು) ಹೊಡೆಯಲು ಅವಕಾಶವಿರುತ್ತದೆ. ಇದೇ ಆಟದ ಭಾಗವಾಗಿ ಚಿಣ್ಣಿಯನ್ನು ಕೈಯಲ್ಲಿ ಹಿಡಿದು, ಮುಖದ ಮೇಲಿಂದ ಬೀಳಿಸಿ, ಕಾಲ ಒಳಬದಿಯಿಂದ ತೆಗೆದು ಬೇರೆಬೇರೆ ರೀತಿಯಲ್ಲಿ ಹೊಡೆಯ

ಲಾಗುತ್ತದೆ. ಇದು ಆಟಗಾರರ ಮಾನಸಿಕ ಸಾಮರ್ಥ್ಯವನ್ನು, ದೈಹಿಕ ಸದೃಢತೆಯನ್ನು ಹೆಚ್ಚಿಸುತ್ತದೆ.

## ೨೪. ಲಗ್ಗೆ ಕಳಿ (ಲಗೋರಿ ಆಟ):

ಜನಪದ ಆಟಗಳ ನಡುವೆ ಬಹಳ ಜನಪ್ರಿಯವಾದ ಆಟವಿದು. ಈಗಲೂ ಚಾಲ್ತಿಯಲ್ಲಿರುವ ಆಟವಿದು. ಇಬ್ಬರಿಗಿಂತ ಹೆಚ್ಚುಮಕ್ಕಳು ಜೊತೆ ಸೇರಿ ಗುಂಪಿನಲ್ಲಿ ಆಡುವ ಆಟವಿದು. ಗರಿಷ್ಟ ಮಿತಿ ಇಲ್ಲದೆ ಎಷ್ಟು ಜನರಾದರೂ ಆಟದಲ್ಲಿ ಭಾಗವಹಿಸಬಹುದು, ಸಾಮಾನ್ಯವಾಗಿ ಮಳೆಗಾಲವನ್ನು ಹೊರತುಪಡಿಸಿ ಉಳಿದ ಎಲ್ಲಾ ಕಾಲದಲ್ಲೂ ಹೊರಾಂಗಣದ ಆಟವಾಗಿ ಇದನ್ನು ಆಡುತ್ತಾರೆ. ಹೆಣ್ಣುಮಕ್ಕಳು, ಗಂಡುಮಕ್ಕಳು ಎಂಬ ಯಾವುದೇ ವ್ಯತ್ಯಾಸವಿಲ್ಲದೆ ಜೊತೆಗೂಡಿ ಗುಂಪಿನಲ್ಲಿ ಕೆಲವೊಮ್ಮೆ ಪ್ರತ್ಯೇಕವಾಗಿ ಆಡುತ್ತಾರೆ. ಪ್ರಾಚೀನ ಕವಿಗಳೂ ತಮ್ಮ ಕಾವ್ಯಗಳಲ್ಲಿ ಕೆಲವಾರು ಜನಪದ ಆಟಗಳ ಉಲ್ಲೇಖ ಮಾಡಿದ್ದಾರೆ. "ನಂಜುಂಡ ಕವಿಯ 'ಕುಮಾರರಾಮ ಸಾಂಗತ್ಯ'ದಲ್ಲಿ ರಾಜ ಮನೆತನಕ್ಕೆ ಮೀಸಲಾದ ಆಟಗಳು, ಸಾಮಾನ್ಯರು ಆಡುವ ಆಟಗಳೆಂದು ವಿಂಗಡಿಸಿ ಹೇಳಲಾಗಿದೆ. ಅಲ್ಲಿ ಲಗೋರಿ ಆಟವನ್ನು ರಾಜವಂಶಕ್ಕೆ ಸಲ್ಲದ ಆಟವೆಂದು ಗುರುತಿಸುತ್ತಾರೆ" (ಜನಪದ ಆಟಗಳು, ಸಂ.ಡಾ.ಬಿ.ಎ.ವಿವೇಕರೈ, ಪು.೧೭).

ಈ ಆಟವನ್ನು ಆಡಲು ಬೇಕಾಗುವ ಸಾಮಗ್ರಿಗಳೆಂದರೆ ಒಂದು ರಬ್ಬರ್ ಚೆಂಡು, ೨-೩ ಅಂಗುಲ ವೃತ್ತದ ಚಪ್ಪಟೆಯಾಕಾರದ ೫-೬ ಕಲ್ಲುಗಳು. ಕಲ್ಲುಗಳು ಸಿಗದಿದ್ದಾಗ ಹೆಂಚಿನ ಚೂರುಗಳನ್ನು ಕಲ್ಲಿಗೆ ಉಜ್ಜಿ ವೃತ್ತಾಕಾರಕ್ಕೆ ತಂದು ಅವುಗಳನ್ನು ಬಳಸಿಕೊಳ್ಳುತ್ತಾರೆ. ಆಟವಾಡಲು ಬಯಸುವ ಮಕ್ಕಳೆಲ್ಲರೂ ಸಮ ಸಂಖ್ಯೆಯ ಎರಡು ಗುಂಪುಗಳಾಗಿ ಸೇರುತ್ತಾರೆ. ಒಂದು ಗುಂಪು ಒಂದರ ಮೇಲೊಂದರಂತೆ ಸೇರಿಸಿಟ್ಟ ಲಗ್ಗೆ ಕಲ್ಲುಗಳನ್ನು ಚೆಂಡಿನಿಂದ ಹೊಡೆದು ಬೀಳಿಸುವವರಾದರೆ ಇನ್ನೊಂದು ಗುಂಪು ವಿರೋಧಿ ಗುಂಪಿನ ಚೆಂಡಿನ ಹೊಡೆತದಿಂದ ತಪ್ಪಿಸಿಕೊಂಡು ಅವರು ಚದುರಿಸಿದ ಲಗ್ಗೆಯ ಕಲ್ಲುಗಳನ್ನು ಮತ್ತೆ ಕಟ್ಟಿಜೋಡಿಸುವವರು.

ಕಲ್ಲುಗಳಿಗೆ ಚೆಂಡನ್ನು ಗುರಿಯಿಟ್ಟು ಹೊಡೆದಾಗ ಕಲ್ಲುಗಳಿಗೆ ಬಡಿದು ಹಾರಿದ ಚೆಂಡನ್ನು ವಿರೋಧಿಗುಂಪಿನವರು ಕ್ಯಾಚ್ ಹಿಡಿದರೆ ಆ ತಂಡದ ಆಟದ ಸರದಿ ಮುಗಿದಂತೆ. ಒಂದರ ಮೇಲೊಂದರಂತೆ ಕಟ್ಟಿದ ಲಗ್ಗೆಯ ಕಲ್ಲುಗಳನ್ನು ಒಂದು ನಿರ್ದಿಷ್ಟ

ದೂರದಲ್ಲಿ ಎಳೆಯಲಾದ ಗೆರೆಯಲ್ಲಿ ನಿಂತು ಸರದಿಯ ಪ್ರಕಾರ ಗುರಿಯಿಟ್ಟು ಹೊಡೆದು ಚದುರಿಸಬೇಕು. ಒಬ್ಬರಿಗೆ ಮೂರು ಸಲ ಚೆಂಡನ್ನು ಎಸೆಯುವ ಅವಕಾಶವಿರುತ್ತದೆ. ಚೆಂಡೆಸೆದವರ ವಿರೋಧಿಗುಂಪಿನವರು ಚದುರಿದ ಲಗ್ಗೆಯ ಕಲ್ಲುಗಳನ್ನು ಬೇಗಬೇಗ ಒಂದರ ಮೇಲೊಂದರಂತೆ ಇಟ್ಟು ಮೊದಲಿನಂತೆ ಇಡಬೇಕು. ಇದರ ನಡುವೆ ಚೆಂಡೆಸೆಯುವ ಗುಂಪಿನವರು ಕಲ್ಲುಕಟ್ಟುವವರ ಮೇಲೆ ಚೆಂಡೆಸೆಯುತ್ತಾರೆ. ಅವರ ಎಸೆತದಿಂದ ತಪ್ಪಿಸಿಕೊಳ್ಳಬೇಕು. ಆಕಸ್ಮಾತ್ ಕಲ್ಲುಕಟ್ಟಿ ಪೂರ್ತಿಯಾಗುವುದರೊಳಗೆ ಎಸೆದ ಚೆಂಡು ಅವರಿಗೆ ತಾಗಿದರೆ ಅವರು ಔಟಾದಂತೆ. ಅನಂತರ ಮುಂದಿನವರ ಸರದಿ. ಹೀಗೆ ಒಂದು ತಂಡ ಎಷ್ಟು ಸಲ ಚದುರಿದ ಕಲ್ಲುಗಳನ್ನು ಮತ್ತೆ ಕಟ್ಟುತ್ತಾರೋ ಆದರ ಲೆಕ್ಕದ ಮೇಲೆ ಸೋಲು ಗೆಲುವನ್ನು ನಿರ್ಧರಿಸುತ್ತಾರೆ. ಆರಂಭದಲ್ಲಿ ಈ ಆಟಕ್ಕೆ ಬಟ್ಟೆಯ ತುಂಡುಗಳನ್ನು ಗಟ್ಟಿಯಾಗಿ ಜೋಡಿಸಿ ಮಾಡಿದ ಚೆಂಡನ್ನು ಬಳಸಲಾಗುತ್ತಿತ್ತು. ಈಗ ರಬ್ಬರ್ ಚೆಂಡನ್ನು ಬಳಸಲಾಗುತ್ತದೆ. ಸಂತೋಷ, ಸಂಭ್ರಮದ ಜೊತೆಗೆ ದೈಹಿಕ ವ್ಯಾಯಾಮವಲ್ಲದೆ ಗುರಿಯಿಂದ ತಪ್ಪಿಸಿಕೊಂಡು ಚಾಣಾಕ್ಷತನದಲ್ಲಿ ತನ್ನ ಕೆಲಸ ಸಾಧಿಸಬೇಕಾದ ಚಾಕಚಕ್ಯತೆಯನ್ನು ಈ ಆಟ ಕಲಿಸುತ್ತದೆ.

## ೨೫. ತೊಪ್ಪಿಯ ಕಳಿ (ಟೋಪ್ಪಿಯಾಟ/ಸೊಪ್ಪಿನಾಟ):

ಇದೊಂದು ನಶಿಸುವ ಅಂಚಿನಲ್ಲಿರುವ ಜನಪದ ಆಟ. ಆಟಕ್ಕೆ 'ಟೋಪಿ'ಯನ್ನು ಬಳಸುವುದರಿಂದ ಇದಕ್ಕೆ 'ಟೋಪಿಯಾಟ' ಎಂದು ಹೆಸರು ಬಂದಿದೆ. ಕೆಲವೊಮ್ಮೆ ಟೋಪಿಯ ಬದಲು 'ಸೊಪ್ಪು'ನ್ನು ಬಳಸಲಾಗುತ್ತದೆ. ಹಾಗಾಗಿ ಇದನ್ನು 'ಸೊಪ್ಪಿನಾಟ'ವೆಂದೂ ಕರೆಯುತ್ತಾರೆ. 'ಕರವಸ್ತ್ರ'ದಾಟವೂ ಕೂಡ ಈ ಆಟವನ್ನು ಹೋಲುತ್ತದೆ. ಗರಿಷ್ಟ ಸಂಖ್ಯೆಯ ಮಿತಿ ಇಲ್ಲದೆ ಮಳೆ ಇಲ್ಲದ ಹೊತ್ತಲ್ಲಿ, ಕಾಲದ ನಿರ್ಬಂಧವಿಲ್ಲದೆ ಆಡುವ ಆಟವಿದು. ಆಟವಾಡಲು ಬೇಕಾಗುವ ಸಾಮಗ್ರಿ ಎಂದರೆ ಒಂದು ಟೋಪಿ ಅಥವಾ ಒಂದು ಸೊಪ್ಪಿನ ಕೊಂಬೆ (ಸೊಪ್ಪು).

ಸುಮಾರು ಎಂಟು ಹತ್ತು ಜನ ಮಕ್ಕಳು ಸೇರಿಕೊಂಡು ೧೦, ೨೦, ೩೦ ಹೀಗೆ ೧೦೦ ರವರೆಗೆ ಎಣಿಸುತ್ತಾರೆ. ನೂರು ಸಂಖ್ಯೆ ಬಂದವರು ಗೆದ್ದಹಾಗೆ ಕೊನೆಗೆ ಎಲ್ಲರನ್ನೂ ಎಣಿಸಿ ಮುಗಿಯುವಾಗ ಉಳಿದವನೊಬ್ಬ ಕಳ್ಳನಾಗುತ್ತಾನೆ. ಕಳ್ಳನನ್ನು ಬಿಟ್ಟು ಉಳಿದವರು ವೃತ್ತಾಕಾರವಾಗಿ ಕುಳಿತುಕೊಳ್ಳುತ್ತಾರೆ. ಕಳ್ಳನಾದವನು ಇವರ ಸುತ್ತ

ಕೈಯಲ್ಲಿ ಟೋಪಿ ಅಥವಾ ಸೊಪ್ಪನ್ನು ಹಿಡಿದುಕೊಂಡು ಸುತ್ತುತ್ತಾ ಯಾರಾದರೊಬ್ಬರ ಬೆನ್ನಹಿಂದೆ ಅವರಿಗೆ ತಿಳಿಯದಂತೆ ಟೋಪಿಯನ್ನು ಇಡುತ್ತಾನೆ. ಎಲ್ಲರೂ ತಮ್ಮ ಬೆನ್ನ ಹಿಂದೆ ನೋಡಿಕೊಂಡು ಯಾರ ಬೆನ್ನ ಹಿಂದೆ ಇದೆಯೋ ಅವರು ಎದ್ದು ಕಳ್ಳನನ್ನು ಬೆನ್ನಟ್ಟುತ್ತಾರೆ. ಕಳ್ಳ ವೃತ್ತದ ಸುತ್ತ ಓಡಿಬಂದು ಎದ್ದವನ ಜಾಗವನ್ನು ಆಕ್ರಮಿಸಿ ಕೊಳ್ಳುತ್ತಾನೆ. ಹೀಗೆ ಆಟ ಮುಂದುವರಿಯುತ್ತದೆ. ಆಕಸ್ಮಾತ್ ಕಳ್ಳ ಬೇಗನೇ ಹತ್ತಿರದಲ್ಲಿ ಸಿಕ್ಕಿದರೆ ಅವನು ಹೊಡೆಸಿಕೊಳ್ಳುತ್ತಲೇ ಬಂದು ಖಾಲಿಯಾದ ಸ್ಥಳದಲ್ಲಿ ಕೂರಬೇಕು. ಸೋಲು-ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸಲು ಬೇಕಾದ ಮನೋಭೂಮಿಕೆ ಯನ್ನು ಈ ಆಟವು ಸಿದ್ಧಪಡಿಸುತ್ತದೆ.

ಉತ್ತರ ಕರ್ನಾಟಕದ ಕಡೆಯಲ್ಲಿ ಈ ಆಟವನ್ನು 'ಲೋ-ಲೋ ಟುಮ್ಮ ಯ್ಯನಾಟ' ವೆಂದು ಕರೆಯುತ್ತಾರೆ.

## ೨೬. ಕಪ್ಪೆ ಪಾರೊ (ಕಪ್ಪೆ ಹಾರುವುದು):

ಇದೊಂದು ಅತ್ಯಂತ ಹಳೆಯದಾದ ಜನಪದ ಆಟ. ಈ ಆಟವನ್ನು ಮಕ್ಕಳು ಒಂದು ರೀತಿಯಲ್ಲಿ ಆಡಿದರೆ ವಯಸ್ಕರು ಬೇರೊಂದು ರೀತಿಯಲ್ಲಿ ಆಡುತ್ತಾರೆ. ಆಟಕ್ಕೆ ನಿರ್ದಿಷ್ಟ ಸಂಖ್ಯೆಯ ಮಿತಿ ಇರುವುದಿಲ್ಲ. ಸಾಮಾನ್ಯವಾಗಿ ಸಣ್ಣ ವಯಸ್ಸಿನ ಮಕ್ಕಳು ಈ ಆಟದಲ್ಲಿ ಭಾಗವಹಿಸಿತ್ತಾರೆ. ನಿಗಧಿಪಡಿಸಿದ ಸ್ಥಳದಿಂದ ಕಪ್ಪೆಯಂತೆ ಕುಕ್ಕುರು ಕಾಲಿನಲ್ಲಿ ಕುಳಿತು ಕುಪ್ಪಳಿಸುತ್ತಾ ಮುಂದಮುಂದಕ್ಕೆ ಕೈಯನ್ನು ನೆಲಕ್ಕೆ ತಟ್ಟುತ್ತಾ ಹಾರುವುದು. ಹೀಗೆ ಕುಪ್ಪಳಿಸುತ್ತಾ ಯಾರು ಮೊದಲು ಗುರಿಯನ್ನು ಮುಟ್ಟುತ್ತಾರೋ ಅವರು ಗೆದ್ದಂತೆ. ಪ್ರಾಣಿಗಳನ್ನು ಅನುಕರಿಸುವ ಆಟಗಳಲ್ಲಿ ಇದೂ ಒಂದು. ಕಾಲುಗಳಿಗೆ ಶಕ್ತಿಯನ್ನು ನೀಡುವುದರೊಂದಿಗೆ ಮಕ್ಕಳು ಪ್ರಕೃತಿಯಲ್ಲಿ ತಮ್ಮ ನಡುವೆ ಜೀವಿಸುವ ಪ್ರಾಣಿಪಕ್ಷಿಗಳ ಬದುಕನ್ನು ಕುತೂಹಲದಿಂದ ಗಮನಿಸುವುದರ ಕಡೆಗೆ ಆಸಕ್ತಿಯನ್ನು ಮೂಡಿಸಲು ಈ ಆಟ ಸಹಕಾರಿ. ಸಣ್ಣಮಕ್ಕಳಿಗೆ ಆಟೋಟ ಸ್ಪರ್ಧೆಗಳನ್ನು ನಡೆಸುವಾಗ ಈ ಆಟಕ್ಕೆ ಪ್ರಮುಖವಾದ ಸ್ಥಾನವಿದೆ.

## ೨೭. ಕಾಳ್ ಪೊರ್ಕುವ ಕಳಿ (ಕಾಲು ಹೆಕ್ಕುವ ಆಟ):

ಇದೂ ಕೂಡ ಸಣ್ಣಮಕ್ಕಳು ಆಡುವ ಆಟ. ನೆಲದಲ್ಲಿ ಕಾಳುಗಳನ್ನು ಚೆಲ್ಲಿ ಅವುಗಳ

ಸುತ್ತಲೂ ಪುಟ್ಟ ಮಕ್ಕಳನ್ನು ಬಿಡುತ್ತಾರೆ. ಯಾರು ಹೆಚ್ಚು ಕಾಳುಗಳನ್ನು ಹೆಕ್ಕುತ್ತಾರೋ ಅವರು ಗೆದ್ದಂತೆ. ಈಗ ಕಾಳುಗಳ ಬದಲಿಗೆ ಪೆಪ್ಪರಮೆಂಟುಗಳನ್ನು ಹಾಕಿ ಹೆಕ್ಕಲು ಹೇಳುತ್ತಾರೆ. ಕಾಳುಗಳನ್ನು ಹೆಕ್ಕುವುದಕ್ಕಿಂತ ಹೆಚ್ಚಿನ ಆಸಕ್ತಿಯಲ್ಲಿ ಮಕ್ಕಳು ಪೆಪ್ಪರಮೆಂಟುಗಳನ್ನು ತಿನ್ನುವ ಆಸೆಯಿಂದ ಹೆಕ್ಕುತ್ತಾರೆ. ಮಕ್ಕಳಲ್ಲಿ ಚುರುಕುತನವನ್ನು ಈ ಆಟವು ಹೆಚ್ಚಿಸುತ್ತದೆ.

## ೨೮. ಕೆರೆದಡ ಕಳಿ (ಕೆರೆದಡ ಆಟ):


ಗಂಡುಮಕ್ಕಳು, ಹೆಣ್ಣುಮಕ್ಕಳು ಸೇರಿ ಒಟ್ಟಾಗಿ ಆಡುವ ಸರಳವಾದ ಆಟವಿದು. ಯಾವುದೇ ಕಾಲದಲ್ಲೂ ಆಡಬಹುದಾದ ಈ ಆಟದಲ್ಲಿ ಆಟಗಾರರ ಸಂಖ್ಯೆಗೆ ಮಿತಿ ಇಲ್ಲ. ಆಟವಾಡಬಯಸುವ ಮಕ್ಕಳೆಲ್ಲಾ ವೃತ್ತಾಕಾರವಾಗಿ ನಿಂತುಕೊಂಡಿರುತ್ತಾರೆ. ವೃತ್ತದ ಹೊರಗಿನಿಂದ ಒಬ್ಬ 'ಕೆರೆ ಒಳಗೆ' ಎಂದಾಗ ಎಲ್ಲರೂ ವೃತ್ತದ ಒಳಭಾಗಕ್ಕೆ ಎರಡೂ ಕಾಲನ್ನೆತ್ತಿ ಕುಪ್ಪಳಿಸುತ್ತಾರೆ. 'ದಂಡೇ ಮೇಲೆ' ಎಂದಾಗ ವೃತ್ತದ ಹೊರಕ್ಕೆ ಹಿಂಬದಿಗೆ ಕುಪ್ಪಳಿಸುವಂತೆ ಸರಿಯುತ್ತಾರೆ. ಹೇಳುವುದಕ್ಕೆ ಸರಿಯಾಗಿ ಇವರೆಲ್ಲಾ ಕುಪ್ಪಳಿಸುತ್ತಾ ಆಡುತ್ತಿರುತ್ತಾರೆ. ಆದರೆ ಕೆರೆ ಒಳಗೆ, ಕೆರೆ ಒಳಗೆ ಎಂದು ಎರಡು ಸಲ ಹೇಳಿದಾಗ ಕೆಲವರು ಎರಡನೆಯ ಸಲಕ್ಕೆ ವಿರುದ್ಧ ದಿಕ್ಕಿಗೆ ಅಂದರೆ ಹಿಂಬದಿಗೆ ಜಿಗಿದಿರುತ್ತಾರೆ. ಆಗ ಅಂತಹವರು ಔಟಾಗುತ್ತಾರೆ. ಯಾವುದೇ ಶ್ರಮವಿಲ್ಲದೆ ಆಡುವ ಆಟವಾದರೂ ಮಕ್ಕಳಲ್ಲಿ ಆಲಿಸುವ ಕೌಶಲವನ್ನಿದು ಹೆಚ್ಚಿಸಿ ಏಕಾಗ್ರತೆಯನ್ನು ಬೆಳೆಸಲು ಸಹಕಾರಿಯಾಗುತ್ತದೆ.

## ೨೯. ಸೂರ್ತಿಕಳಿ/ಚೆಂಡ್ ಕಳಿ (ಚೆಂಡಿನಾಟ):

ಚೆಂಡಿನಾಟ/ಚಂಡಿನಾಟ ವೆಂದು ಹೆಸರಾಗಿರುವ ಈ ಆಟವು ಪ್ರಾಚೀನವಾದ ಪ್ರಸಿದ್ಧ ಜನಪದ ಆಟವಾಗಿದೆ. ಇಂದು ಚೆಂಡನ್ನು ಆಟದ ಸಾಮಾಗ್ರಿಯಾಗಿಸಿಕೊಂಡು ಆಡುವ ಹಲವಾರು ಆಟಗಳು ಕಂಡುಬರುತ್ತದೆ. ಕ್ರಿಕೆಟ್, ಫುಟ್‌ಬಾಲ್, ವಾಲಿಬಾಲ್, ಬಾಸ್ಕೆಟ್ ಬಾಲ್, ಬೇಸ್ ಬಾಲ್ ಮುಂತಾದವು. ಈ ಎಲ್ಲಾ ಆಧುನಿಕ ಆಟಗಳ ಮೂಲವಾಗಿ ಸರಳವಾದ ಚೆಂಡಾಟವು ಕಂಡುಬರುತ್ತದೆ. ಸಂಖ್ಯೆಯ ಮಿತಿ ಇಲ್ಲದೆ, ಯಾವುದೇ ಸಮಯದಲ್ಲಿ ಹೊರಾಂಗಣದ ಹಾಗೂ ಒಳಾಂಗಣದ ಆಟವಾಗಿ ಈ

ಆಟವನ್ನು ಆಡುತ್ತಾರೆ.

ಒಳಾಂಗಣದ ಆಟವಾಗಿ ಆಡುವಾಗ ರಬ್ಬರಿನ ಚೆಂಡನ್ನು ನೆಲಕ್ಕೆ ಅಥವಾ ಗೋಡೆಗೆ ಎಸೆದು ಪುಟಿಸಿ ಮತ್ತೆ ಮತ್ತೆ ಅದನ್ನು ತಟ್ಟುತ್ತಾ ಆಡಲಾಗುತ್ತದೆ. ಕೈತಗುಲದೆ ಪುಟಿದ ಚೆಂಡು ನೆಲಕ್ಕೆ ಬಿದ್ದರೆ ಆಡುವವರಿಗೆ ಸೋಲುಂಟಾಗುತ್ತದೆ.



ಹೊರಾಂಗಣದ ಆಟವಾಗಿ ಆಡುವಾಗ ಆಟದಲ್ಲಿ ಭಾಗವಹಿಸುವ ಮಕ್ಕಳೆಲ್ಲರೂ ಬಯಲಿನಲ್ಲಿ/ಮೈದಾನದಲ್ಲಿ ಓಡುತ್ತಾರೆ. ಒಬ್ಬ ಕೈಯಲ್ಲಿ ರಬ್ಬರಿನ ಚೆಂಡನ್ನು ಹಿಡಿದುಕೊಂಡು ಗುರಿಯಿಟ್ಟು ಅವರಲ್ಲಿ ಒಬ್ಬರಿಗೆ ಹೊಡೆಯುತ್ತಾನೆ. ಆತ ಎಸೆದ ಚೆಂಡು ಯಾರಿಗೆ ತಗಲುತ್ತದೋ ಅವರು ಔಟಾಗುತ್ತಾರೆ. ಮುಂದೆ ಚೆಂಡನ್ನು ಎಸೆವ ಸರದಿ ಔಟಾದವರದಾಗುತ್ತದೆ.

'ಕಂದುಕದಾಟ' ಎಂಬ ಹೆಸರಿನಲ್ಲಿ ಈ ಆಟವು ಶಾಸನಗಳಲ್ಲಿ ಉಲ್ಲೇಖವಾಗಿರುವುದರ ಬಗೆಗೆ ಎಫಿಗ್ರಾಫಿಯ ಕರ್ನಾಟಕದಲ್ಲಿ ವಿವರಗಳಿವೆ (ಎ.ಕ.ii ೧೬೨/೧೩೩, ೧೯೭೩ ಪು.೧೦೮).

"ಜನಪ್ರಿಯ ಆಟ ಕಂದುಕ (ಚೆಂಡಾಟ) ಕ್ವಚಿತ್ತಾಗಿ ಶಾಸನಗಳಲ್ಲಿ, ವಿಪುಲವಾಗಿ ಕಾವ್ಯಗಳಲ್ಲಿ ಈ ಆಟದ ಬಗೆಗೆ ಸಾಕ್ಷ್ಯಾಧಾರಗಳು ದೊರಕುತ್ತವೆ. ಕಂದುಕದಾಟದ ಕ್ರಮ,

ವ್ಯೂಹಗಳು, ಆಡುವ ವಿಧಾನಗಳು, ಆಟದ ಜಾಗ, ಆಟಕ್ಕೆ ಸಜ್ಜುಗೊಳ್ಳುವ ಬಗೆ, ಅದಕ್ಕೆ ಮೊದಲು ಆಟದ ಅಂಗವಾಗಿ ನಡೆಸುವ ವಿಧಿ, ಆಚರಣೆಗಳ ಸವಿಸ್ತಾರ ವರ್ಣನೆಗಳೂ ಲಭ್ಯವಾಗುತ್ತವೆ. ಕಂದದಲ್ಲಿರುವ ಶ್ರವಣಬೆಳಗೊಳದ ಶಾಸನವೊಂದರಲ್ಲಿ ಈ ಆಟದ ಪ್ರಸ್ತಾಪ ಹೀಗೆ ಬರುತ್ತದೆ. ಶ್ರೀಗೆ ವಿಜಯಕ್ಕೆ ವಿದ್ದೆಗೆ ಜಾಗಕ್ಕದಂಟಿಗೆ ಜಸಕೆ ಪೆಂಪಿಂಗಿನಿತರ್ಕ್ಕಾಗರಮಿದೆನ್ನು ಕನ್ದುಕಾದಾಗಮದೊಳೆ ನೆಗ್ಗಮಿಲ್ತೆ ಬೀರರ ಬೀ" ಈ ಶಾಸನದಲ್ಲಿ ರಾಷ್ಟ್ರಕೂಟ ನಾಲ್ಕನೆಯ ಇಂದುರಾಜನ ಗುಣಸ್ರವನ ಮಾಡುವಾಗ ಆತನ ಕಂದುಕಾಗಮದ ಕೌಶಲವನ್ನು ವಿಸ್ತಾರವಾಗಿ ನಿರೂಪಸಲಾಗಿದೆ. (ಜನಪದ ಆಟಗಳು ಪ್ರ.ಸಂ. ಡಾ.ಎಸ್.ಕೆ.ಕರೀಂಖಾನ್, ಪು೧೫). ಇದೇ ಭಾಗವನ್ನು ಕನ್ನಡದ ಚಿತ್ರಕಾವ್ಯಕ್ಕೊಂದು ವಿಶೇಷವಾದ ನಿದರ್ಶನವಾಗಿ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಯವರು ಗುರುತಿಸುತ್ತಾರೆ. "ಕಂದುಕಾಗಮದ ಕೌಶಲಗಳನ್ನು ನಿರೂಪಿಸುವ ಇನ್ನೂ ಎರಡು ಪದ್ಯಗಳು ಮಲ್ಲಕವಿಯ 'ಕಾವ್ಯಸಾರ' ದಲ್ಲಿವೆ. (೮-೫೮೧, ೫೮೨) ಸೋಮೇಶ್ವರನ 'ಮಾನಸೋಲ್ಲಾಸ' ಕಾವ್ಯದ ೨೬೧ನೆಯ ಪದ್ಯದಲ್ಲಿ ಈ ಆಟದ ವಿವರ ಬಂದಿದೆ. (ಜ್ಯೋತ್ಸ್ನಾ ಕಾಮತ್, ಪೂರ್ವೋಕ್ತ, ಪು.೭೬, ೭೭) ಜ್ಯೋತ್ಸ್ನಾ ಕಾಮತ್‌ರವರು ಶಾಸನಗಳಲ್ಲಿ ಪ್ರಸ್ತಾಪಗೊಂಡಿರುವ ಕಂದುಕದಾಟವು ಇಂದಿನ 'ಗಾಲ್ಫ್' ಆಟದ ಹಿಂದಿನ ರೂಪವೆಂದೂ, 'ಮಾನಸೋಲ್ಲಾಸ'ದಲ್ಲಿ ಬಂದಿರುವ ಕಂದುಕದಾಟದ ವಿವರಗಳು 'ಪೋಲೋ' ಆಟವನ್ನು ಹೋಲುವುದೆಂದೂ ತಿಳಿಸುತ್ತಾರೆ. 'ನಂಜುಂಡ ಕವಿಯು ಚೆಂಡಾಟವನ್ನು ವರ್ಣಿಸಲು ಒಂದು ಪ್ರಕರಣವನ್ನೇ ಮೀಸಲಿರಿಸಿದ್ದಾನೆ'. ತನ್ನ ಮಗನು ಚೆಂಡಾಟದಲ್ಲಿ ತೊಡಗುವುದನ್ನು ನೋಡಿದ ಕುಮಾರಾರಾಮನ ತಾಯಿ ಹರಿಯಲಾದೇವಿ "ಬೊಗರಿಗದುಗು ಸುಡುಗುಡು ಲಗ್ಗೆ, ಹಡಿಗವಡೆಗಳಿವು ರಾಜಪುತ್ರರಿಗೆ ಬಗೆಯಲುಚಿತವೆ, ಕೇಳಿದ ಪಗೆರಾಯರು ನಗರೆ..... ಚೆಂಡಾಟವೆಂಬುದು ತುರುಗಾಹಿ ಮಕ್ಕಳ ತಂಡಕಲ್ಲದೆ ನೃಪಸುತರ ಮಂಡಳಿಗುಚಿತವೆ" ಇದೇ ಪ್ರಸಂಗವನ್ನು ಪಾಂಚಾಳಗಂಗನು (ಸು ೧೬೫೦) 'ಚನ್ನರಾಮಸಾಂಗತ್ಯ'ದಲ್ಲಿ ಇನ್ನೂ ಪರಿಣಾಮಕಾರಿಯಾಗಿ ಹೇಳುತ್ತಾ ಚೆಂಡಾಟದ ನೀತಿ ನಿಯಮಗಳು ಸಮರ ಕ್ರೀಡೆಯ ಎಲ್ಲಾ ಅಂಶಗಳನ್ನು ಹೊಂದಿರುವುದನ್ನು ತಿಳಿಸಿದ್ದಾನೆ (ಜನಪದ ಆಟಗಳು, ಪ್ರ.ಸಂ.ಡಾ.ಎಸ್.ಕೆ.ಕರೀಂಖಾನ್ ಪು. ೧೭).

'ಚೆಂಡು' ಮನುಷ್ಯ ಕಂಡುಕೊಂಡ ಅತ್ಯಂತ ಹಳೆಯ ಆಟದ ಸಾಮಗ್ರಿಗಳಲ್ಲಿ

ಒಂದು. ರಾಮಾಯಣ, ಮಹಾಭಾರತಗಳಲ್ಲಿ, ಕಾಳಿದಾಸಾದಿ ಕವಿಗಳ ಕೃತಿಗಳಲ್ಲಿ ಚೆಂಡಾಟದ ವರ್ಣನೆಗಳಿರುವುದರಿಂದ ಈ ಆಟದ ಪ್ರಾಚೀನತೆ ರಾಮಾಯಣಕ್ಕೂ ಪೂರ್ವಕ್ಕೆ ಹೋಗುತ್ತದೆ. 'ಕಂದುಕಕೇಳಿ', ಕಂದುಕ ಕ್ರೀಡೆ ಎಂಬ ಪ್ರಸ್ತಾವಗಳು ಒಂಬತ್ತನೆಯ ಶತಮಾನಕ್ಕೂ ಹಿಂದೆಯೇ ಕನ್ನಡನಾಡಿನಲ್ಲಿ ಪ್ರಚಲಿತವಾಗಿದ್ದುದನ್ನು ಗಮನಿಸಿದರೆ ಇದೊಂದು ಅತ್ಯಂತ ಪ್ರಾಚೀನವಾಗಿದ್ದರೂ ಇಂದಿಗೂ ಪ್ರಚಲಿತದಲ್ಲಿರುವ ಸಾರ್ವಕಾಲಿಕ ಆಟವಾಗಿರುವುದು ಕಂಡುಬರುತ್ತದೆ. ಚರಿತ್ರೆಯುದ್ದಕ್ಕೂ ಹೋರಾಟದ, ರಕ್ಷಣೆಗೆ ಸಂಬಂಧಪಟ್ಟ ಸಂದರ್ಭ, ಘಟನೆಗಳು ನಿರಂತರವಾಗಿರುವ ಹಿನ್ನೆಲೆಯಲ್ಲಿ ಯುದ್ಧನೈಪುಣ್ಯತೆಗಳ ಅರಿವುಂಟುಮಾಡುವ ರೀತಿಯಲ್ಲಿರುವ ಈ ಆಟ ಎಲ್ಲಕಾಲಕ್ಕೂ ಪ್ರಸ್ತುತವಾಗಿದೆ ಎನ್ನಬಹುದು.

## ೩೦. ಮಂಗಲ ಕಳಿ/ಗೊಂಬೆ ಕಳಿ (ಮದುವೆ ಆಟ, ಗೊಂಬೆ ಆಟ):

ಮನುಷ್ಯನ ಬದುಕಿನ ಜೀವನಾವರ್ತನದ ಆಚರಣೆಗಳು ಒಂದು ಸಂಸ್ಕೃತಿಯನ್ನು ಪ್ರತಿಬಿಂಬಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಅದರಲ್ಲೂ ಸಂಭ್ರಮವನ್ನೇ ಹಾಸಿ ಹೊದ್ದುಕೊಳ್ಳುವ ಮದುವೆಯ ಸಂದರ್ಭದಲ್ಲಿ ಮದುಮಗ – ಮದುಮಗಳಿಗೆ ನಡೆಸಲಾಗುವ ಆಚರಣೆ, ವಿಧಿ-ವಿಧಾನಗಳು ಸಹಜವಾಗಿಯೇ ಆಕರ್ಷಕವಾಗಿರುತ್ತವೆ. ಈ ಕುರಿತು ಕುತೂಹಲಭರಿತರಾದ ಮಕ್ಕಳು ಪುಟ್ಟ ಗೊಂಬೆಗಳನ್ನು ಮದುಮಗ-ಮದುಮಗಳಾಗಿಸಿ ಮದುವೆಯ ಎಲ್ಲ ಶಾಸ್ತ್ರಗಳನ್ನು ಮಾಡುತ್ತಾ ಮದುವೆಯ ಆಟವನ್ನು ಆಡುತ್ತಾರೆ. ಕೆಲವೊಮ್ಮೆ ಗೊಂಬೆಗಳ ಬದಲಿಗೆ ತಮ್ಮ ನಡುವಿನಲ್ಲೇ ಇಬ್ಬರು ಮಕ್ಕಳನ್ನು ಆರಿಸಿ, ಮದುಮಗ-ಮದುಮಗಳಾಗಿಸಿ ಆಟವಾಡುತ್ತಾರೆ. ಇನ್ನೂ ಮುಗ್ಧ ಹಸುಳೆಗಳಾಗಿದ್ದಾಗಲೇ ಮುಂದಿನ ಬದುಕಿನ ಹಂತಗಳನ್ನು ಅರಿತುಕೊಳ್ಳುವ, ಜವಾಬ್ದಾರಿಯ ಕುರಿತಾಗಿ ಯೋಚಿಸುವುದನ್ನು ಇಂತಹ ಆಟಗಳು ಮಕ್ಕಳಿಗೆ ಕಲಿಸುತ್ತವೆ. ಕೆಲವು ಸಂದರ್ಭಗಳಲ್ಲಿ ಮದುವೆಯ ಆಟದಲ್ಲೇ ಮನೆಯಲ್ಲಿ ಮಗುವಾಗಿ ಆ ಮಗುವಿಗೆ ತೊಟ್ಟಿಲು ಕಟ್ಟಿ, ಸ್ನಾನ ಮಾಡಿಸಿ, ಮಗು ಸತ್ತು ಹೋದಂತೆ, ಅದನ್ನು ಸಂಸ್ಕಾರ ಮಾಡಿದಂತೆ ಹೀಗೆ, ಜೀವನಾವರ್ತನದ ಎಲ್ಲಾ ಪ್ರಮುಖ ಘಟನೆಗಳು ಬರುವಂತೆ ಮಕ್ಕಳ ಆಟ ಸಾಗುವುದೂ ಇದೆ. ಒಟ್ಟಾರೆಯಾಗಿ ಹಿರಿಯರು ಆಚರಣೆಗಳ ಮುಖಾಂತರ

ಮಾಡುವ ವಿಧಿ-ವಿಧಾನಗಳನ್ನು ಕುತೂಹಲದಿಂದ ನೋಡಿದ ಮಕ್ಕಳು ಆಟವಾಡುತ್ತಲೇ ತಮ್ಮ ಸಂಸ್ಕೃತಿಯ ನೆಲೆ-ಸೆಲೆಗಳಿಗೆ ಒಗ್ಗಿಕೊಳ್ಳುವ ಸಂದರ್ಭಗಳು ಈ ಮೂಲಕ ಸೃಷ್ಟಿಯಾಗುತ್ತವೆ. ಬಾಲ್ಯದಲ್ಲಿಯೇ ಬಹಳಷ್ಟು ವಿಚಾರಗಳನ್ನು ಮಕ್ಕಳು ತಿಳಿದುಕೊಳ್ಳಲು ಇಂತಹ ಆಟಗಳು ಸಹಕಾರಿ.

## ೩೧. ಕೆತ್ತೆ ಬೇಲ್ ಓಟ/ನಾಟಿ ಓಟ (ಕೆಸರುಗದ್ದೆ ಓಟ/ನಾಟಿ ಓಟ):

ಕೃಷಿ ಪ್ರಧಾನವಾದ ಕೊಡಗಿನಲ್ಲಿ 'ಭತ್ತ'ವೇ ಮುಖ್ಯವಾದ ಆಹಾರದ ಬೆಳೆ. ಜೋರೋ ಎನ್ನುವ ಎಡೆಬಿಡದ ಮಳೆಗಾಲದ ಮಳೆ, ಗಾಳಿ, ಚಳಿಯ ನಡುವೆ ತಮ್ಮ ನಿತ್ಯಕಾಯಕದ ನಡುವೆಯೂ ಸಂಭ್ರಮಿಸುವ ಕ್ಷಣಗಳನ್ನು ಜನರೇ ಸೃಷ್ಟಿಸಿಕೊಳ್ಳುತ್ತಿದ್ದರು. ಈ ಆಟವೂ ಕೂಡ ಇಂತಹ ಒಂದು ವಿಶೇಷ ಸಂದರ್ಭದಲ್ಲಿ ಹುಟ್ಟಿಕೊಂಡಿದೆ ಎನ್ನಬಹುದು. ನಿರಂತರವಾದ ದೀರ್ಘಕಾಲದ ನಾಟಿ ನೆಡುವ ದಿನಗಳಲ್ಲಿ ಕೆಲಸದ ಏಕತಾನತೆಯನ್ನು ಕಡಿಮೆಮಾಡಿ ಉತ್ಸಾಹ ತುಂಬಿಕೊಳ್ಳಲು ಸಹಾಯವಾಗುವಂತೆ ನಾಟಿನೆಡಲು ಶುಚಿಗೊಳಿಸಿದ ಕೆಸರುತುಂಬಿದ ಗದ್ದೆಯಲ್ಲೇ ಓಟದ ಸ್ಪರ್ಧೆಯನ್ನು ನಡೆಸುತ್ತಾರೆ. ಮಕ್ಕಳು, ವಯಸ್ಕರು - ಹೀಗೆ ಪ್ರತ್ಯೇಕ ವಿಭಾಗವನ್ನೇ ಮಾಡಿ ಬಹುಮಾನ ಕೊಡುವ ಕ್ರಮ ಇಲ್ಲಿದೆ. ಮಳೆಗಾಲದಲ್ಲಿ ಮಾತ್ರ ಆಡುವ ಈ ಆಟದಲ್ಲಿ ಎಷ್ಟು ಜನರಾದರೂ ಭಾಗವಹಿಸಬಹುದು. ಕನಿಷ್ಟ ಮತ್ತು ಗರಿಷ್ಟ ಸಂಖ್ಯೆಯ ಮಿತಿ ಇರುವುದಿಲ್ಲ. ಚೆನ್ನಾಗಿ ಉತ್ತು ನಾಟಿಗಾಗಿ ಹಸನು ಮಾಡಿಟ್ಟ ಕೆಸರುಗದ್ದೆಯಲ್ಲಿ ಓಟದ ಸ್ಪರ್ಧೆಯನ್ನು ನಡೆಸಲಾಗುತ್ತದೆ. ಯಾರು ಮೊದಲು ಓಡಿ ಗುರಿಮುಟ್ಟುತ್ತಾರೋ ಅವರು ಗೆಲ್ಲುತ್ತಾರೆ. ಕೆಸರಿನೊಳಗೆ ಸುಮ್ಮನೇ ನಡೆದಾಡಲು ಹೊರಟರೇ ಎಷ್ಟೋ ಸಲ ನಡೆಯಲಾಗುವುದಿಲ್ಲ. ಕೆಸರಿಗೆ ಕಾಲೂರಿದಂತೆಲ್ಲಾ ಮತ್ತೊಂದು ಕಾಲನ್ನು ಎಳೆಯುವುದು ಪ್ರಯಾಸವೆನಿಸುತ್ತದೆ. ಅಂತಹದರಲ್ಲಿ ಕೆಸರು ಗದ್ದೆಯಲ್ಲಿ ಓಡಬೇಕೆಂದರೆ ನಿಜವಾಗಿಯೂ ಚಾಣಾಕ್ಷತನ ಹಾಗೂ ಶಕ್ತಿ ಬೇಕಾಗುತ್ತದೆ. ಆದ್ದರಿಂದ ಈ ಆಟವು ಒಂದು ರೀತಿಯಲ್ಲಿ ದೈಹಿಕ ಸಾಮರ್ಥ್ಯದ ಪರೀಕ್ಷೆಯೂ ಹೌದು. ಜೊತೆಗೆ ಮಣ್ಣಿನ ಮಕ್ಕಳಾದ ಜನರಿಗೆ ಕೆಸರು ತುಂಬಿದ ಗದ್ದೆಯೂ ಕೂಡ ಯಾವುದೇ ರೀತಿ ಕಷ್ಟವೆನಿಸದೆ ಸಲೀಸಾಗಿ ಕೆಲಸಮಾಡುವ ಜಾಗವೆಂಬ ಆತ್ಮೀಯತೆಯನ್ನಿದು

ಬೆಳೆಸುತ್ತದೆ ಎನ್ನಬಹುದು. ಈ ಆಟದ ಆಧುನಿಕ ರೂಪವಾಗಿ ಇತ್ತೀಚೆಗೆ ಕೆಸರು ಗದ್ದೆಯಲ್ಲಿ ವಾಲಿಬಾಲ್ ಪಂದ್ಯಾಟವನ್ನು ಕೂಡ ನಡೆಸಲಾಗುತ್ತದೆ. ರಾಜ್ಯದ ಇತರ ಭಾಗಗಳಲ್ಲೂ ಇದನ್ನು ಆಡುವಂತೆ ಪ್ರೇರಣೆ ನೀಡಿದೆ.

## ೩೨. ಪಲ್ಲಿ ಕಳಿ (ಹಲ್ಲಿ ಆಟ):

ಇದು ಬಹಳ ಹಳೆಯ ಆಟಗಳಲ್ಲಿ ಒಂದಾಗಿದ್ದು ಇಂದು ಇದರ ಹೆಸರೂ ಕೇಳಲಾರದಷ್ಟು ನಶಿಸಿಹೋಗಿರುವ ಆಟವಾಗಿದೆ. ಸಾಮಾನ್ಯವಾಗಿ ಗಂಡು ಹೆಣ್ಣು ವ್ಯತ್ಯಾಸವಿಲ್ಲದೆ ಎಲ್ಲರೂ ಈ ಆಟವನ್ನು ಆಡುತ್ತಾರೆ. ದೊಡ್ಡಮಕ್ಕಳು ಹೆಚ್ಚಾಗಿ ಆಡುವ ಆಟವಿದು. ಹೊರಾಂಗಣದ ಆಟವಾಗಿ ಬಯಲು, ಮೈದಾನಗಳಲ್ಲೂ ಒಳಾಂಗಣದ ಆಟವಾಗಿ ಮನೆಯ ಹಜಾರದಲ್ಲೂ ಇದನ್ನು ಆಡಲಾಗುತ್ತಿತ್ತು. ಇಬ್ಬರಿಗಿಂತ ಹೆಚ್ಚು ಜನ ಈ ಆಟದಲ್ಲಿ ಇರಲೇ ಬೇಕು. ಮಕ್ಕಳಿಬ್ಬರು ಎಡಗೈಯನ್ನು ಕೈಗೆ ಕೈಕೊಟ್ಟು ಹಿಡಿದುಕೊಂಡಿರುತ್ತಾರೆ. ಇವರ ಕೈಯನ್ನು ಬಿಡಿಸಲು ಬರುವವರಿಗೆ ಇಬ್ಬರೂ ತಮ್ಮ ಖಾಲಿ ಇರುವ ಬಲಗೈಯಿಂದ ಬೀಸಿಹೊಡೆಯುತ್ತಾರೆ. ಇದೊಂದು 'ಸಮರ ಕಲೆ'ಯ ಮಾದರಿಯನ್ನು ಹೋಲುವ ಆಟ. ಒಗ್ಗಟ್ಟಿನಲ್ಲಿರುವ ಇಬ್ಬರೂ ಸೇರಿ ಶತ್ರುವನ್ನು ಹೊಡೆದುರುಳಿಸುವ, ಒಗ್ಗಟ್ಟಿನ ಬಲದಲ್ಲಿ ಗೆಲುವನ್ನು ಪಡೆದುಕೊಳ್ಳಲು ಸಾಧ್ಯವೆಂಬ ಸಂದೇಶವನ್ನು ಈ ಆಟವು ನೀಡುತ್ತದೆ. ಈ ಆಟಕ್ಕೆ 'ಹಲ್ಲಿ'ಯ ಹೆಸರು ಬಂದಿರುವುದರ ಹಿಂದೆ ಗೋಡೆಯ ಮೇಲೆ ತನ್ನ ಕೈಯನ್ನು ಅಂಟಿಸಿಕೊಂಡ ಹಲ್ಲಿ ಯಾವ ಸಂದರ್ಭದಲ್ಲೂ ಆಯ ತಪ್ಪಿ ದೂರವಾಗುವುದಿಲ್ಲ, ಬೀಳುವುದಿಲ್ಲ. ಬಹುಶಃ ಈ ಒಂದು ಹಲ್ಲಿಯ ವಿಶೇಷತೆ ಶತ್ರುಗಳಿಗೆ ಬೀಳಿಸಲಾರದ ರೀತಿಯಾಗಲಿ ಎಂಬರ್ಥದಲ್ಲಿ ಬಂದಿರಬಹುದೆಂದು ಊಹಿಸಲು ಸಾಧ್ಯವಿದೆ. ಮಕ್ಕಳ ಆಟದ ನಡುವೆ ಮರೆಯಾಗಿ ಹಿರಿಯರ ನೆನಪಿನಲ್ಲಿ ಮಾತ್ರ ಉಳಿದುಕೊಂಡಿರುವ ಆಟವಾದ ಇದು ಮಾತ್ರ ತನ್ನನ್ನು ಮರುಸ್ಥಾಪಿಸಿಕೊಳ್ಳಬೇಕಾಗಿದೆ.

## ೩೩. ಯಾವಕಳಿ/ದ್ಯಾವ ಕಳಿ (ದೇವರಾಟ):

ಕೊಡವರ ಜನಪದ ಆಟಗಳ ನಡುವೆ ಇದು ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿರುವ ಆಟವಾಗಿದೆ. ಬಹುತೇಕ ವಿದ್ಯಾವಂತರಾಗಿರುವ ಕೊಡವ

ಕುಟುಂಬಗಳಲ್ಲಿ ಮಕ್ಕಳು ಶಾಲೆಗೆ ಹೋಗುವ ಕಾರಣ ಗ್ರಾಮೀಣ ಆಟಗಳ ಬದಲಿಗೆ ಶಾಲೆಯಲ್ಲಿ ಆಡಿಸುವ ಆಧುನಿಕ ಆಟಗಳೇ ಹೆಚ್ಚಾಗಿ ಇಂತಹ ಆಟಗಳು ಮೂಲೆಗುಂಪಾಗಿವೆ.


ಈ ಆಟವನ್ನಾಡಲು ಬಯಸುವ ಮಕ್ಕಳೆಲ್ಲಾ ಸೇರಿ ಒಂದು ದೊಡ್ಡ ವೃತ್ತವನ್ನು ಬಯಲಿನಲ್ಲಿ ಗೆರೆ ಎಳೆದು ಮಾಡುತ್ತಾರೆ. ಇರುವವರೆಲ್ಲಾ ಸಮಭಾಗ ಮಾಡಿ ಅರ್ಧ ಜನರು ವೃತ್ತದ ಒಳಗೆ ನಿಲ್ಲುತ್ತಾರೆ. ಉಳಿದ ಅರ್ಧ ಜನರು ವೃತ್ತದ ಹೊರಗಿರುತ್ತಾರೆ. ಹೊರಗಿರುವವರು ಆ ವೃತ್ತದ ಸುತ್ತಲೂ ಸುತ್ತುತ್ತಾ ಒಳಗೆ ಕಾಲಿಡದೆ ಒಳಗಿರುವವರಲ್ಲಿ ಒಬ್ಬರನ್ನು ಎಳೆದು ವೃತ್ತದಿಂದ ಹೊರಗೆ ತರುತ್ತಾರೆ. ಹೊರಗೆ ಬಂದವರು ಔಟಾಗುತ್ತಾರೆ. ಹೀಗೆ ವೃತ್ತದ ಒಳಗಿದ್ದವರು ತಪ್ಪಿಸಿಕೊಂಡು ಓಡಾಡುತ್ತಿರಬೇಕು. ಹೊರಗಿರುವವರು ಚಾಣಾಕ್ಷತನದಿಂದ ಅವರನ್ನು ಮುಟ್ಟಿ ಔಟಾಗಿಸಬೇಕು. 'ದೇವರಾಟ'ವೆಂಬ ಹೆಸರು ಬಂದಿರುವುದಕ್ಕೆ ಬೇರೆ ಯಾವುದೇ ಹಿನ್ನಲೆಗಳು ಸಿಗದಿದ್ದರೂ ಬಹುಶಃ ದೇವರು ಮನುಷ್ಯನನ್ನು ಅಟ್ಟಿಸಿಕೊಂಡು ಹೋಗುವ, ಮನುಷ್ಯ ತಪ್ಪಿಸಿಕೊಂಡು ತನ್ನನ್ನು ರಕ್ಷಿಸಿಕೊಳ್ಳುವ ಪ್ರಯತ್ನವನ್ನು ಮಾಡುವ ರೀತಿ ಇಲ್ಲಿರುವುದರಿಂದ ಇದಕ್ಕೆ 'ದ್ಯಾವಕಳಿ' (ದೇವರಾಟ) ಎಂಬ ಹೆಸರು ಬಂದಿರಬಹುದೆಂದು ಊಹಿಸಬಹುದು.

## ೩೪. ಒಳಿಪ ಕಳಿ (ಅಡಗುವ ಆಟ):

ಇದು ಕೂಡ ಒಂದು ಹಳೆಯ ಜನಪದ ಆಟವಾಗಿದೆ. ಕಣ್ಣಾಮುಚ್ಚಾಲೆ, ಕಣ್ಣುಕಟ್ಟಿ ಆಟದ ಹಾಗೆಯೇ ಇದೂ ಕೂಡ ಸಣ್ಣ ಮಕ್ಕಳು ಗುಂಪಿನಲ್ಲಿ ಸಂಜೆಯ ವೇಳೆಯಲ್ಲಿ ಆಡುವ ಆಟ. ಒಳಾಂಗಣ ಹಾಗೂ ಹೊರಾಂಗಣದ ಆಟವಾಗಿಯೂ ಇದನ್ನು ಆಡಲಾಗುತ್ತದೆ. ಯಾವುದೇ ಕಾಲದ ನಿರುಕಿಲ್ಲದೆ ಎಲ್ಲಾ ಸಮಯದಲ್ಲೂ ಆಡುವ ಆಟ.

ಆಟದಲ್ಲಿ ಪಾಲ್ಗೊಳ್ಳುವ ಮಕ್ಕಳಲ್ಲಿ ಒಬ್ಬರು ಹುಡುಕುವವರಾಗುತ್ತಾರೆ. ಉಳಿದವರೆಲ್ಲಾ ಅಲ್ಲಿ ಇಲ್ಲಿ, ಮನೆಯೊಳಗಾದರೆ ಬಾಗಿಲ ಸಂದಿಯಲ್ಲಿ, ಮಂಚದ ಕೆಳಗೆ, ಕತ್ತಲ ಮೂಲೆಯಲ್ಲಿ ಅಡಗಿಕೊಳ್ಳುತ್ತಾರೆ. ಬಯಲಲ್ಲಾದರೆ ಮರ, ಗಿಡಗಳ ಬುಡದಲ್ಲಿ, ದಿಣ್ಣೆಯ ಮೂಲೆಗಳಲ್ಲಿ, ತಗ್ಗು ಪ್ರದೇಶದಲ್ಲಿ ಅರಗಿಕೊಳ್ಳುತ್ತಾರೆ. ಹುಡುಕುವ ಮಗು ತುಂಬಾ ಸಣ್ಣದಾದರೆ ಅಡಗಿಕೊಂಡವರು ಕೂಗು ಹಾಕಿ ಹುಡುಕಲು ಹೇಳುತ್ತಾರೆ.

ದೊಡ್ಡವರಾದರೆ ಗುರುತು ಸಿಕ್ಕುವ ಭಯದಲ್ಲಿ ಅಡಗಿದ ಅನಂತರ ಶಬ್ಧ ಮಾಡುವುದಿಲ್ಲ. ಹುಡುಕುವವರು ಅಡಗಿದವರಲ್ಲಿ ಯಾರಾದರೊಬ್ಬರನ್ನು ಗುರುತಿಸಿ ಮುಟ್ಟಿದರೆ ಅವರು ಸೋತಂತೆ.



ಮುಂದಿನ ಸರತಿಯ ಆಟದಲ್ಲಿ ಈಗ ಸಿಕ್ಕಿಬಿದ್ದವರು ಹುಡುಕುವವರಾಗುತ್ತಾರೆ. ಹೀಗೆ ಆಟ ಮುಂದುವರಿಯುತ್ತದೆ. ಸಣ್ಣ ಮಕ್ಕಳು ಸಂತೋಷಕ್ಕಾಗಿ ಈಗಲೂ ಈ ಆಟವನ್ನು ಆಡುತ್ತಾರೆ. ಹುಡುಕಲು ಕಷ್ಟಕರವಾದ ಜಾಗದಲ್ಲಿ ಅಡಗಿದವರನ್ನು, ಕತ್ತಲಲ್ಲಿ ಹುಡುಕುತ್ತಾ ಹೋಗಿ ಕೆಲವೊಮ್ಮೆ ಮಕ್ಕಳು ಬಿದ್ದು ಗಾಯಮಾಡಿಕೊಳ್ಳುವ ಸಂದರ್ಭಗಳೂ ಇರುತ್ತವೆ. ಹೀಗಾಗಿ ಸಣ್ಣ ಮಕ್ಕಳು ಆಡುವಾಗ ಹುಡುಕಲು ಸುಲಭವಾಗುವ ಸ್ಥಳದಲ್ಲೇ ಅಡಗುತ್ತಾರೆ.

## ೩೫. ತೊಟ್ಟ್ ಕುಂಞ್ ಕಳಿ (ತೊಟ್ಟಿಲ ಮಗುವಿನ ಆಟ):

ಈ ಆಟವನ್ನು ಮಕ್ಕಳು ಅಡುಗೆ ಆಟವಾಡುವಾಗ ಜೊತೆಯಲ್ಲೇ ಆಡುತ್ತಾರೆ. ಕೆಲವೊಮ್ಮೆ ಪ್ರತ್ಯೇಕವಾಗಿಯೂ ಆಡುತ್ತಾರೆ. ಗೊಂಬೆಯೊಂದನ್ನು ಮಗುವಾಗಿಸಿ ಮನೆಯಲ್ಲಿ ಹಿರಿಯರು ಪುಟ್ಟ ಮಗುವಿಗೆ ಮಾಡುವಂತೆ ಎಲ್ಲಾ ಆರೈಕೆಯನ್ನು ಮಾಡಿ

ಬಟ್ಟೆಯಲ್ಲಿ ಮನೆಯ ಪಕ್ಕದಲ್ಲಿರುವ ಮರದ ಕೊಂಬೆಗೆ ತೊಟ್ಟಿಲು ಕಟ್ಟಿ ಜೋಗುಳ ಹಾಡುತ್ತಾ ಆಡುತ್ತಾರೆ. ಮಗುವನ್ನು ಮಲಗಿಸಲು ಕೊಡವದಲ್ಲಿ ಹಾಡುವ –

ಜೂವ ಕುಂಞಿ ಜೂವ
ಕುಂಞಿರಪ್ಪ ಬಪ್ಪಕ
ಚತ್ತೆ ಪುಟ್ಟ್ ಕೊಂಡಾಕು
ಕುಂಞಿರವ್ವ ಬಪ್ಪಕ
ಚೆಪ್ಪುಮೊಲೆ ಕೊಂಡಾಕು
ಜೂವ ಕುಂಞಿ ಜೂವ
(ಜೋ ಜೋ ಮಗುವೇ ಜೋ ಜೋ
ಮಗುವಿನ ತಂದೆ ಬರುವಾಗ
ಸಂತೆಯ ತಿಂಡಿ ತರುತ್ತಾರೆ
ಮಗುವಿನ ತಾಯಿ ಬರುವಾಗ
ಮೊಲೆ ಹಾಲನ್ನು ತರುತ್ತಾಳೆ)

ಎಂಬ ಹಾಡನ್ನು ಜೋಗುಳ ಹಾಡುತ್ತಾ ಆಡುತ್ತಾರೆ. ಒಂದು ಸಂಸ್ಕೃತಿಯಲ್ಲಿ ಪ್ರಚಲಿತವಿರುವ ಹಾಡುಗಳನ್ನು, ಕಥೆಗಳನ್ನು, ಸಂಪ್ರದಾಯಗಳನ್ನು ಆಟವಾಡುತ್ತಾ ತ್ರಾಸಿಲ್ಲದೆ ಮಕ್ಕಳು ಕಲಿಯುತ್ತಾ ಹೋಗುತ್ತಾರೆ. ಆಟದ ಮೂಲಕವೇ ಪಾಠವನ್ನು ಕಲಿಯುವಲ್ಲಿ, ಸಂಸ್ಕೃತಿ ಕುರಿತು ಚಿಂತನೆ ಮೂಡಿಸುವಲ್ಲಿ ಇವು ಪ್ರಧಾನ ಪಾತ್ರವನ್ನು ವಹಿಸುತ್ತವೆ.

## ೩೬. ಅಪ್ಪವ್ವೊ ಕಳಿ (ತಂದೆ-ತಾಯಿ ಆಟ):

ಇದು ಮದುವೆಯ ಆಟದ ಹಾಗೆಯೇ ಆಡುವ ಆಟ. ಮಕ್ಕಳು ಮನೆಯಲ್ಲಿ ತಮ್ಮ ತಂದೆ-ತಾಯಿಗಳು ನಿತ್ಯ ಜೀವನದಲ್ಲಿ ನಡೆದುಕೊಳ್ಳುವ ರೀತಿಯನ್ನು ನೋಡಿದ ಮಕ್ಕಳು ತಂದೆ-ತಾಯಿಯರನ್ನು ಅನಕರಿಸುವ ಆಟವಾಡುತ್ತಾರೆ. ಗುಂಪಿನಲ್ಲಿ ಸೇರಿದ ಮಕ್ಕಳಲ್ಲಿ ಒಬ್ಬರು ತಂದೆಯಾದರೆ ಮತ್ತೊಬ್ಬರು ತಾಯಿಯಾಗುತ್ತಾರೆ. ಉಳಿದವರೆಲ್ಲರೂ ಮಕ್ಕಳಾಗಿ ಮನೆಯ ವಾತಾವರಣದಲ್ಲಿ ಇರುವಂತೆ ಅಪ್ಪ-ಅಮ್ಮ ಹೇಳಿದ ಕೆಲಸಗಳನ್ನು ಮಾಡಿಕೊಂಡಿರುತ್ತಾರೆ. ಸಾಂಸಾರಿಕ ಜೀವನದ ಕ್ರಮಗಳನ್ನು

ಬಾಲ್ಯದಲ್ಲೇ ಅಭ್ಯಸಿಸಿ ಮುಂದಿನ ಬದುಕಿಗೆ ಮಾನಸಿಕ ಸಿದ್ಧತೆಯನ್ನು ಮಾಡಿಸುವ ನೆಲೆಯಲ್ಲಿ ಈ ಆಟ ಪ್ರಮುಖವಾಗುತ್ತದೆ.

## ೩೭. ಅಡಿಗೆ ಕಳಿ (ಅಡುಗೆ ಆಟ):

ಮನೆಯ ನಿತ್ಯದ ವಾತಾವರಣವನ್ನು ಅನುಕರಣೆ ಮಾಡುವಂತೆ ಆಡುವ ಆಟವಿದು. ಅಡುಗೆ ಮನೆಯಲ್ಲಿ ಅಮ್ಮ ಪದಾರ್ಥಗಳನ್ನು ಜೋಡಿಸಿ ಅಡುಗೆ ಮಾಡುವಂತೆ, ಅಡುಗೆ ಮನೆಯ ಕೆಲಸಕ್ಕಾಗಿ ಬೇಕಾದ ಸಣ್ಣಪುಟ್ಟ ಕೆಲಸಗಳನ್ನು ಎಲ್ಲರಿಗೂ ಹಂಚಿಕೊಟ್ಟು ಮಾಡಿಸುವಂತೆ ಮಕ್ಕಳೂ ಅಡುಗೆ ಮಾಡುವ ಹೊತ್ತಿನಲ್ಲಿ ಕೆಲಸವನ್ನು ಹಂಚುತ್ತಾರೆ. ಕೆಲವರು ಅಂಗಳ ಗುಡಿಸುವ ಕೆಲಸಗಳನ್ನು ಮಾಡುತ್ತಾರೆ. ಮನೆಯಿಂದ ತರಕಾರಿಗಳನ್ನು, ಪಾತ್ರೆಗಳನ್ನೂ ತಂದು ಮನೆಯಂಗಳದ ಮರದಡಿಯಲ್ಲಿ ಮನೆಯಂತೆ ಮಾಡಿಕೊಂಡು ಪುಟ್ಟ ಮನೆಯ ಚಿತ್ರಣವನ್ನು ಕಟ್ಟಿಕೊಡುವಂತೆ ಆಡವಾಡುತ್ತಾರೆ. ಇದೂ ಕೂಡ ಸಾಂಸಾರಿಕ ಜೀವನದಲ್ಲಿ ಮನೆಯ ಪ್ರಮುಖರ ಪಾತ್ರಗಳನ್ನು, ಜವಾಬ್ದಾರಿಗಳನ್ನು ಮಕ್ಕಳು ಅರಿತುಕೊಳ್ಳಲು ತೊಡಗುವಂತೆ, ಪ್ರಯಾಸವಿಲ್ಲದೆ ನೋಡುತ್ತಾ ಬದುಕನ್ನು ಜೀವನದ ವಿವಿಧ ಹಂತ ಮಜಲುಗಳನ್ನು ಅಭ್ಯಸಿಸುವಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ಮಕ್ಕಳು ಕೌಟುಂಬಿಕ ಜೀವನದ ಮಹತ್ವವನ್ನು ಅರ್ಥಮಾಡಿಕೊಳ್ಳಲು ಇಂತಹ ಆಟಗಳು ಸಹಕಾರಿ.

## ೩೮. ಡ್ರೈವರ್ ಕಳಿ (ಡ್ರೈವರ್ ಆಟ):

ಸಾಮಾನ್ಯವಾಗಿ ಓಡಾಡುವ ಬಸ್ಸು, ಕಾರುಗಳನ್ನು ನೋಡುವ ಮಕ್ಕಳಿಗೆ ಅಂತಹ ವಾಹನಗಳನ್ನು ಓಡಿಸುವ ಚಾಲಕ ಬಹಳ ವಿಶೇಷವಾಗಿ ಕಾಣುತ್ತಾನೆ. ಇಡಿಯ ವಾಹನದ ನಿಯಂತ್ರಣ, ಅದನ್ನು ನಿಲ್ಲಿಸುವ, ಚಲಿಸುವಂತೆ ಮಾಡುವ, ಹೆಚ್ಚು ವೇಗವಾಗಿ, ಶಬ್ಧಮಾಡುತ್ತಾ ಚಾಲನೆ ಮಾಡುವ ಅವನ ಕೆಲಸ ಮಕ್ಕಳಲ್ಲಿ ಆಕರ್ಷಣೆಯನ್ನು ಉಂಟುಮಾಡುತ್ತದೆ. ಹೀಗಾಗಿ ಬಾಗಿರುವ, ಅಲುಗಾಡಿಸಲು ಸಾಧ್ಯವಾಗುವಂತಹ ಪುಟ್ಟ ಮರಗಳನ್ನು ಆರಿಸಿಕೊಂಡು ಮಕ್ಕಳು ವಾಹನಗಳನ್ನು ಅನುಕರಿಸಲು ಈ ಆಟವನ್ನು ಆಡುತ್ತಾರೆ. ಡ್ರೈವರ್ ಆಗುವವನು ಮರದ ತುದಿಯ ಭಾಗದಲ್ಲಿ ಅಂದರೆ ಅತ್ಯಂತ ಮುಂಭಾಗದಲ್ಲಿ ಹಾರ್ನ್ ಮಾಡುವಂತೆ ಪೀಂ, ಪೀಂ ಎಂದು ಶಬ್ಧಮಾಡುತ್ತಾ ಇಡಿಯ


ಮರವನ್ನೇ ಜೋರಾಗಿ ಅಲುಗಾಡಿಸುತ್ತಾನೆ. ಮತ್ತೊಬ್ಬ ಕಂಡಕ್ಟರ್ (ನಿರ್ವಾಹಕ)ನಾಗಿ ಬಾಯಿಯಲ್ಲಿ ಸಿಳ್ಳೆಹಾಕಿ ಬಸ್ ಹೊರಡಲು, ನಿಲ್ಲಲು ಸೂಚನೆಗಳನ್ನು ಕೊಡುತ್ತಾ ಮರದ ಎಲೆಗಳನ್ನು ಟಿಕೆಟ್ ಎಂದು ಎಲ್ಲರಿಗೂ ಕೊಡುತ್ತಾ ಹೋಗುತ್ತಾನೆ. ಕೆಲವರು ತಾವು ಹೋಗಬೇಕಾದ ಜಾಗ ಹೇಳಿ ಎಲೆಯನ್ನು ಹಣದ ರೀತಿಯಲ್ಲಿ ನೀಡಿ ಟಿಕೆಟ್ ಪಡೆದುಕೊಳ್ಳುತ್ತಾರೆ. ಒಬ್ಬ ಮರದ ಬುಡದ ಭಾಗದಲ್ಲಿದ್ದು ಕ್ಲೀನರ್ ಆಗಿ ನೇತಾಡುತ್ತಾ ಇರುತ್ತಾನೆ. ಈ ಆಟದಲ್ಲಿ ಗಂಡು ಮಕ್ಕಳು ಹೆಣ್ಣುಮಕ್ಕಳೆನ್ನದೆ ಯಾರು ಬೇಕಾದರೂ ಡ್ರೈವರ್, ಕಂಡಕ್ಟರ್, ಕ್ಲೀನರ್ ಆಗಬಹುದು. ಬಸ್ಸೊಂದಕ್ಕೆ ಹತ್ತಿ ಹೋಗಬೇಕಾದ ಕ್ರಿಯೆಯ ಪರಿಚಯವನ್ನು ಈ ಆಟವು ಮಾಡಿಕೊಡುತ್ತದೆ. ಆಧುನಿಕ ಮೋಟಾರುಗಳನ್ನು ಅನುಕರಿಸುವ ಈ ಆಟವು ಅತ್ಯಂತ ಪ್ರಾಚೀನವಲ್ಲದಿದ್ದರೂ ಗ್ರಾಮೀಣ ಮಕ್ಕಳು ಸಂತೋಷದಿಂದ ಆಡುವ ಆಟವಾಗಿದೆ. ಕನಿಷ್ಟ ಮತ್ತು ಗರಿಷ್ಟ ಆಟಗಾರರ ಮಿತಿ ಇಲ್ಲಿ ಇರುವುದಿಲ್ಲ. ಸಾಮಾನ್ಯವಾಗಿ ಬೇಸಿಗೆಯ ಕಾಲದಲ್ಲಿ ಮಕ್ಕಳು ಹೊರಾಂಗಣದ ಆಟವಾಗಿ ಇದನ್ನು ಆಡುತ್ತಾರೆ.

## ೩೯. ಗಾಡಿ ಕಳಿ (ಗಾಡಿ ಆಟ):

ಈ ಆಟವನ್ನು ಆಡಲು ಕನಿಷ್ಟ ಇಬ್ಬರು ಇರಬೇಕು. ತೆಂಗಿನ ಮಡಲುಗಳನ್ನು ಈ ಆಟಕ್ಕೆ ಬಳಸಿಕೊಳ್ಳಲಾಗುತ್ತದೆ. ಮಡಲಿನ ಬುಡದ ಭಾಗದಿಂದ ಸ್ವಲ್ಪ ಉದ್ದಕ್ಕೆ ಕತ್ತರಿಸಿ ಅದನ್ನು ಮಗುಚಿ ಇಡಲಾಗುತ್ತದೆ. ಅದರ ಮೇಲೆ ಸಣ್ಣಮಗುವನ್ನು ಕೂರಿಸಿ ತುದಿಯಿಂದ ಎಳೆದುಕೊಂಡು ಸಾಗುತ್ತಾ ಬಯಲಿನಲ್ಲಿ ಈ ಆಟವನ್ನು ಆಡಲಾಗುತ್ತದೆ. ಗಾಡಿಯನ್ನು ದನಗಳು ಎಳೆಯುವಂತೆ ಒಬ್ಬ (ಸ್ವಲ್ಪ ದೊಡ್ಡಮಕ್ಕಳು) ಎಳೆಯುವವರಾಗುತ್ತಾರೆ. ಸ್ವಲ್ಪ ಸಣ್ಣಮಕ್ಕಳಲ್ಲಿ ಒಬ್ಬ ಮಡಲಿನ ಮೇಲೆ ಅದನ್ನು ಗಟ್ಟಿಯಾಗಿ ಹಿಡಿದುಕೊಂಡು ಕುಳಿತುಕೊಳ್ಳುತ್ತಾನೆ. ಅಂಗಳದಲ್ಲಿ ಒಂದು ಸುತ್ತು ಅಥವಾ ನಿರ್ದಿಷ್ಟ ದೂರವನ್ನು ಗುರಿಯಾಗಿಟ್ಟುಕೊಂಡು ಗಾಡಿಯನ್ನು ಎಳೆಯುತ್ತಾರೆ. ಒಂದೊಂದು ಸುತ್ತಾದ ಅನಂತರ ಎಳೆಯುವವರು ಮತ್ತು ಕೂರುವವರು ಬದಲಾವಣೆಯಾಗುತ್ತಾ ಆಟವು ಮುಂದುವರಿಯುತ್ತದೆ.

ಮತ್ತೊಂದು ರೀತಿಯಲ್ಲಿ ಈ ಆಟವನ್ನು ಆಡಲಾಗುತ್ತದೆ. ಹಸಿಮರದ ಚೂರನ್ನು ವೃತ್ತಾಕಾರದಲ್ಲಿ ಕತ್ತರಿಸಿ ಅದರ ನಡುವಿನಲ್ಲಿ ಒಂದು ತೂತನ್ನು ಕೊರೆಯಲಾಗುತ್ತದೆ.


ಬಿದಿರಿನ ಉದ್ದದ ಕೋಲನ್ನು ಮಾಡಿಕೊಂಡು ಅದರ ತುದಿಯ ಭಾಗವನ್ನು ಸೀಳುತ್ತಾ ಚಕ್ರವನ್ನು ಸಣ್ಣ ಕಡ್ಡಿಯೊಳಗೆ ತೂರಿಸಿ ಅದನ್ನು ಬಿದಿರಿನ ಕೋಲಿನಲ್ಲಿ ಸಿಕ್ಕಿಸಿ ತಿರುಗುವಂತೆ ಮಾಡಬೇಕು. ಬಿದಿರಿನ ಉದ್ದದ ಕೋಲಿನ ಮೇಲ್ಭಾಗದಲ್ಲಿ ರಂಧ್ರವೊಂದನ್ನು ಮಾಡಿ ಚಕ್ರದ ಗಾಡಿಯನ್ನು ಉರುಳಿಸಲು ಕೈಗಳಿಗೆ ಹಿಡಿದುಕೊಳ್ಳಲು ಸಹಾಯವಾಗುವಂತೆ ಅಡ್ಡಕ್ಕೆ ಸಣ್ಣ ಕೋಲೊಂದನ್ನು ಹಾಕಬೇಕು. ಈ ಕೋಲನ್ನು ಎರಡೂ ಬದಿಯಲ್ಲಿ ಎರಡೂ ಕೈಯಲ್ಲಿ ಹಿಡಿದುಕೊಂಡು ಬಿದಿರಿನ ಕೋಲನ್ನು ಒಂದು ಹೆಗಲಿಗೆ ತಾಗಿಸಿಕೊಂಡು ಗಾಡಿಯನ್ನು ಉರುಳಿಸುತ್ತಾ ಅಂಗಳದಲ್ಲಿ ಆಟವಾಡಲಾಗುತ್ತದೆ. ಇದು ಅತ್ಯಂತ ಹಳೆಯದಾದ, ಈಗ ನಶಿಸುವ ಅಂಚಿನಲ್ಲಿರುವ ಗ್ರಾಮೀಣ ಆಟವಾಗಿದೆ. ಇಂದು ಆಧುನಿಕ ಸಲಕರಣೆಗಳಾದ ಸೈಕಲ್‌ಗಳು ಇವುಗಳ ಸ್ಥಾನವನ್ನು ಆಕ್ರಮಿಸಿಕೊಂಡಿರುವುದರಿಂದ ಇವು ಮೂಲೆಗುಂಪಾಗಿ ಕಾಣೆಯಾಗಿರುವ ಆಟಗಳ ಪಟ್ಟಿಗೆ ಸೇರಿಕೊಳ್ಳುತ್ತವೆ.




## ೪೦. ಈಪ ಕಳಿ/ಅಡಿಕೆ ಪಾಳೆ ಕಳಿ (ಅಡಿಕೆ ಹಾಳೆಯ ಆಟ):

ತೆಂಗಿನ ಮಡಲಿನಲ್ಲಿ ಗಾಡಿಯ ಪ್ರತಿಕೃತಿಯನ್ನು ಮಾಡಿಕೊಂಡು ಅದರಲ್ಲಿ ಆಟವಾಡುವಂತೆಯೇ ಅಡಿಕೆ ಹಾಳೆಯನ್ನು ಬಳಸಿಕೊಂಡು ಈ ಆಟವನ್ನು ಆಡಲಾಗುತ್ತದೆ. ಉದುರಿ ಬಿದ್ದ ಅಡಕೆಯ ಹಾಳೆಗಳ ತುದಿಯಲ್ಲಿರುವ ಎಲೆಯ ಭಾಗಗಳನ್ನು ಮಾತ್ರ ಬೇರ್ಪಡಿಸಿ ಕೋಲಿನಂತಾದ ಭಾಗವನ್ನು ಒಬ್ಬರು

ಹಿಡಿದುಕೊಳ್ಳುತ್ತಾರೆ. ಹಾಳೆಯ ಮೇಲೆ ಒಬ್ಬರು ಕುಳಿತುಕೊಂಡು ಎರಡೂ ಕೈಗಳಲ್ಲಿ ಗಟ್ಟಿಯಾಗಿ ಕೋಲಿನ ಭಾಗವನ್ನು ಹಿಡಿದುಕೊಳ್ಳಬೇಕು. ಅನಂತರದಲ್ಲಿ ಅಂಗಳದಲ್ಲಿ ಅವರನ್ನು ಎಳೆಯುತ್ತಾ ಆಟವಾಡುತ್ತಾರೆ.



ಸಾಧಾರಣವಾಗಿ ಸ್ವಲ್ಪ ದೊಡ್ಡಮಕ್ಕಳು ಭಾರಕಡಿಮೆ ಇರುವ ಸಣ್ಣಮಕ್ಕಳನ್ನು ಹಾಳೆಯಲ್ಲಿ ಕೂರಿಸಿ ಎಳೆಯುತ್ತಾ ಆಡುತ್ತಾರೆ. ಪ್ರಾಕೃತಿಕವಾಗಿ ಸಿಗುವ ಸಾಮಗ್ರಿಗಳನ್ನು ಬಳಸಿಕೊಂಡು ಆಡುವ ಇಂತಹ ಆಟಗಳು ಮಕ್ಕಳಿಗೆ ಮನಃಸಂತೋಷ ನೀಡುವುದರ ಜೊತೆಗೆ ದೈಹಿಕ ಮಾನಸಿಕ ಸದೃಢತೆಯನ್ನು ನೀಡುತ್ತವೆ. ಬೇಸಿಗೆಯ ಕಾಲದಲ್ಲಿ ಈ ಆಟವನ್ನು ಮಕ್ಕಳು ಆಡುತ್ತಾರೆ.

## ೪೧. ಮನೆಕಟ್ಟೊಕಳಿ (ಮನೆಕಟ್ಟುವ ಆಟ):

ಮಕ್ಕಳು ಸೇರಿ ಮನೆಕಟ್ಟುವ ಕ್ರಮವನ್ನು ಅನುಕರಿಸಿಕೊಂಡು ಆಡುವ ಆಟವಿದು. ಮನೆಯ ಪಕ್ಕದಲ್ಲಿ, ಕೆಲವೊಮ್ಮೆ ಅಂಗಳದಲ್ಲಿ ಅಥವಾ ಮನೆಯ ಪಕ್ಕದಲ್ಲಿ ಮರದ ಕೆಳಗೆ ಮಕ್ಕಳೆಲ್ಲಾ ಸೇರಿ ಮರದ ಕಂಬಗಳನ್ನು ನೆಟ್ಟು ಅವುಗಳ ಮೇಲೆ ಸೊಪ್ಪು ಅಥವಾ ಹುಲ್ಲನ್ನು ಹೊದಿಸಿ ಮನೆಕಟ್ಟಲು ಸೇರಿದವರ ನಡುವೆ ಜಗಳ ಬಂದಾಗ ಎಲ್ಲರೂ ಸೇರಿ

ಮನೆಯನ್ನು ಬೀಳಿಸುವವರೆಗೆ ಅದು ಮುಂದುವರಿಯುತ್ತದೆ. ಮನೆಕಟ್ಟಿ ನಡುವಿನಲ್ಲೇ ಬಿದ್ದುಹೋಗುವ ಮತ್ತೆ ಪುನಃ ಕಟ್ಟಿ ಗಟ್ಟಿಯಾಗಿ ನಿಲ್ಲಿಸುವ, ಸಿಟ್ಟು ಬಂದಾಗ ತಾವು ಕಟ್ಟಿದ ಮನೆಯನ್ನು ತಾವೇ ಬೀಳಿಸುವ ಪ್ರಕ್ರಿಯೆಯ ಆಟವಾಗಿರುವ ಇದು ಬದುಕನ್ನು ಕಟ್ಟುವ, ಮುರಿಯುವ, ಮುರಿದ ಬದುಕನ್ನು ಮತ್ತೆ ಕಟ್ಟಿಕೊಳ್ಳುವ ಜೀವನದ ವಿಚಾರಗಳನ್ನು ಸಾಂಕೇತಿಕವಾಗಿ ಧ್ವನಿಸುವಂತಿದೆ.

## ೪೨. ಪೂಳೆಕುತ್ತಿಪಾರೊ ಕಳಿ (ಕೂಳೆಹಾರುವ ಆಟ):

ಇದೊಂದು ಕೃಷಿ ಸಂಬಂಧೀ ಆಟವಾಗಿದೆ. ಭತ್ತದ ಕುಯಿಲು ಆದ ಅನಂತರ ಗದ್ದೆಗಳಲ್ಲಿ ಉಳಿದ ತೆನೆಗಳ ಬುಡದ ಭಾಗವನ್ನು 'ಕೂಳೆ' ಎನ್ನುತ್ತಾರೆ. ಮಕ್ಕಳು ಇಂತಹ ಕೂಳೆಗಳನ್ನು ಹಾರುವ ಆಟವನ್ನು ಆಡುತ್ತಾರೆ. ತೆವುರಿಯಿಂದ ಜಿಗಿದು ಎಷ್ಟು ಕೂಳೆಗಳನ್ನು ಹಾರುತ್ತಾರೆಂದು ಲೆಕ್ಕಮಾಡಿ ಗೆದ್ದವರನ್ನು ಗುರುತಿಸುತ್ತಾರೆ. ಈ ಆಟವನ್ನು ಎರಡು ರೀತಿಯಲ್ಲಿ ಆಡುತ್ತಾರೆ.

ಆಡುವಾಗ ದೂರದಿಂದ ಓಡಿಬಂದು ತೆವುರಿಯಲ್ಲಿ ನಿಂತು ಹಾರುವುದು. ಇನ್ನೊಂದು ರೀತಿ ಎಂದರೆ ತೆವುರಿಯಲ್ಲಿ ನಿಂತಲ್ಲಿಂದಲೇ ಹಾರುವುದು. ಇದನ್ನು 'ಕೊಪ್ಪಳ್‌ಚ ಪಾರೊ' (ಕುಪ್ಪಳಿಸಿ ಹಾರುವುದು) ಎಂದು ಕರೆಯುತ್ತಾರೆ. ಕನ್ನಡದ 'ಕೂಳೆ' ಪದದಲ್ಲಿನ 'ಕ' ಕಾರ ಕೊಡವ ಭಾಷೆಗೆ ಬರುವಾಗ 'ಪ' ಕಾರವಾಗಿ ಬದಲಾಗಿ 'ಪೂಳೆ' ಆಗಿದೆ. ಕೊಡವ ಭಾಷೆಯಲ್ಲಿ 'ಕುತ್ತಿ' ಎಂದರೆ ಕನ್ನಡದಲ್ಲಿ 'ಬುಡ' ಎಂದರ್ಥ.

ಇಂದು ಕೃಷಿ ಪ್ರಧಾನ ವ್ಯವಸ್ಥೆ ಬದಲಾಗಿ ಉದ್ಯೋಗ ಸಂಸ್ಕೃತಿಯ ಕಡೆಗೆ ಸಂಕ್ರಮಣಗೊಳ್ಳುತ್ತಿರುವ ದಿನಗಳಲ್ಲಿ ಭತ್ತದ ಗದ್ದೆಗಳೇ ಕಾಣದಾಗುತ್ತಿವೆ. ಹಾಗೆಯೇ ಹಳ್ಳಿಗಳಲ್ಲಿನ ಜನರು ಮಕ್ಕಳ ವಿದ್ಯಾಭ್ಯಾಸವನ್ನು ನೆಪವಾಗಿಸಿಕೊಂಡು ನಗರಗಳ ಕಡೆಗೆ ವಲಸೆ ಹೋಗಿ ವಾಸ್ತವ್ಯ ಹೂಡುತ್ತಿದ್ದಾರೆ. ಹೀಗಾಗಿ ಇಂದು ಇಂತಹ ಆಟಗಳು ಸಂಪೂರ್ಣವಾಗಿ ನಶಿಸುವ ಅಂಚಿನಲ್ಲಿದೆ ಎನ್ನಬಹುದು.

## ೪೩. ಕಿರ್‌ಬೆರಕಿನ್ನಾಣಿ ಕಳಿ (ಬೆರಳಿನಾಟ):

ಸಣ್ಣಮಕ್ಕಳನ್ನು ದೊಡ್ಡವರು ಆಡಿಸುವ ಆಟವಿದು. ಸಣ್ಣಮಕ್ಕಳ ಒಂದು ಕೈಯನ್ನು ಹಿಡಿದುಕೊಂಡು ಎಲ್ಲಾ ಬೆರಳುಗಳನ್ನು ಒಂದೊಂದಾಗಿ ಮುಟ್ಟುತ್ತಾ ಅದಕ್ಕೊಂದು


ಹಾಡು ಹೇಳಿ ಮಕ್ಕಳಿಗೆ ಬೆರಳುಗಳ ಪರಿಚಯ ಮಾಡಿಸುವ ಪ್ರಾಚೀನವಾದ ಆಟವಿದು. ಇಲ್ಲಿ ಬರುವ ಹಾಡು ಹೀಗಿದೆ –

ಕಿರುಬೆರಳನ್ನು ಮುಟ್ಟಿ ಹಾಡನ್ನು ಆರಂಭಿಸಲಾಗುತ್ತದೆ
"ಕಿರ್‌ಬೆರ ಕಿನ್ನಾಣಿ
ಮೋದ್‌ರ ಪೊನ್ನಾಣಿ
ನಡುಬೆರ ನಾಣ್ಯಕ್ಕ
ಕೋಟೆರ ಚಿಟ್ಯಕ್ಕ
ಮೋರ್‌ಕ್ ಪೋಪ ಮುರ್‌ಟೇಕ್ಕ"
(ಕಿರುಬೆರಳ ಕಿನ್ನಾಣಿ
ಉಂಗುರ ಹೊನ್ನಾಣಿ
ನಡುಬೆರಳ ನಾಣ್ಯಕ್ಕ
ಕೋಟೆಯ ಚಿಟ್ಯಕ್ಕ
ಮೊಸರಿಗೆ ಹೋಗೋ ಮುರುಟಕ್ಕ).

ಇಂಗ್ಲಿಷ್‌ನ – 'ಲಿಟ್‌ಲ್ ಫಿಂಗರ್' ರಿಂಗ್ ಫಿಂಗರ್, ಮಿಡಲ್ ಫಿಂಗರ್, ಪೋರ್ತ್ ಫಿಂಗರ್, ತಂಬ್ ಫಿಂಗರ್ ಎಂದು ಕಿರುಬೆರಳಿನಿಂದ ಹೆಬ್ಬೆರಳಿನವರೆಗೆ ಪರಿಚಯಿಸುವ ರೀತಿಯಂತೆ ಈ ಹಾಡೂ ಇದೆ. ಮಕ್ಕಳಿಗೆ ದೇಹದ ಅಂಗಾಂಗಗಳನ್ನು ಹಾಡಿನ ಮೂಲಕ ಪ್ರಯಾಸವಿಲ್ಲದೆ ಪರಿಚಯಿಸುವ ಸುಂದರ ತಂತ್ರ ಇಲ್ಲಿದೆ. ಕೈಯ ಐದು ಬೆರಳುಗಳು ಯಾವ್ಯಾವುದೆಂದು ಮಗು ಈ ಹಾಡಿನ ಮೂಲಕವೇ ಪರಿಚಯಿಸಿಕೊಂಡು ತನ್ನ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳುತ್ತದೆ.

ಗುಂಪಿನಲ್ಲಿ ಆಡುವ ಈ ಮೇಲಿನ ಆಟಗಳಲ್ಲಿ ಹೆಣ್ಣು, ಗಂಡೆಂಬ ವ್ಯತ್ಯಾಸಗಳನ್ನು ಮೀರಿದ ಮಕ್ಕಳ ನಡುವಿನ ಬಾಂಧವ್ಯವನ್ನು ಬೆಸೆಯುವ, ಜೀವನ ಪ್ರೀತಿಯನ್ನು, ಸಹಬಾಳ್ವೆಯ ಪಾಠವನ್ನು ತಿಳಿಸುವ ರೀತಿಯನ್ನು ತಮ್ಮ ಅಂತರ್ಯದಲ್ಲಿ ಇರಿಸಿಕೊಂಡು ಮಕ್ಕಳಿಗೆ ಮನರಂಜನೆಯನ್ನು ಒದಗಿಸುವುದನ್ನು ಕಾಣಬಹುದಾಗಿದೆ.

## ೪೪. ಗಾಳಿಪಟ ಕಳಿ (ಗಾಳಿಪಟದಾಟ):



ಜನಪ್ರಿಯ ಜನಪದ ಆಟಗಳಲ್ಲಿ ಇದೂ ಒಂದು. ಸಾಮಾನ್ಯವಾಗಿ ಮಳೆಗಾಲದ ಆರಂಭದ ಸಮಯದಲ್ಲಿ ಆಕಾಶದಲ್ಲಿ ಮೋಡಗಳ ಚಲನೆಯಿಂದಾಗಿ ಗಾಳಿ ಹೆಚ್ಚಾಗಿರುವಾಗ ಈ ಆಟವನ್ನು ಆಡುತ್ತಾರೆ. ವಿವಿಧ ಆಕಾರಗಳಲ್ಲಿ ಬಣ್ಣದ ಕಾಗದ ಹಾಗೂ ತೆಳು ಬಿದಿರು ಕಡ್ಡಿಗಳಿಂದ ವರ್ಣಮಯವಾದ ಗಾಳಿಪಟಗಳನ್ನು ತಯಾರಿಸಿ ಮಕ್ಕಳು ಬಯಲಿನಲ್ಲಿ ಅವುಗಳನ್ನು ಹಾರಿಬಿಡುತ್ತಾರೆ. ಕೆಲವು ಪಟಗಳಿಗೆ ಬಾಲಂಗೋಚಿ ಇರುತ್ತದೆ. ಈ ಗಾಳಿಪಟದ ನಡುವಿನಲ್ಲಿ ಸೂತ್ರದ ದಾರವನ್ನು ಕಟ್ಟಲಾಗಿರುತ್ತದೆ. ಇದು ಪಟ ಹಾರಲು ಅನುಕೂಲವಾಗುವಂತೆ ಕಟ್ಟಲಾಗಿರುತ್ತದೆ. ಯಾರು ಹಾರಿಸಿದ ಗಾಳಿ ಪಟವು ಹೆಚ್ಚು ಎತ್ತರಕ್ಕೆ ಹಾರುತ್ತದೆಂದು ಕುತೂಹಲದಿಂದ ಮಕ್ಕಳು ವೀಕ್ಷಿಸುತ್ತಾರೆ. ಭಾರತದ ಇತರೆ ಕಡೆಗಳಲ್ಲಿ ಇದೊಂದು ವಿಶೇಷವಾದ ಆಟವಾಗಿ ಗುರುತಿಸಿರುವಷ್ಟು ಪ್ರಾಮುಖ್ಯತೆಯನ್ನು ಕೊಡವರಲ್ಲಿ ಈ ಆಟ ಪಡೆದುಕೊಂಡಿಲ್ಲವೆಂದೇ ಹೇಳಬೇಕು.

ಸಂಖ್ಯೆಯ ನಿರ್ಬಂಧವಿಲ್ಲದೆ ಎಷ್ಟುಜನ ಮಕ್ಕಳು ಬೇಕಾದರೂ (ಗಂಡು ಮಕ್ಕಳು, ಹೆಣ್ಣು ಮಕ್ಕಳೂ ಸೇರಿದಂತೆ) ಈ ಆಟದಲ್ಲಿ ಭಾಗವಹಿಸಬಹುದು. 'ಜೀವನ'ವನ್ನು ಗಾಳಿಪಟಕ್ಕೆ ಹೋಲಿಸುವ ರೀತಿಯೂ ನಿತ್ಯದಲ್ಲಿ ಬಳಕೆಯಲ್ಲಿದೆ.

## ೪೫. ಬಾಣಬುಡುವ ಕಳಿ (ಬಾಣಬಿಡುವ ಆಟ):

ಮಕ್ಕಳು ಕಾಗದದಲ್ಲಿ ಬಾಣವನ್ನು ಮಾಡಿ ಅದನ್ನು ಮತ್ತೊಬ್ಬರಿಗೆ ಬೀಸಿ ಒಗೆಯುತ್ತಾ ಆಡುವ ಆಟ ಇದಾಗಿದೆ. ಗಂಡು ಮಕ್ಕಳು, ಹೆಣ್ಣುಮಕ್ಕಳು ಸೇರಿಕೊಂಡು ಒಂದು ಕಾಗದವನ್ನು ತೆಗೆದುಕೊಂಡು ಅದನ್ನು ಸಣ್ಣದಾಗಿ ಬಾಣದ ಆಕಾರ ಬರುವಂತೆ ಮಡಚುತ್ತಾರೆ. ಅನಂತರದಲ್ಲಿ ಅದರ ಮೊನಚಾದ ಭಾಗವನ್ನು ಗುರಿಯಾಗಿಸಿ ಹಿಂಬದಿಯಲ್ಲಿ ಹಿಡಿದುಕೊಂಡು ಎದುರಿನಲ್ಲಿರುವವರಿಗೆ ಎಸೆಯುತ್ತಾರೆ. ಅವರು ಬಾಣ ತಾಗದಂತೆ ತಪ್ಪಿಸಿಕೊಂಡು ಅಲ್ಲೇ ಸುತ್ತ ಮುತ್ತ ಓಡಾಡುತ್ತಾರೆ. ಬಾಣ ಮುಟ್ಟಿದರೆ ಆತ ಔಟಾಗುತ್ತಾನೆ. ಶತ್ರುಗಳನ್ನು, ಗುರುತಿಸಿ ಗುರಿಯಿಟ್ಟು ಹೊಡೆಯಲು ಅಭ್ಯಾಸ ಮಾಡುವಂತೆ ಈ ಆಟವಿದೆ.

ಕೊಡವರಲ್ಲಿ 'ಬೇಟೆ' ಸಂಪ್ರದಾಯದ ಭಾಗವಾಗಿಯೇ ಬರುತ್ತದೆ. ಇಂತಹ ಬೇಟೆಯಲ್ಲಿ ತೊಡಗಿಕೊಳ್ಳುವವನು ಗುರಿಇಟ್ಟು ಗುಂಡಿಡುವುದನ್ನು ಕಲಿಯಬೇಕಾಗುತ್ತದೆ. ಕ್ಷಾತ್ರಗುಣವನ್ನು ಬಾಲ್ಯದಲ್ಲೇ ಬಿಂಬಿಸುವಂತೆ ಈ ಆಟವು ಕಂಡು ಬರುತ್ತದೆ. ಕೊಡವ ಹೆಂಗಸರೂ ಬಂದೂಕಿನ ಬಳಕೆಯಲ್ಲಿ ನಿಪುಣೆಯರಾಗಿರುವುದರಿಂದ ಮಕ್ಕಳಾಟದಲ್ಲೂ ಹೆಣ್ಣು-ಮಕ್ಕಳೂ ಈ ಆಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ.

## ೪೬. ಉಯ್ಯಾಲೆಕಳಿ (ಉಯ್ಯಾಲೆಆಟ):

ಮಕ್ಕಳು ಸಂಭ್ರಮ ಪಡುವ ಬಹಳ ಸುಂದರವಾದ ಆಟವಿದು. ಮನೆಯ ಪಕ್ಕದ ಮರದ ಬಾಗಿರುವ ಕೊಂಬೆಗೆ ಕಾಡಿನ ಬಳ್ಳಿಯನ್ನೇ ಕಟ್ಟಿ ಅಥವಾ ಹಗ್ಗವನ್ನು ಕಟ್ಟಿ ಉಯ್ಯಾಲೆಯಾಡುವುದು. ಕೆಲವೊಮ್ಮೆ ಬಾಗಿದ ಮರದ ಕೊಂಬೆಯ ಮೇಲೆ ಒಬ್ಬರು ಕುಳಿತುಕೊಂಡು ಉಳಿದವರು ಆ ಕೊಂಬೆಯನ್ನು ನೆಲದವರೆಗೆ ಕೆಳಗೆಳೆದು ಮೇಲಕ್ಕೆ ಬಿಡುತ್ತಾ ಆಡುವುದು. ಇಂದು ಪೇಟೆಗಳಲ್ಲಿ ಸಿಗುವ ರೆಡಿಮೇಡ್ ಉಯ್ಯಾಲೆಗಳು ಮನೆಯೊಳಗೆ ಬಂದು ಈ ಮೂಲದ ಆಟದ ಸಂಭ್ರಮ ಇಲ್ಲವಾಗಿದೆ.

# ಹೆಣ್ಣುಮಕ್ಕಳ ಆಟಗಳು

ಹೆಣ್ಣುಮಕ್ಕಳು ಮಾತ್ರ ಗುಂಪಿನಲ್ಲಿ ಅಥವಾ ಒಂಟಿಯಾಗಿ ಆಡುವ ಆಟಗಳನ್ನು ಈ ಭಾಗದಲ್ಲಿ ಗುರುತಿಸಲಾಗಿದೆ.

## ೧. ಕಲ್ಲ್‌ಪರ ಕಳಿ/ಕಲ್ಲ್‌ಕಳಿ/ಕೊತ್ತಿಪರ ಕಳಿ (ಆಣೆಕಲ್ಲಾಟ):

ಬಹುಪಾಲು ಅಳಿವಿನ ಅಂಚಿನಲ್ಲಿರುವ ಪ್ರಾಚೀನ ಆಟಗಳಲ್ಲಿ ಇದೂ ಒಂದು. ಈ ಆಟಕ್ಕೆ ಕನಿಷ್ಟ ಇಬ್ಬರು ಬೇಕು. ಗರಿಷ್ಟ ಮಿತಿ ಇಲ್ಲದೆ ಎಷ್ಟು ಜನರಾದರೂ ಇರಬಹುದು. ಕೆಲವೊಮ್ಮೆ ಬಹಳ ಅಪರೂಪಕ್ಕೆ ಒಬ್ಬಳೇ ಹೆಣ್ಣು ಮಗೂ ಕೂಡ ಈ ಆಟವನ್ನು ತನ್ನಷ್ಟಕ್ಕೆ ತಾನೇ ಆಡುತ್ತಾಳೆ. ಹೊರಾಂಗಣದ ಆಟವಾಗಿ ಆಡಬಹುದಾದರೂ ಹೆಚ್ಚಾಗಿ ಒಳಾಂಗಣದ ಆಟವಾಗಿಯೇ ಪ್ರಸಿದ್ಧವಾಗಿರುವ ಆಟವಿದು. ಕಲ್ಲುಗಳ ಸಂಖ್ಯೆಯನ್ನು ಮುಖ್ಯವಾಗಿಟ್ಟುಕೊಂಡು ಆಡುವ ವಿಧಾನದಲ್ಲೂ ವ್ಯತ್ಯಾಸಗಳಿರುತ್ತವೆ. ಸಾಮಾನ್ಯವಾಗಿ ಐದು ಕಲ್ಲುಗಳಲ್ಲಿ ಅಥವಾ ಏಳು ಕಲ್ಲುಗಳಲ್ಲಿ ಆಟವಾಡುತ್ತಾರೆ.


ದಾರಿಯಲ್ಲಿ ಸಿಗುವ ಸಣ್ಣಸಣ್ಣ ಕಲ್ಲುಗಳನ್ನು ಹೆಕ್ಕಿಕೊಂಡು ಅವುಗಳನ್ನು ಚೂಪಾದ ದೊಡ್ಡಕಲ್ಲುಗಳಿಗೆ ಉಜ್ಜಿ ಉರುಟಾಗಿಸಿಕೊಳ್ಳುತ್ತಾರೆ. ಇಬ್ಬರಿದ್ದರೆ, ಇಬ್ಬರೂ ಎದುರು ಬದುರಾಗಿ ಕುಳಿತುಕೊಂಡು ಮೊದಲು ಆಡುವವಳು ಕಲ್ಲುಗಳನ್ನು ನೆಲದ ಮೇಲೆ ಹರಡುತ್ತಾಳೆ. ಅನಂತರ ಅವುಗಳಲ್ಲಿ ಒಂದು ಹರಳನ್ನು ತೆಗೆದುಕೊಂಡು ಮೇಲಕ್ಕೆ

ಹಾರಿಸುತ್ತಾಳೆ. ಮೇಲೆ ಹಾರಿಸಿದ ಕಲ್ಲು ಕೆಳಗೆ ಬೀಳುವುದರೊಳಗೆ ನೆಲದ ಮೇಲಿನ ಕಲ್ಲು ಹರಳನ್ನು ಒಂದೊಂದಾಗಿ ಎತ್ತಿಕೊಳ್ಳುತ್ತಾಳೆ. ಜೊತೆಗೆ ಮೇಲಕ್ಕೆ ಹಾರಿಸಿದ ಕಲ್ಲು ನೆಲಕ್ಕೆ ಬೀಳದಂತೆ ಹಿಡಿಯುತ್ತಾಳೆ. ಹೀಗೆ ಹಿಡಿಯುತ್ತಲೇ ಕೆಳಗಿರುವ ಎಲ್ಲಾ ಕಲ್ಲುಗಳನ್ನು ಆರಿಸಿಕೊಂಡಾಗ ಒಂದು ಆಟ ಮುಕ್ತಾಯವಾಗುತ್ತದೆ. ಆಕಸ್ಮಾತ್ ಮೇಲೆ ಹಾರಿಸಿದ ಕಲ್ಲು ನೆಲಕ್ಕೆ ಬಿದ್ದರೆ ಅವರು ಆಟದಲ್ಲಿ ಸೋತಂತೆ, ಅವರ ಆಟ ಅಲ್ಲಿಗೆ ಮುಗಿಯುತ್ತದೆ.

ಕಲ್ಲುಗಳನ್ನು ನೆಲದಲ್ಲಿ ಹರಡಿ ಅವುಗಳಲ್ಲಿ ಒಂದನ್ನು ಆರಿಸಿಕೊಂಡು ಮೊದಲ ಸುತ್ತಿನಲ್ಲಿ ಆ ಕಲ್ಲು ಹರಳನ್ನು ಮೇಲಕ್ಕೆ ಎಸೆಯಬೇಕು. ಆ ಕಲ್ಲು ಕೆಳಗೆ ಬರುವಷ್ಟರಲ್ಲಿ ನೆಲದಲ್ಲಿ ಹರಡಿದ ಕಲ್ಲನೊಂದನ್ನು ಎತ್ತಿಕೊಂಡು ಅದರ ಜೊತೆಗೆ ಮೇಲಿಂದ ಬರುವ ಕಲ್ಲನ್ನು ಹಿಡಿಯಬೇಕು. ಹೀಗೆ ಎಲ್ಲಾ ಕಲ್ಲುಗಳನ್ನು ಎತ್ತಿದ ಅನಂತರ ಎರಡನೆಯ ಸುತ್ತಿನಲ್ಲಿ ಮೇಲಕ್ಕೆಸೆದ ಕಲ್ಲು ಕೆಳಗೆ ಬರುವುದರೊಳಗೆ ಒಟ್ಟಿಗೆ ಎರಡೆರಡು ಕಲ್ಲುಗಳನ್ನು ಎತ್ತಿಕೊಳ್ಳಬೇಕು. ಮೂರನೆಯ ಸಲ ಒಂದು ಕಲ್ಲನ್ನು ಮೇಲಕ್ಕೆ ಎಸೆದು ಅದನ್ನು ಕೈಯ ಮೇಲ್ಭಾಗಕ್ಕೆ ಬೀಳಿಸಿಕೊಂಡು ಆ ಕಲ್ಲು ಬೀಳದಂತೆ ನೆಲದಲ್ಲಿ ಹರಡಿರುವ ಕಲ್ಲುಗಳನ್ನು ಎಡಗೈಯನ್ನು ನೆಲದಲ್ಲಿ ಡುಬ್ಬದಂತೆ ಇಟ್ಟು ಅದರೊಳಗೆ ಸೇರಿಸಬೇಕು. ಕೊನೆಗೆ ಎಲ್ಲಾಕಲ್ಲುಗಳನ್ನು ಒಟ್ಟಿಗೇ ಮೇಲಕ್ಕೆ ಎಸೆದು ಅವುಗಳಲ್ಲಿ ಮೂರುಕಲ್ಲುಗಳನ್ನು ಮಾತ್ರ ಮುಂಗೈಯ ಮೇಲೆ ಬೀಳಿಸಿದರೆ ಆಟ ಪೂರ್ಣವಾಗಿ ಆಡಿದವರು ಗೆದ್ದಂತೆ. ಹೀಗೆ ಪ್ರತಿಯೊಬ್ಬರೂ ಸರದಿಯಂತೆ ಆಟವನ್ನು ಮುಂದುವರೆಸುತ್ತಾರೆ. ಆಡುವಾಗ ಒಂದೇ ಕೈಯಲ್ಲಿ ಆಡುವ, ಹಾಗೆಯೇ ಎರಡೂ ಕೈಗಳನ್ನೂ ಸೇರಿಸಿ ಆಡುವ ಕ್ರಮ ಜಾರಿಯಲ್ಲಿದೆ. ಮೇಲಕ್ಕೆಸೆದ ಕಲ್ಲು ಕೆಳಗೆ ಬೀಳುವ ಮೊದಲೇ ನೆಲದಲ್ಲಿರುವ ಕಲ್ಲುಗಳನ್ನು ಎರಡೂ ಕೈಗಳಲ್ಲಿ ಹೆಕ್ಕಿ ತೆಗೆಯಬೇಕು. ಕನಿಷ್ಟ ಸಮಯದೊಳಗೆ ಕೈಚಳಕ ತೋರಿಸುವ ಜಾಣ್ಮೆಯನ್ನು ಈ ಆಟ ಪ್ರದರ್ಶಿಸುತ್ತದೆ.

ಕವಿಗಳೂ ಕೂಡ ತಮ್ಮ ಕಾವ್ಯಗಳಲ್ಲಿ ಕೆಲವಾರು ಆಟಗಳನ್ನು ಉಲ್ಲೇಖಿಸಿದ್ದಾರೆ. ಇಬ್ಬರು ಹುಡುಗಿಯರು ಎದುರು ಬದುರು ಕುಳಿತು ಆಡುವ ಅಣೆಕಲ್ಲಾಟವನ್ನು ನಂಜುಂಡ ಕವಿ "ಹೆಣ್ಣು ಕಂಡರಿಯದರಣ್ಯವಾಸಿಗಳ ತಂದಣ್ಣೆ ಕಲ್ಲಾಡಿ ತೋರಿಸುವೆನು" ಎಂದು ಪ್ರಸ್ತಾಪಿಸಿದ್ದಾನೆ. ಈ ಆಟದ ಉಲ್ಲೇಖ ಲಕ್ಷ್ಮೀಶ ಕವಿಯ 'ಜೈಮಿನಿಭಾರತ' ದಲ್ಲೂ (೨೧-೧೨, ೨೮-೪) ಬಂದಿದೆ. ಇಂದು ಆಧುನಿಕ ಆಟಗಳು ಸೇರಿಕೊಂಡು ಶಾಲೆ ಹಾಗೂ ಮನೆಗಳಲ್ಲಿ ಮಕ್ಕಳು ಗ್ರಾಮೀಣ ಆಟಗಳನ್ನು ಆಡುವುದನ್ನೇ ಕಲಿಯುತ್ತಿಲ್ಲ.

## ೧. ಕುಂಟಿಕಳಿ (ಕುಂಟಾಟ):




ನಶಿಸುವ ಅಂಚಿನಲ್ಲಿರುವ ಅತ್ಯಂತ ಪ್ರಾಚೀನ ಜನಪದ ಆಟವಿದು. ಕನಿಷ್ಟ ಇಬ್ಬರಿದ್ದು ಗರಿಷ್ಟ ಮಿತಿ ಇರದೆ ಹೆಣ್ಣು ಮಕ್ಕಳೇ ಗುಂಪು ಸೇರಿಕೊಂಡು ಆಡುವ ಆಟವಿದು. ಹೊರಾಂಗಣದ ಆಟವಾಗಿರುವ ಇದನ್ನು ಸಾಮಾನ್ಯವಾಗಿ ಮಳೆಗಾಲ ಬಿಟ್ಟು ಇನ್ನುಳಿದ ಎಲ್ಲಾ ಕಾಲದಲ್ಲೂ ಆಡಲಾಗುತ್ತದೆ. ಯಾವುದೇ ಸಾಮಗ್ರಿಗಳು ಈ ಆಟಕ್ಕೆ ಬೇಕಾಗಿಲ್ಲ. ಒಂದು ಕಾಲನ್ನು ಕುಂಟುತ್ತ ಆಡುವ ಆಟವಾದ್ದರಿಂದ ಇದಕ್ಕೆ 'ಕುಂಟಾಟ' ವೆನ್ನುತ್ತಾರೆ. ಆಟದ ನಡುವೆ ಎತ್ತಿರುವ ಕಾಲನ್ನು ಇನ್ನೊಂದು ಕಾಲ ಮೇಲಿಟ್ಟು ನಿಲ್ಲುವುದಾಗಲಿ ಇಲ್ಲವೇ ಕಾಲನ್ನು ನೆಲಮುಟ್ಟಿಸಿ ನಿಲ್ಲುವುದಾಗಲಿ ಮಾಡಬಾರದು ಹಾಗೆ ಮಾಡಿದರೆ ಅವರು ಸೋತಂತೆ.

ಸಾಮಾನ್ಯವಾಗಿ ಬಯಲಿನಲ್ಲಿ ಎಲ್ಲೆಂದರಲ್ಲಿ ಕುಂಟಾಟವನ್ನು ಆಡದೆ ಒಂದು ನಿರ್ದಿಷ್ಟ ಗೆರೆಯನ್ನು ವೃತ್ತಾಕಾರವಾಗಿ ಅಥವಾ ಚೌಕಾಕಾರವಾಗಿ ಹಾಕಿ ಆಟವನ್ನಾಡಲು ಒಂದು ಚೌಕಟ್ಟನ್ನು ಇಟ್ಟುಕೊಳ್ಳಲಾಗುತ್ತದೆ. ಆಟವಾಡಲು ಬಯಸುವ ಮಕ್ಕಳೆಲ್ಲರೂ


ಆ ವೃತ್ತದೊಳಗೆ ಸೇರಿಕೊಂಡಿರುತ್ತಾರೆ. ಒಬ್ಬರು ಕುಂಟುತ್ತಾ ಉಳಿದವರನ್ನು ಅಟ್ಟಿಸಿಕೊಂಡು ಹಿಡಿಯುವಂತೆ/ಮುಟ್ಟುವಂತೆ ತೀರ್ಮಾನಿಸಿಕೊಳ್ಳುತ್ತಾರೆ. ಕುಂಟುವವರು ಕುಂಟುವುದನ್ನು ಆರಂಭಿಸಿದ ಮೇಲೆ ಉಳಿದವರ್‍ಯಾರು ವೃತ್ತದಿಂದ ಹೊರಗಡೆಗೆ ಹೋಗುವಂತಿಲ್ಲ. ಹೋದರೆ ಅವರು ಔಟಾಗುತ್ತಾರೆ. ಜಾಣ್ಮೆಯಿಂದ ತಮ್ಮನ್ನು ಕುಂಟುತ್ತಾ ಮುಟ್ಟಲು ಬಂದವಳಿಂದ ತಪ್ಪಿಸಿಕೊಳ್ಳುತ್ತಾ ವೃತ್ತದೊಳಗೇ ಓಡಬೇಕು. ಅಕಾಸ್ಮಾತ್ ಆಕೆ ಮುಟ್ಟಿದರೆ ಮುಟ್ಟಿದವರು ಮುಂದಿನ ಸರದಿಗೆ ಕುಂಟುವವರಾಗುತ್ತರೆ. ಹೀಗೆ ಆಟ ಮುಂದುವರಿಯುತ್ತದೆ. ಸೀಮಿತ ಚೌಕಟ್ಟಿನೊಳಗೆ ಚಾಣಾಕ್ಷತನದಿಂದ ತನ್ನನ್ನು ರಕ್ಷಿಸಿಕೊಳ್ಳಬೇಕಾದ ಜೀವನ ಪಾಠವನ್ನು ಕಲಿಸುವ ಆಟವಾಗಿ ಇದು ಕಂಡು ಬರುತ್ತದೆ.

## ೩. ಚಿಲ್‌ಕಿ ಕಳಿ (ಕುಂಟಲಪಿ ಆಟ/ಕುಂಟೆ ಬಿಲ್ಲೆ ಆಟ):

ಇದು ಕುಂಟುತ್ತಾ ಆಡುವ ಆಟದ ಮತ್ತೊಂದು ರೀತಿಯಾಗಿದೆ. ಸಾಧಾರಣವಾಗಿ ಮಳೆಗಾಲವನ್ನು ಹೊರತುಪಡಿಸಿ ಉಳಿದ ಎಲ್ಲಾ ಕಾಲದಲ್ಲೂ ಆಡುವ ಹೊರಾಂಗಣದ ಆಟವಿದು. ಕನಿಷ್ಟ ಇಬ್ಬರಿದ್ದು ಗರಿಷ್ಟ ಸಂಖ್ಯೆಗೆ ಮಿತಿ ಇಲ್ಲ. ನೆಲದ ಮೇಲೆ ನಾಲ್ಕು ಅಥವಾ ೮ ಚೌಕಗಳು ಬರುವಂತೆ ಗೆರೆ ಎಳೆದು ಮನೆಗಳನ್ನು ಮಾಡಿಕೊಳ್ಳಲಾಗುತ್ತದೆ. ಈ ಆಟಕ್ಕೆ ಬೇಕಾಗುವ ಸಾಧನವೆಂದರೆ ತೆಳುವಾಗಿರುವ ಹೆಂಚಿನ ಚೂರು ಅಥವಾ ಕಲ್ಲಿನ ಚೂರು. ಸಾಮಾನ್ಯವಾಗಿ ಇತರ ಭಾಗಗಳಲ್ಲಿ ಇವುಗಳನ್ನು ಬಳಸಿದರೆ ಕೊಡಗಿನಲ್ಲಿ ಗಜ್ಜುಗದ ಕಾಯಿಯಂತೆ ಕಾಡಿನಲ್ಲಿ ಸಿಗುವ ಸ್ವಲ್ಪ ಅಗಲವಾದ ಬಿಲ್ಲೆಯಾಕಾರದ ಕಾಯಿಯನ್ನು ಅಂದರೆ 'ಚಿಲ್‌ಕಿ' ಯನ್ನು ಬಳಸುತ್ತಾರೆ. ಆದ್ದರಿಂದ ಇದಕ್ಕೆ 'ಚಿಲ್‌ಕಿಕಳಿ' ಎಂದೇ ಹೆಸರಿದೆ. ಇದು ಇತ್ತೀಚೆಗೆ ಬಹಳ ಅಪರೂಪವಾಗುತ್ತಿರುವ ನಶಿಸುವ ಅಂಚಿನಲ್ಲಿರುವ ಆಟವಾಗಿದೆ.



**ನಾಲ್ಕು ಮನೆಯ ಕುಂಟಲಪಿ ಆಟದ ಅಂಗಣ**



**ಎಂಟು ಮನೆಯ ಕುಂಟಲಪಿ ಆಟದ ಅಂಗಣ**

ಆಟವನ್ನು ಆರಂಭಿಸುವಾಗ ಆಟದ ಅಂಗಣದ ಮುಂದೆ ನಿಂತು ಸ್ವಲ್ಪ ಬಗ್ಗಿ ಕೈಯಿಂದ 'ಚಿಲಕಿ' (ಹಲಪಿ) ಯನ್ನು ಅಂಗಣದ ಬಲಭಾಗದ ಮೊದಲ ಮನೆಗೆ ಹಾಕುತ್ತಾರೆ. ಅನಂತರ ಕುಂಟುತ್ತಾ ಒಂದು ಕಾಲಿನಲ್ಲೇ ಗೆರೆಯನ್ನು ಮೆಟ್ಟದ ಹಾಗೆ 'ಹಲಪಿ' ಯನ್ನು ಪ್ರತೀ ಮನೆಗೂ ದಾಟುಸುತ್ತಾ ಎಡಭಾಗದಿಂದ ಹೊರಗೆ ದಾಟಿಸಲಾಗುತ್ತದೆ. ದಾಟಿ ಅದು ಬಿದ್ದಿರುವ ಜಾಗಕ್ಕೆ ಕೊನೆಯ ಮನೆಯಿಂದ ಕುಪ್ಪಳಿಸಿ ಎರಡೂ ಕಾಲುಗಳನ್ನು ನೆಲಕ್ಕಿಡುತ್ತಾರೆ. ಹೀಗೆ ಪ್ರತೀ ಮನೆಗೂ ಹಲಪಿಯನ್ನು ಹಾಕಿ ಎಲ್ಲಾ ಮನೆಗಳನ್ನು ಗೆರೆಮುಟ್ಟದಂತೆ ದಾಟುತ್ತಾ ಬರುತ್ತಾರೆ. ಇದು ಮೊದಲ ಸುತ್ತಿನ ಆಟವಾದರೆ ಎರಡನೆಯ ಸುತ್ತಿನಲ್ಲಿ ಒಂದು ಕಣ್ಣನ್ನು ಮುಚ್ಚಿ ಅದರ ಮೇಲೆ ಹಲಪಿಯನ್ನಿಟ್ಟುಕೊಂಡು ಗೆರೆ ಮೆಟ್ಟದಂತೆ ಎಲ್ಲಾ ಮನೆಗಳೊಳಗೆ ಕಾಲಿಟ್ಟು (ಒಮ್ಮೆ ಕುಂಟುತ್ತಾ, ಮತ್ತೊಮ್ಮೆ ಎರಡೂ ಕಾಲುಗಳನ್ನು ನೆಲದಲ್ಲಿರಿಸುತ್ತಾ) ಮನೆಗಳಿಂದ ಹೊರಬರಲಾಗುತ್ತದೆ. ಅನಂತರ ತಲೆಯ ಮೇಲೆ ಹಲಪಿಯನ್ನಿಟ್ಟುಕೊಂಡು ಪ್ರತೀ ಮನೆಯನ್ನೂ ಕುಂಟುತ್ತಾ ದಾಟಿ ಬರಬೇಕು. ಮತ್ತೆ ಎಡದ ಅಂಗೈಯಲ್ಲಿ, ಬಲದ ಅಂಗೈಯಲ್ಲಿ ಕುಂಟುವ ಕಾಲಿನ ಬೆರಳುಗಳ ಮೇಲ್ಭಾಗದಲ್ಲಿ ಹಲಪಿಯನ್ನಿಟ್ಟುಕೊಂಡು ಮನೆಗಳನ್ನು ದಾಟುತ್ತಾ ಬರಬೇಕು. ಈ ನಡುವೆ ಯಾವುದೇ ರೀತಿಯ ಆಟದಲ್ಲೂ ಹಲಪಿ ನೆಲಕ್ಕೆ ಬಿದ್ದರೆ, ಗೆರೆಯ ಮೇಲೆ ಬಿದ್ದರೆ, ಕಾಲಿನಿಂದ ಗೆರೆಯನ್ನು ಮೆಟ್ಟಿದರೆ 'ಔಟ್' ಆಗುತ್ತಾರೆ. ಎಂಟು ಮನೆಯ ಆಟವನ್ನು, ನಾಲ್ಕು ಮನೆಯ ಆಟವನ್ನು ಇದೇ ಕ್ರಮದಲ್ಲಿ

ಆಡುತ್ತಾರೆ. ಕೆಲವು ಕಡೆಗಳಲ್ಲಿ ಆರು ಮನೆಯ ಆಟಗಳನ್ನು ಆಡಲಾಗುತ್ತದೆ. ಇಲ್ಲಿ ಕೇವಲ ಮನೆಗಳ ಸಂಖ್ಯೆಯಲ್ಲಿ ವ್ಯತ್ಯಾಸವಿದೆಯೇ ಹೊರತು ಆಟದ ಕ್ರಮದಲ್ಲಿ ಯಾವುದೇ ವ್ಯತ್ಯಾಸಗಳು ಕಂಡುಬರುವುದಿಲ್ಲ. ಈ ಎಲ್ಲಾ ಆಟದ ಕ್ರಮಗಳನ್ನು ಹಲಪಿಯನ್ನು ಬೀಳಿಸದೆ ಪೂರ್ಣಗೊಳಿಸುತ್ತಾರೋ ಅವರು ಆಟದಲ್ಲಿ ಗೆಲ್ಲುತ್ತಾರೆ. ದೈಹಿಕ ವ್ಯಾಯಾಮದ ಜೊತೆಗೆ ನಾಜೂಕಿನಿಂದ ಕೆಲಸಗಳನ್ನು ಪೂರೈಸಲು ಕಲಿಯುವ ನಿಟ್ಟಿನಲ್ಲಿ ಈ ಆಟ ಹೆಚ್ಚು ಪರಿಣಾಮಕಾರಿಯಾಗಿ ಕಂಡು ಬರುತ್ತದೆ.

## ೪. ಬಳೆ ಚೂರ್ ಕಳಿ (ಬಳೆಚೂರಿನಾಟ):

ಒಡೆದು ಚೂರಾದ ಬಳೆಗಳ ಬಣ್ಣಬಣ್ಣದ ಚೂರುಗಳನ್ನು ಸಂಗ್ರಹಿಸಿಕೊಂಡು ಆಡುವ ಆಟವಿದು. ಕನಿಷ್ಟ ಇಬ್ಬರಿದ್ದು ಗರಿಷ್ಟ ಮಿತಿ ಇಲ್ಲದೆ ಎಷ್ಟು ಜನ ಹೆಣ್ಣುಮಕ್ಕಳಾದರೂ ಸೇರಿಕೊಂಡು ಗುಂಪಿನಲ್ಲಿ ಆಡುವ ಆಟವಿದು. ಬಳೆ ಚೂರುಗಳೇ ಇಲ್ಲಿ ಆಟದ ಸಾಧನಗಳು. ಹೆಚ್ಚು ಜನರಿದ್ದಾಗ ಎರಡು ಸಮ ಸಂಖ್ಯೆಯ ಗುಂಪುಗಳನ್ನು ಕಟ್ಟಿಕೊಂಡು ಈ ಆಟವನ್ನು ಆಡುತ್ತಾರೆ. ಎರಡೂ ಗುಂಪಿನವರು ಯಾವುದಾದರೂ ಒಂದೊಂದು ಬಣ್ಣದ ಬಳೆಯ ಚೂರನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಅನಂತರ ಒಬ್ಬರು ಎಲ್ಲಾ ಬಳೆಯ ಚೂರುಗಳನ್ನು ಕೈಮೇಲೆ (ಮೇಂಗೈಗೆ) ಹಾಕಿಕೊಂಡು ಅವರಿಗೆ ಬೇಕಾದ ಬಣ್ಣದ ಚೂರನ್ನು ಮಾತ್ರ ಕೈಮೇಲೆ ಉಳಿಸಿಕೊಂಡು ಉಳಿದುದೆಲ್ಲವನ್ನು ಕೈಯಿಂದ ಕೆಳಗೆ ಬೀಳಿಸಬೇಕು. ಇದರಲ್ಲಿ ಗೆದ್ದವರು ಮೊದಲು ಆಟವನ್ನು ಆರಂಭಿಸುತ್ತಾರೆ. ಮತ್ತೊಂದು ತಂಡದವರನ್ನು ಆಟವಾಡುವ ತಂಡದವರು ಯಾವ ಬಣ್ಣದ ಬಳೆ ಚೂರನ್ನು ಉಳಿಸಬೇಕೆಂದು ಕೇಳುತ್ತಾರೆ. ಅವರು ಒಂದು ಬಣ್ಣವನ್ನು ಹೇಳಿದ ಅನಂತರ ಆಡುವ ಗುಂಪಿನಲ್ಲಿ ಒಬ್ಬರು ಸಂಗ್ರಹಿಸಿದ ಬಳೆಯ ಚೂರುಗಳನ್ನು ಸ್ವಲ್ಪ ಮೇಲಕ್ಕೆ ಗುಂಪಾಗಿ ಎಸೆದು ಅವುಗಳು ಬೀಳುವಾಗ ಕೈಬೆರಳುಗಳ ಹಿಂಬದಿಯನ್ನು ಜೊತೆ ಸೇರಿಸಿ ತೋರುತ್ತಾರೆ. ಅದರ ಮೇಲೆ ಬಿದ್ದ ಬಳೆಯ ಚುರುಗಳ ನಡುವೆ ವಿರುದ್ಧ ಗುಂಪಿನವರು ಹೇಳಿ ಬಣ್ಣದ ಬಳೆಯ ಚೂರು ಇಲ್ಲದಿದ್ದರೆ ಅವರು ಆಟದಲ್ಲಿ ಸೋತಂತೆ. ಗುಂಪಿನ ಮತ್ತೊಬ್ಬರು ಇದೇ ರೀತಿಯಲ್ಲಿ ಆಟವನ್ನು ಮುಂದುವರೆಸುತ್ತಾರೆ. ಅವರ ಕೈ ಮೇಲೆ ವಿರುದ್ಧ ಗುಂಪಿನವರು ಹೇಳಿದ ಬಣ್ಣದ ಬಳೆಯ ಚೂರು ಬಿದ್ದಾಗ ಅದೊಂದನ್ನೇ ಕೈಮೇಲೆ ಉಳಿಸಿಕೊಂಡು ಉಳಿದಂತೆ ನೆಲದಲ್ಲಿ ಬಿದ್ದಿರುವ ಬಳೆಯ ಚೂರುಗಳೆಲ್ಲವನ್ನು

ಅದೇ ಕೈಯಿಂದ ಹೆಕ್ಕಬೇಕು. ಈ ನಡುವೆ ಕೈಯ ಮೇಲಿರುವ ಬಳೆಯ ಚೂರು ಕೆಳಗೆ ಬೀಳಬಾರದು. ಆಕಸ್ಮಾತ್ ಬಿದ್ದರೆ ಅವರು ಆಟದಲ್ಲಿ ಸೋತಂತೆ. ಅದನ್ನು ಬೀಳಿಸದೆ ಉಳಿದೆಲ್ಲಾ ಬಳೆ ಚೂರುಗಳನ್ನು ಹೆಕ್ಕಿದರೆ ಅವರು ಆಟದಲ್ಲಿ ಗೆದ್ದಂತೆ. ಆ ಬಳೆಯ ಚೂರನ್ನು ಅವರೇ ಇಟ್ಟುಕೊಳ್ಳುತ್ತಾರೆ. ಮತ್ತೆ ಅದೇ ಕ್ರಮದಲ್ಲಿ ಆಟ ಮುಂದುವರಿಯುತ್ತದೆ. ಎಲ್ಲರ ಆಟದ ಸರದಿ ಮುಗಿದ ಅನಂತರ ಎಲ್ಲರಲ್ಲಿರುವ ಬಳೆಚೂರುಗಳನ್ನು ಎಣಿಸಿ ಯಾರಿಗೆ ಹೆಚ್ಚು ಸಂಖ್ಯೆಯ ಬಳೆಚೂರುಗಳು ದೊರಕಿರುತ್ತದೋ ಅವರು ಗೆಲ್ಲುತ್ತಾರೆ.

ಕರ್ನಾಟಕದ ಇತರ ಕಡೆಗಳಲ್ಲಿ ಈ ಆಟವನ್ನು ಬೇರೊಂದು ರೀತಿಯಲ್ಲಿ ಆಡಲಾಗುತ್ತದೆ. ನೆಲದಲ್ಲಿ "ಸಣ್ಣ ಸಣ್ಣ ಮೂರು ಕುಣಿಗಳನ್ನು ತೆಗೆದು ಅದರಲ್ಲಿ ಯಾವುದಾದರೊಂದು ಕುಣಿಯಲ್ಲಿ ಬಳೆಚೂರುಗಳನ್ನು ಇಟ್ಟು ಮಣ್ಣುಹಾಕಿ ಮುಚ್ಚಲಾಗುತ್ತದೆ. ಇದರಂತೆ ಇನ್ನೆರಡು ಕುಣಿಗಳನ್ನೂ ಮುಚ್ಚಲಾಗುತ್ತದೆ. ಎರಡು ತಂಡಗಳಲ್ಲಿ ಹೀಗೆ ಮಾಡಿ ಮೊದಲು ಯಾರು ಆಡಬೇಕೆಂಬುದನ್ನು ನಿರ್ಧರಿಸಿ 'ನಮ್ಮ ಮನೆ ಹುಡುಕಲು ಬರ್ರಿ' ಎಂದು ಆಡುವವರಿಗೆ ಆಹ್ವಾನ ನೀಡಲಾಗುತ್ತದೆ. ಆಗ ಇವರು ಬಂದು ಸಮಾನವಾಗಿ ಮಣ್ಣು ಮುಚ್ಚಿದ ಮನೆಗಳನ್ನು ವೀಕ್ಷಿಸಿ ಯಾವ ಮನೆಯಲ್ಲಿ ಬಳೆಚೂರುಗಳಿರಬಹುದೆಂದು ಲೆಕ್ಕಾಚಾರ ಹಾಕಿ ಒಂದು ಮನೆಯ ಮಣ್ಣನ್ನು ತೆಗೆಯುತ್ತಾನೆ. ಅಲ್ಲಿ ಬಳೆಯ ಚೂರುಗಳಿದ್ದರೆ ಅವೆಲ್ಲವು ಆಡಲು ಬಂದವರಿಗೆ ಸಿಗುತ್ತವೆ. ಒಂದು ವೇಳೆ ಅಲ್ಲಿ ಬಳೆ ಚೂರುಗಳಿಲ್ಲದೆ ಬೇರೆ ಮನೆಯಲ್ಲಿದ್ದರೆ ಅವುಗಳನ್ನೇ ಮನೆಯವರು ತೆಗೆದು ತೋರಿಸಿ ಅಲ್ಲಿರುವ ಬಳೆಯ ಚೂರುಗಳ ಸಂಖ್ಯೆಯಷ್ಟೇ 'ಬಳೆ ಚೂರು ಕೊಡಿ' ಎಂದು ಕೇಳಿ ಪಡೆಯುತ್ತಾರೆ. ಇಲ್ಲಿ ಆಟ ಆಡುವ ಪರಸ್ಪರರ ಆಟದ ಮನೆಗಳು (ಕುಣಿ) ಮುಚ್ಚಿರುವುದನ್ನು ಕಾಣದ ಹಾಗೇ ಸ್ವಲ್ಪ ದೂರದಲ್ಲಿರಬೇಕು.

ಇನ್ನೊಂದು ರೀತಿಯ ಆಟದಲ್ಲಿ ಇಬ್ಬರು ಹೆಣ್ಣುಮಕ್ಕಳು ಎದುರು ಬದುರಾಗಿ ಕುಳಿತುಕೊಂಡು ಮರಳಿನ ಅಥವಾ ಮಣ್ಣಿನ ಗುಂಪೆ ಮಾಡಿ ಅದರಲ್ಲಿ ಬಳೆಚೂರು ಮುಚ್ಚಿಟ್ಟು ಆಡುವುದುಂಟು. ಇಲ್ಲಿ ಒಬ್ಬಳು ಒಂದು ಬಳೆಚೂರನ್ನು ತೆಗೆದುಕೊಂಡು ಎದುರುಕಡೆ ಕೂತವಳ ಗಮನ ಬೇರೆ ಕಡೆಗೆ ಹೋಗಿದೆ ಎಂಬುದನ್ನು ಗಮನಿಸಿ ಗುಂಪಿನ ಯಾವುದಾದರೊಂದು ಭಾಗದಲ್ಲಿ ಬಳೆಯ ಚೂರನ್ನು ಇಡುತ್ತಾಳೆ. ಎದುರಿನವಳಿಗೆ 'ಹುಡುಕು' ಎಂದು ಹೇಳಿದಾಗ ಅವಳು ಬಳೆ ಚೂರು ಇಟ್ಟ ಜಾಗ ಯಾವುದಿರ

ಬಹುದೆಂದು ಲೆಕ್ಕಿಸಿ ಒಂದು ಹಿಡಿ ಮಣ್ಣು ಅಥವಾ ಮರಳನ್ನು ತೆಗೆಯುತ್ತಾಳೆ. ಅದರಲ್ಲಿ ಬಳೆಚೂರು ಇದ್ದರೆ ಅದನ್ನು ಅವಳು ಗೆದ್ದಂತಾಗುತ್ತದೆ. ಒಂದು ವೇಳೆ ಅದರಲ್ಲಿ ಬಳೆಚೂರು ಇಲ್ಲದೆ ಹೋದರೆ ಆಗ ಮುಚ್ಚಿಟ್ಟವಳು ಅದನ್ನು ತೆಗೆದು ತೋರಿಸಿ ಸೋತವಳಿಂದ ಒಂದು ಬಳೆಚೂರನ್ನು ಪಡೆಯುತ್ತಾಳೆ. (ಜಾನಪದ ಆಟಗಳು, ಡಾ.ಮಲ್ಲಿಕಾರ್ಜುನ ಸಂ. ಮೇತ್ರಿ ಪು ೨೫, ೨೬).

ಇಂದು ಗಾಜಿನ ಬಳೆಗಳ ಸ್ಥಾನವನ್ನು ಪ್ಲಾಸ್ಟಿಕ್ ಹಾಗೂ ಇತರ ಅಲಂಕಾರಿಕ ಲೋಹದ ಬಳೆಗಳು ಆಕ್ರಮಿಸಿಕೊಂಡಿರುವುದರಿಂದ ಗಾಜಿನ ಬಳೆಗಳ ಬಳಕೆಯೂ ಕಡಿಮೆಯಾಗುತ್ತಿದೆ. ಅವುಗಳನ್ನು ಬಳಸಿಕೊಂಡು ಆಟವಾಡುವವರೂ ಕೂಡ ಕಡಿಮೆಯಾಗುತ್ತಿದ್ದು ಇಂದು ಅಳಿವಿನ ಅಂಚಿನ ಆಟವಾಗಿ ಇದು ಗುರುತಿಸಲ್ಪಡುತ್ತಿದೆ.

## ೫. ಕಂಬ ಕಳಿ (ಕಂಬದಾಟ):

ಒಳಾಂಗಣದ ಆಟವಾಗಿರುವ ಇದು ಪ್ರಾಚೀನ ಜನಪದ ಆಟಗಳಲ್ಲಿ ಒಂದಾಗಿದೆ. ಕಾಲದ ನಿರ್ಬಂಧವಿಲ್ಲದೆ ಆಡುವ ಒಳಾಂಗಣದ ಆಟ. ಕೆಲವೊಮ್ಮೆ ಅಂಗಳದಲ್ಲಿ, ಬಯಲಲ್ಲಿ ನೆಟ್ಟಿರುವ ಕಂಬಗಳಿದ್ದರೆ ಅದನ್ನು ಸುತ್ತುತ್ತಲೂ ಮಕ್ಕಳು ಆಟವಾಡುತ್ತಾರೆ. ಮನೆಯ ಒಳಗೆ ಕಂಬಗಳನ್ನು ಸುತ್ತುತ್ತಾ ಆಡುವ ಆಟವಿದು. ಯಾವುದೇ ವಿಶೇಷ ಸಾಮಗ್ರಿಗಳು ಈ ಆಟಕ್ಕೆ ಬೇಕಾಗಿಲ್ಲ. ಇಬ್ಬರು ಹೆಣ್ಣುಮಕ್ಕಳು ಸೇರಿ ಆಡುವ ಆಟವಿದು. ನೇರಕ್ಕೆ ಇರುವ ಎರಡು ಕಂಬಗಳನ್ನು ಸೇರಿಸಿ ಇಬ್ಬರೂ ಏಕಮುಖವಾಗಿ ಸುತ್ತುತ್ತಾರೆ. ಇಬ್ಬರಲ್ಲಿ ಒಬ್ಬಳು ತಪ್ಪಿಸಿಕೊಳ್ಳುವವಳು, ಮತ್ತೊಬ್ಬಳು ಆಕೆಯನ್ನು ಹಿಡಿಯುವವಳು. ತಪ್ಪಿಸಿಕೊಳ್ಳುವವಳು ಮುಂದಿನಿಂದ ಓಡುತ್ತಾಳೆ. ಅಟ್ಟಿಸಿಕೊಂಡು ಹೋಗುವವರು ಹಿಂದಿನಿಂದ ಓಡೋಡಿ ಬರುತ್ತಾಳೆ. ಹೀಗೆ ಇಬ್ಬರೂ ಕಂಬಗಳನ್ನು ಸುತ್ತುತ್ತಿದ್ದಾಗ ಅಟ್ಟಿಸಿಕೊಂಡು ಓಡುವವಳು ಮುಂದೆ ಓಡುತ್ತಿರುವವಳನ್ನು ಮುಟ್ಟಿದರೆ ಆಟ ಮುಗಿದು ಆಕೆ ಗೆದ್ದಂತೆ. ಮುಂದಿನ ಸಲಕ್ಕೆ ಇಬ್ಬರೂ ಸ್ಥಾನವ್ಯತ್ಯಾಸಮಾಡಿಕೊಂಡು ಆಟ ಮುಂದುವರಿಯುತ್ತದೆ. ಸಾಮಾನ್ಯವಾಗಿ ಸುಮಾರು ೬ ರಿಂದ ೧೫ ವರ್ಷ ವಯಸ್ಸಿನ ಮಕ್ಕಳು ಈ ಆಟವನ್ನು ಆಡುತ್ತಾರೆ.

## ೬. ಕವುಡಿ ಕಳಿ (ಕವುಡಿ ಆಟ/ಚೌಕಾಬಾರ ಆಟ/ಹುಣಸೇ ಬೀಜದಾಟ) :

ಕನಿಷ್ಟ ಇಬ್ಬರೂ ಅಥವಾ ಹೆಚ್ಚುಜನ ಹೆಣ್ಣು ಮಕ್ಕಳು ವೃತ್ತಾಕಾರವಾಗಿ ಕುಳಿತುಕೊಂಡು ಆಡುವ ಮುಖ್ಯವಾದ ಒಳಾಂಗಣದ ಆಟವಿದು. 'ಕವುಡಿ' ಇದ್ದರೆ ಕವುಡಿ ಇಲ್ಲದಿದ್ದರೆ ಹನೆಮರದ ಒಡೆದ ಕಾಯಿಗಳನ್ನು ಬಳಸುತ್ತಾರೆ. ಇದರ ಒಂದು ಬದಿ ಸಮತಟ್ಟಾಗಿಯೂ ಮತ್ತೊಂದು ಬದಿ ಉರುಟಾಗಿಯೂ ಇರುತ್ತದೆ. ಇವುಗಳು ಯಾವುದೂ ಸಿಗದಿದ್ದಾಗ ಹುಣಸೆ ಬೀಜವನ್ನು ಒಡೆದಾಗ ಅದರ ಒಂದು ಬದಿ ಸಿಪ್ಪೆ ಇದ್ದು ಮತ್ತೊಂದು ಬದಿ ಸಿಪ್ಪೆ ಇಲ್ಲದೆ ಇರುವುದನ್ನು ಆಟಕ್ಕೆ ಬಳಸುತ್ತಾರೆ. ಇಂತಹ ನಾಲ್ಕು ಬೀಜಗಳನ್ನು ಕೈಯ ನಡುವೆ ಇಟ್ಟು ಕುಲುಕಿ ನೆಲಕ್ಕೆ ಹರವಿದಾಗ ಎಲ್ಲವೂ ಮೇಲ್ಮುಖವಾಗಿ ಬಿದ್ದರೆ – ೪, ಎಲ್ಲವೂ ಕೆಳಮುಖವಾಗಿ ಬಿದ್ದರೆ – ೮, ಎರಡೆರಡು ಮೇಲ್ಮುಖ, ಕೆಳಮುಖವಾಗಿ ಬಿದ್ದರೆ – ೨, ಒಂದು ಕೆಳಮುಖ, ಎರಡು ಮೇಲ್ಮುಖವಾಗಿ ಬಿದ್ದರೆ – ೩, ಹೀಗೆ ಲೆಕ್ಕಹಾಕಿ ತಮ್ಮ ತಮ್ಮಲ್ಲೇ ಸ್ಪರ್ಧೆ ಕಟ್ಟುತ್ತಾರೆ. ಹೆಚ್ಚು ಸಂಖ್ಯೆ ಮಾಡಿದವರು ಆಟದಲ್ಲಿ ಗೆಲ್ಲುತ್ತಾರೆ.

ಆಧುನಿಕ ಸಂದರ್ಭದಲ್ಲಿ ಆಡುವ 'ಚೆಸ್' ಆಟದ ಆರಂಭಿಕ ರೂಪವಾಗಿ ಇದು ಕಂಡುಬರುತ್ತದೆ.

## ೭. ಟೀಚರ್ ಕಳಿ (ಟೀಚರ್ ಆಟ):

ಮಕ್ಕಳು ಶಾಲೆಗಳಲ್ಲಿ ಅಕ್ಷರಾಭ್ಯಾಸ ಮಾಡಿಸುವ ತಮ್ಮ ಅಧ್ಯಾಪಕರ ನಡೆನುಡಿಗಳನ್ನು ಅನುಕರಿಸುತ್ತಾ ಆಡುವ ಆಟವಿದು. ಆಧುನಿಕ ಶಿಕ್ಷಣ ವ್ಯವಸ್ಥೆ ಆರಂಭವಾಗುವುದಕ್ಕಿಂತ ಹಿಂದೆಯೂ ಕೂಡ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕಲಿಸುವ ಕ್ರಮ ಜಾರಿಯಲ್ಲಿತ್ತು. ಈ ಎಲ್ಲಾ ಸಂದರ್ಭಗಳಲ್ಲಿ ಮಕ್ಕಳಲ್ಲಿ ಬಹಳ ಸರಿಯಾದ ರೀತಿಯಲ್ಲಿ ಅನುಕರಣೆ ಮಾಡಲು ಸಾಧ್ಯವಿರುವವರು ಟೀಚರ್ ಆಗಿ ಕೈಯಲ್ಲಿ ಕೋಲು ಹಿಡಿದುಕೊಂಡು ಉಳಿದವರನ್ನೆಲ್ಲಾ ಮಕ್ಕಳಾಗಿಸಿ ಕಥೆ ಹೇಳುವ, ಮಗ್ಗಿ ಹೇಳಿಸುವ, ರೀತಿಯಲ್ಲಿ ಆಟವನ್ನು ಆಡಲಾಗುತ್ತದೆ. ಒಂದು ರೀತಿಯಲ್ಲಿ ಇದು ಮಕ್ಕಳು ಕಲಿತಿರುವುದನ್ನು ಪುನರ್‌ಮನನ ಮಾಡಿಕೊಳ್ಳುವುದರ ಮೂಲಕ ವಿಷಯದ ಸ್ಪಷ್ಟತೆ ಬರುತ್ತದೆ. ಮಕ್ಕಳು ಅನುಕರಿಸುವ ಟೀಚರ್‌ನ ನಡೆನುಡಿಗಳನ್ನು ಗಮನಿಸಿದರೆ ಮಕ್ಕಳು ಟೀಚರ್‌ನಲ್ಲಿ ಕಾಣಲು ಹೊರಡುವ, ಹುಡುಕುವ ಗುಣಗಳು ಮನೋವೈಜ್ಞಾನಿಕ


ದೃಷ್ಟಿಕೋನದಿಂದ ಕುತೂಹಲವನ್ನು ಮೂಡಿಸುವಂತಿರುತ್ತದೆ. ಇದು ಹೆಚ್ಚಾಗಿ ಪ್ರಾಥಮಿಕ ಶಾಲೆಯ ದಿನಗಳಲ್ಲಿ ಆಡುವ ಆಟವಾಗಿದೆ.

## ೮. ತೊಪ್ಪುಕಳಿ (ಸೊಪ್ಪಿನ ಆಟ):

ಇದು ಪ್ರಾಚೀನ ಜನಪದ ಆಟಗಳಲ್ಲಿ ಒಂದು. ಹೆಚ್ಚು ಸಂಖ್ಯೆಯ ಮಕ್ಕಳು ಗುಂಪಿನಲ್ಲಿ ಆಡುವ ಹೊರಾಂಗಣದ ಆಟವಾಗಿ ಇದು ಪ್ರಸಿದ್ಧ. ಬಯಲು ಅಥವಾ ಅಂಗಳದಲ್ಲಿ ಆಟವಾಡಬಯಸುವ ಮಕ್ಕಳು ಒಂದಷ್ಟು ಸೊಪ್ಪನ್ನು ಕುಯ್ದು ತರುತ್ತಾರೆ. ಅದನ್ನು ಒಂದು ವೃತ್ತವನ್ನು ಮಾಡಿ ಅದರ ನಡುವಿನಲ್ಲಿ ಆಟಗಾರರಿಗಿಂತ ಒಂದೆರಡು ಸಂಖ್ಯೆ ಕಡಿಮೆ ಇರುವಂತೆ ಸಣ್ಣ ಸಣ್ಣ ಗುಡ್ಡೆಗಳಾಗಿ ಇಡುತ್ತಾರೆ. ಒಬ್ಬರು ಆಟವನ್ನು ನಿಯಂತ್ರಿಸುವವರು ಹೊರಗಿದ್ದು ಉಳಿದವರೆಲ್ಲರೂ ಸೊಪ್ಪನ್ನು ಇಟ್ಟಿರುವುದರ ಹೊರಭಾಗದಲ್ಲಿರುವ ವೃತ್ತದಲ್ಲಿ ವೃತ್ತಾಕಾರವಾಗಿ ಸುತ್ತುತ್ತಾ ಇರುತ್ತಾರೆ. ಆಟ ಆರಂಭಮಾಡಲು ಹೊರಗಿರುವವರು ಚಪ್ಪಾಳೆ ತಟ್ಟುವುದರ ಮೂಲಕ ಸೂಚಿಸುತ್ತಾರೆ. ಅನಂತರದಲ್ಲಿ ಯಾರೂ ನಡುವಿನಲ್ಲಿ ನಿಲ್ಲದೆ ನಿರಂತರವಾಗಿ ನಡೆಯುತ್ತಾ ಅಥವಾ ಮೆಲ್ಲಗೆ ಓಡುತ್ತಾ ವೃತ್ತದಲ್ಲಿ ಸುತ್ತಬೇಕು. ಮತ್ತೊಮ್ಮೆ ಚಪ್ಪಾಳೆ ತಟ್ಟಿದಾಗ ಓಡಿಹೋಗಿ ಸೊಪ್ಪಿನ ಮೇಲೆ ನಿಲ್ಲಬೇಕು. ಒಂದು ಸೊಪ್ಪಿನ ಗುಂಪಿನಲ್ಲಿ ಒಬ್ಬರೇ ನಿಲ್ಲಬೇಕು. ನಿಂತುಕೊಳ್ಳಲು ಸೊಪ್ಪಿರುವ ಸ್ಥಳ ಸಿಗದವರು ಔಟಾಗುತ್ತಾರೆ. ಮತ್ತೆ ಮುಂದಿನ ಸುತ್ತಿಗೆ ಒಂದೆರಡು ಸೊಪ್ಪಿನ ಗುಡ್ಡೆಯನ್ನು ತೆಗೆದುಹಾಕುತ್ತಾರೆ. ಆಟಗಾರರು ವೃತ್ತದಲ್ಲಿ ಸುತ್ತುತ್ತಿರುತ್ತಾರೆ. ಚಪ್ಪಾಳೆ ತಟ್ಟುವಾಗ ಓಡಿಬಂದು ಸೊಪ್ಪಿನ ಮೇಲೆ ನಿಲ್ಲುತ್ತಾರೆ ಮತ್ತೆ ಅಲ್ಲಿ ಔಟಾದವರು ಹೊರಗೆ ಬರುತ್ತಾರೆ. ಹೀಗೆ ಮುಂದುವರಿದ ಆಟವು ಕೊನೆಗೆ ಇಬ್ಬರಿರುವಾಗ ನಡುವಿನಲ್ಲಿ ಒಂದು ಸೊಪ್ಪಿನ ಗುಡ್ಡೆಯನ್ನಿಟ್ಟು ಸುತ್ತಿಸುತ್ತಾರೆ. ಅದರಲ್ಲಿ ಅಂತಿಮವಾಗಿ ಸೊಪ್ಪಿನ ಮೇಲೆ ನಿಂತವರು ಆಟದಲ್ಲಿ ಗೆಲ್ಲುತ್ತಾರೆ.

ಹಿಂದೆ ಸೊಪ್ಪಿನ ಆಟವೆಂದೇ ಪ್ರಸಿದ್ಧವಾಗಿದ್ದ ಈ ಆಟವು ಇಂದು 'ಮ್ಯೂಸಿಕಲ್ ಚೇರ್' ಎಂಬ ಹೆಸರಿನಲ್ಲಿ ಶಾಲಾ ಕಾಲೇಜುಗಳಲ್ಲಿ, ಸಾರ್ವಜನಿಕ ಕ್ರೀಡಾ ಕೂಟಗಳಲ್ಲಿ ಆಡುವ ಆಟವಾಗಿ ಬದಲಾವಣೆಯನ್ನು ಪಡೆದುಕೊಂಡಿದೆ. ಈಗ ಸೊಪ್ಪಿನ ಬದಲಿಗೆ ಕುರ್ಚಿಗಳನ್ನಿಟ್ಟು ಚಪ್ಪಾಳೆಯ ಬದಲಿಗೆ ಯಾವುದಾದರೂ ಹಾಡನ್ನು ಸಂಗೀತವನ್ನು ಕೇಳಿಸಲಾಗುತ್ತದೆ ಅಥವಾ ಸೀಟಿಯನ್ನು ಊದಲಾಗುತ್ತದೆ. ಉಳಿದಂತೆ ಆಟದ

ನಿಯಮದಲ್ಲಿ ಬದಲಾವಣೆಗಳೇನೂ ಇರುವುದಿಲ್ಲ. ಮಕ್ಕಳು ಈ ಆಟವನ್ನು ಆಡಿದರೂ ಇದು ಮಹಿಳೆಯರ ಆಟವಾಗಿ ಹೆಚ್ಚು ಚಾಲ್ತಿಯಲ್ಲಿದೆ.




## ೯. ತಿರ್‌ಗೊ ಕಳಿ (ತಿರುಗುವ ಆಟ):

ಮಕ್ಕಳು ಬಯಲಲ್ಲಿ, ಅಂಗಳದಲ್ಲಿ ಹೊರಾಂಗಣದ ಆಟವಾಗಿ ಹಾಗೂ ಕೆಲವೊಮ್ಮೆ ಮನೆಯ ಒಳಭಾಗ ವಿಶಾಲವಾಗಿದ್ದಾಗ ಒಳಾಂಗಣದ ಆಟವಾಗಿಯೂ ಈ ಆಟವನ್ನು ಆಡುತ್ತಾರೆ. ಇಬ್ಬರು ಮಕ್ಕಳು ಸೇರಿಕೊಂಡು ಇದನ್ನು ಆಡುತ್ತಾರೆ. ಮಕ್ಕಳಿಬ್ಬರು ಕೈಗಳನ್ನು ಕತ್ತರಿಯಾಗಿ ಹಿಡಿದು ಪಾದಗಳನ್ನು ಸಮೀಪದಲ್ಲಿಟ್ಟು ಚಕ್ರದಂತೆ ತಿರುಗುತ್ತಾ ಆಡುತ್ತಾರೆ. ಹೀಗೆ ತಿರುಗುವಾಗ ಯಾರು ಮೊದಲು ಕುಳಿತುಕೊಳ್ಳುತ್ತಾರೋ ಅವರು ಆಟದಲ್ಲಿ ಸೋತಂತೆ. ಈ ಆಟದ ಹಿಂದೆ ಯಾವುದೇ ವಿಶೇಷವಾದ ಉದ್ದೇಶವಿರದೆ ಸಂತೋಷಕ್ಕಾಗಿ ಆಡಲಾಗುತ್ತದೆ.

## ೧೦. ತಪ್ಪಾಳೆಕೊಟ್ಟೊ ಕಳಿ (ಚಪ್ಪಾಳೆ ಆಟ):

ಹೆಣ್ಣುಮಕ್ಕಳಿಬ್ಬರೂ ಎದುರು ಬದುರಾಗಿ ನಿಂತುಕೊಂಡು ಕೈಗಳನ್ನು ಅಗಲವಾಗಿ ಎದುರುಬದುರಾಗಿಸಿ ಇಟ್ಟುಕೊಂಡು ಒಮ್ಮೆ ಕೈ ಚಪ್ಪಾಳೆ ತಟ್ಟಿದ ನಂತರ ಪರಸ್ಪರ ಕೈಗಳನ್ನು ತಟ್ಟುತ್ತಾ ಬಾಯಲ್ಲಿ ಸಂಖ್ಯೆಗಳನ್ನು ಹೇಳುತ್ತಾ, ಅದಕ್ಕೆ ಸರಿಯಾಗಿ ಚಪ್ಪಾಳೆಯ ಸಂಖ್ಯೆಯನ್ನು ಹೆಚ್ಚಿಸುತ್ತಾ ಆಡುತ್ತಾರೆ. ಇದೂ ಕೂಡ ಸಂತೋಷಕ್ಕಾಗಿ ಆಡುವ ವಿನೋದದ ಆಟಗಳಲ್ಲಿ ಒಂದಾಗಿದೆ.

# ಇ) ಗಂಡು ಮಕ್ಕಳ ಆಟಗಳು:

ಗಂಡು ಮಕ್ಕಳು ಮಾತ್ರ ಪ್ರತ್ಯೇಕವಾಗಿ ಒಂಟಿಯಾಗಿ ಅಥವಾ ಗುಂಪಿನಲ್ಲಿ ಆಡುವ ಆಟಗಳನ್ನು ಈ ಭಾಗದಲ್ಲಿ ಗುರುತಿಸಲಾಗಿದೆ. ಗಂಡು ಮಕ್ಕಳು ಬಹುಪಾಲು ಆಟಗಳನ್ನು ಹೆಣ್ಣುಮಕ್ಕಳೊಡಗೂಡಿ ಆಡುವುದನ್ನು ಕಾಣುತ್ತೇವೆ. ಕೆಲವು ಆಟಗಳನ್ನು ಮಾತ್ರ ಇವರು ಪ್ರತ್ಯೇಕವಾಗಿ ಆಡುತ್ತಾರೆ.

## ೧. ಕೊಡಮರಿಯೊ ಕಳಿ (ಪಲ್ಟಿ ಹೊಡೆಯುವ ಆಟ):

ಈಗಾಗಲೇ ವಿವರಿಸಿರುವಂತೆ ಹೆಣ್ಣುಮಕ್ಕಳು, ಗಂಡು ಮಕ್ಕಳು ಸೇರಿಕೊಂಡು ಹುಲ್ಲಿನ ಮೇಲೆ ಪಲ್ಟಿ ಹೊಡೆವ ಆಟವನ್ನಾಡಿದರೆ ಇಲ್ಲಿ ಆಟದ ಕ್ರಮ ಅದೇ ರೀತಿಯಲ್ಲಿ ಇದ್ದರೂ ಕೂಡ ಆಟವನ್ನು ನೀರೊಳಗೆ ಆಡಲಾಗುತ್ತದೆ. ಆಳವಿಲ್ಲದ ಹೊಳೆಯಲ್ಲಿ, ಸಾಮಾನ್ಯವಾಗಿ ಮಕ್ಕಳು ಈ ಆಟವನ್ನು ಆಡುತ್ತಾರೆ. ಉಸಿರು ಬಿಗಿಹಿಡಿದುಕೊಂಡು ನೀರಲ್ಲಿ ಮುಳುಗುತ್ತಾ ಅಲ್ಲೇ ಪಲ್ಟಿ ಹೊಡೆಯುವುದರೊಂದಿಗೆ ಯಾರು ಹೆಚ್ಚುಸಲ ಪಲ್ಟಿ ಹೊಡೆಯುತ್ತಾರೋ ಅವರು ಗೆಲ್ಲುತ್ತಾರೆ. ವ್ಯಾಯಾಮದ ಹಿನ್ನೆಲೆಯಲ್ಲಿ ಈ ಆಟ ದೈಹಿಕ ಸದೃಢತೆಯನ್ನು ಮಕ್ಕಳಲ್ಲಿ ತುಂಬುತ್ತದೆ.

## ೨. ಮುಂಜುವ ಕಳಿ (ಮುಳುಗುವ ಆಟ):

ಇದೂ ಕೂಡ ನೀರೊಳಗೆ ಆಡುವ ಆಟ. ಆಳವಿರದ ಹೊಳೆ, ತೋಡುಗಳಲ್ಲಿ ಉಸಿರು ಬಿಗಿ ಹಿಡಿದು ಮುಳುಗುತ್ತಾರೆ. ದಡದಲ್ಲಿರುವವರು ಸಂಖ್ಯೆಗಳನ್ನು ಹೇಳುತ್ತಾ ಎಣಿಸುತ್ತಾರೆ. ಯಾರು ಹೆಚ್ಚು ಹೊತ್ತು ಉಸಿರುಕಟ್ಟುತ್ತಾ ನೀರೊಳಗೆ ಮುಳುಗಿರುತ್ತಾರೋ ಅವರು ಆಟದಲ್ಲಿ ಗೆದ್ದಂತೆ. ಇದೂ ಕೂಡ ವ್ಯಾಯಾಮ ಸಂಬಂಧೀ ಆಟವಾಗಿ ಮುಖ್ಯವಾಗುತ್ತದೆ.

## ೩. ನೀರ್ ಕನಿಪಕಳಿ (ನೀರೆರಚುವಾಟ):

ಈ ಆಟದಲ್ಲಿ ಕನಿಷ್ಟ ಇಬ್ಬರಿರಬೇಕು. ನೀರೊಳಗೆ ಇಬ್ಬರೂ ನಿಂತುಕೊಂಡು ಬೊಗಸೆಯಲ್ಲಿ ನೀರನ್ನು ತೆಗೆದುಕೊಂಡು ಪರಸ್ಪರರ ಮುಖಕ್ಕೆ ಎರಚುತ್ತಾರೆ. ಯಾರು ಮೊದಲು ಮುಖ ತಿರುಗಿಸುತ್ತಾರೋ ಅವರು ಸೋತಂತೆ. ಭರತ-ಬಾಹುಬಲಿಯರ ಜಲಯುದ್ಧದ ಸಂದರ್ಭದಲ್ಲಿ ಇದನ್ನು ಒಂದು ಪಂಥವಾಗಿ ಪರಿಗಣಿಸಿರುವುದು ಕಂಡು ಬರುತ್ತದೆ.

ಕೆಲವೊಮ್ಮೆ ಸಣ್ಣ ತೋಡುಗಳಲ್ಲೂ ಈ ಆಟವನ್ನು ಆಡುತ್ತಾರೆ. ತೋಡಿನ ಎರಡು ಬದಿಗಳಲ್ಲಿ ಇಬ್ಬರು ನಿಂತು ಪರಸ್ಪರ ನೀರನ್ನು ರಭಸದಿಂದ ಎಸೆದಾಡುತ್ತಾರೆ.

ಈ ಮೇಲಿನ ಮೂರು ನೀರಾಟದ ವಿಧಗಳು ಮಕ್ಕಳ ಸಾಮರ್ಥ್ಯ ಪ್ರದರ್ಶನದ ನಿಟ್ಟಿನಲ್ಲಿ ಆಡುವ ಆಟಗಳಾಗಿ ತಮ್ಮ ಶಕ್ತಿಯ ಬಗ್ಗೆ, ದೈಹಿಕ ಸಾಮರ್ಥ್ಯದ ಕುರಿತಾಗಿ ಮಕ್ಕಳಿಗೆ ಆತ್ಮವಿಶ್ವಾಸವನ್ನು ಹೆಚ್ಚಿಸಲು ಸಹಕಾರಿಯಾಗಿವೆ. ಹಾಗೆಯೇ ವ್ಯಾಯಾಮದ ಭಾಗವಾಗಿಯೂ ಇವು ಮುಖ್ಯವಾಗುತ್ತವೆ.

## ೪. ತೆಂಗೆ ಬಲ್‌ಚಿಕಳಿ (ತೆಂಗಿನ ಕಾಯಿ ಸೆಳೆದಾಟ):

ಕೊಡವರ ಹಬ್ಬಗಳಲ್ಲಿ ಆಟೋಟಗಳಿಗೂ ಪ್ರಮುಖವಾದ ಸ್ಥಾನವಿದೆ. ಹೀಗೆ ವಾರ್ಷಿಕಾವರ್ತನದ ಹಬ್ಬಗಳಾದ ಕೈಲ್ ಮುಹೂರ್ತ, ಹುತ್ತರಿ ಮುಂತಾದ ಸಂದರ್ಭಗಳಲ್ಲಿ ಹಬ್ಬದ ಪ್ರಯುಕ್ತ ನಡೆಸುವ ಸಂತೋಷಕೂಟದ ಭಾಗವಾಗಿ ಮಕ್ಕಳಿಗೆ ಈ ಆಟವನ್ನಾಡುವ ಅವಕಾಶನಿರುತ್ತದೆ. ಹಾಗೆಯೇ ಊರಿನ ಜಾತ್ರೆ, ಹಬ್ಬಗಳಾದಾಗ ಅವುಗಳ ಭಾಗವಾಗಿ ಮಕ್ಕಳಿಗೆ ಈ ಆಟವನ್ನಾಡುವ ಸಂದರ್ಭ ದೊರಕುತ್ತದೆ.

ಒಂದಷ್ಟು ಜನ ಗಂಡುಮಕ್ಕಳನ್ನು ಗುಂಪು ಸೇರಿಸಿ ಅವರೆಲ್ಲರ ನಡುವೆ ಒಂದು ತೆಂಗಿನಕಾಯಿಯನ್ನು ಕೊಡಲಾಗುತ್ತದೆ. ಅದನ್ನು ಎಲ್ಲರೂ ಸೇರಿ ತಮ್ಮ ಕಡೆಗೆ ಎಳೆದಾಡುತ್ತಾರೆ. ಬಹಳ ಹೊತ್ತಿನ ಸೆಣಸಾಟದ ಅನಂತರ ಶಕ್ತಿಶಾಲಿಯಾದವನು ತೆಂಗಿನ ಕಾಯಿಯನ್ನು ಎಲ್ಲರಕೈಯಿಂದ ಬಿಡಿಸಿಕೊಂಡು ಸ್ವಲ್ಪದೂರ ಓಡಿ ಒಂದು ಕಲ್ಲಿಗೆ ಹೊಡೆದು ಚೂರುಚೂರು ಮಾಡುತ್ತಾನೆ. ಅನಂತರ ಚೂರುಗಳನ್ನು ಎಲ್ಲರೂ ಹಂಚಿಕೊಂಡು ತಿನ್ನುತ್ತಾರೆ. ತೆಂಗಿನ ಕಾಯಿಯನ್ನು ಸೆಳೆದುಕೊಂಡು ಓಡಿದವನು ಗೆಲ್ಲುತ್ತಾನೆ. ಇದು ಕೂಡ ದೈಹಿಕ ಸಾಮರ್ಥ್ಯದ ಪ್ರದರ್ಶನದ ಭಾಗವಾಗಿ ಆಡುವ ಪೌರುಷ ಪ್ರಧಾನ ಆಟವಾಗಿದೆ.

ಊರಿನ ದೇವರ ಉತ್ಸವಗಳಲ್ಲಿ ನಿದರ್ಶನಕ್ಕೆ ಅಯ್ಯಪ್ಪದೇವರ, ಭಗವತಿಯ ಉತ್ಸವಗಳಲ್ಲಿ ಜನರು 'ಈಡುಕಾಯಿ' (ದೇವರಿಗೆ ಹರಕೆಯ ರೂಪದಲ್ಲಿ ಒಪ್ಪಿಸುವ ತೆಂಗಿನಕಾಯಿ) ಒಡೆಯುವ ಹರಕೆಯನ್ನು ಮಾಡಿಕೊಂಡಿರುತ್ತಾರೆ. ಅಂತಹ ಸಂದರ್ಭದಲ್ಲಿ ಈ ತೆಂಗಿನಕಾಯಿಗಳನ್ನು ಮಕ್ಕಳಿಗೆ ಕೊಟ್ಟು ಸೆಳೆದಾಡುತ್ತಾ ದೇವಸ್ಥಾನದ ಸುತ್ತಲೂ ಓಡಾಡಿ ಈಡುಗಾಯಿ ಒಡೆಯುತ್ತಾರೆ. ಕೆಲವೊಮ್ಮೆ ಧಾರ್ಮಿಕ ಆಚರಣೆಯ ಭಾಗಗಳಾಗಿ ರೂಢಿಯಲ್ಲಿರುವ ಆಚರಣೆಗಳ ನಡುವೆಯೂ ಸಂತೋಷ, ವಿನೋದವನ್ನು ತುಂಬಿಕೊಳ್ಳುವಂತೆ ಇಂತಹ ಆಟಗಳಿರುವುದು ಕಂಡುಬರುತ್ತದೆ.

ಈ ಆಟಕ್ಕೆ ಕನಿಷ್ಟ ಇಬ್ಬರು ಮಕ್ಕಳಿರಬೇಕು. ಗರಿಷ್ಟ ಮಿತಿ ಇರುವುದಿಲ್ಲ. ಎಷ್ಟು ಮಕ್ಕಳಾದರೂ ಭಾಗವಹಿಸಬಹುದು. ಇದ್ದವರೆಲ್ಲರನ್ನೂ ಸೇರಿಸಿ ಒಂದೇ ತೆಂಗಿನಕಾಯಿಯನ್ನು ತನ್ನದಾಗಿಸಿಕೊಳ್ಳಲು ಸೆಣಸಾಟ ನಡೆಸಲಾಗುತ್ತದೆ.

## ೫. ಕೋಲಾಟ:

ಹುತ್ತರಿ ಹಬ್ಬದ ಆಚರಣೆಯ ಭಾಗವಾಗಿ ಆರಂಭವಾದ ಜನಪದ ಆಟ ಇಂದು ಕೊಡವರ ಸಂಸ್ಕೃತಿಯನ್ನು ಬಿಂಬಿಸುವ ಪ್ರಮುಖ ಪ್ರದರ್ಶನ ಕಲೆಯಾಗಿಯೂ ಪ್ರದರ್ಶಿಸಲ್ಪಡುತ್ತದೆ. ಕೊಡವರ ಸುಗ್ಗಿ ಹಬ್ಬವಾದ 'ಹುತ್ತರಿ'ಯಲ್ಲಿ ಭೂಮಿಪೂಜೆ ಮಾಡಿ ಕದಿರು ತೆಗೆದು ಧಾನ್ಯವನ್ನು ಪೂಜಿಸಿದ ಅನಂತರದಲ್ಲಿ ಮರುದಿವಸದಿಂದ ಮಂದ್‌ನಲ್ಲಿ ದೊಡ್ಡವರ ಜೊತೆಯಲ್ಲಿ ಮಕ್ಕಳೂ ಸೇರಿ ಕೋಲಾಟವನ್ನು ಅಭ್ಯಾಸಮಾಡುತ್ತಾರೆ. ಎರಡೂ ಕೈಯಲ್ಲಿ ಬೆತ್ತದ ಕೋಲುಗಳನ್ನು ಹಿಡಿದುಕೊಂಡಿರುವ ಮಕ್ಕಳು ಮಂದ್‌ನಲ್ಲಿ

ವೃತ್ತಾಕಾರದಲ್ಲಿ ಹಾಡಿನ, ಸಂಗೀತದ ಲಯಕ್ಕೆ ಸರಿಯಾಗಿ ಹೆಜ್ಜೆಹಾಕುತ್ತಾ ಕುಣಿಯುತ್ತಾರೆ. ಈ ಕೋಲಾಟದಲ್ಲಿ ಎರಡು ರೀತಿಯ ಕುಣಿತಗಳನ್ನು ಕಾಣಬಹುದಾಗಿದೆ.

ಒಂದು ನಾಲ್ಕು ಜನ ಗಂಡಸರು ಕುಣಿಯುವವರ ವೃತ್ತದ ನಡುವಿನಲ್ಲಿ ನಿಂತು 'ದುಡಿ'ಯನ್ನು ಬಡಿಯುತ್ತಾ ಹಾಡುವಾಗ ಕುಣಿಯುವ ಕುಣಿತ. ಇದನ್ನು 'ದುಡಿಕೊಟ್ಟ್ ಆಟ್' (ದುಡಿ ಕೊಟ್ಟ್ ಕುಣಿತ) ಎನ್ನುತ್ತಾರೆ. ಮತ್ತೊಂದು 'ಮೇದಪರೆ ಆಟ' (ಮೇದಪರೆ ಕುಣಿತ).

'ಮೇದ'ರ ಜಾತಿಗೆ ಸೇರಿದ ವಾದ್ಯನುಡಿಸುವವರು 'ಪರೆ' (ಕೋಲು) ಯನ್ನು ಲಯಬದ್ಧವಾಗಿ ಹೊಡೆಯುತ್ತಾರೆ. ಈ ಲಯಕ್ಕೆ ತಕ್ಕಂತೆ ಕುಣಿತಗಾರರು ಕೋಲುಗಳನ್ನು ಹಿಂದಕ್ಕೆ ಮುಂದಕ್ಕೆ, ಮೇಲಕ್ಕೆ ಹೀಗೆ ವಿವಿಧ ಭಂಗಿಗಳಲ್ಲಿ ಹೊಡೆಯುತ್ತಾ 'ಮಂದ್'ನ (ಊರಿನವರೆಲ್ಲಾ ಸೇರಿ ಹಬ್ಬ, ಹರಿದಿನ, ಸಾಮೂಹಿಕ ಕಾರ್ಯಗಳನ್ನು ಆಚರಿಸುವ ಸ್ಥಳ) ನಡುವಿನಲ್ಲಿರುವ ಆಲದ ಮರದ ಸುತ್ತಲೂ ವೃತ್ತಾಕಾರದಲ್ಲಿ ಕುಣಿಯುತ್ತಾ ತಿರುಗುತ್ತಾರೆ. ಪ್ರಧಾನವಾಗಿ ಇದು ಗಂಡಸರ ಕುಣಿತ, ಆದರೆ ಗಂಡುಮಕ್ಕಳೂ ಇದರಲ್ಲಿ ಸೇರಿಕೊಳ್ಳುತ್ತಾರೆ. ಅನಂತರದಲ್ಲಿ ಕೊಡವ ಸಾಂಸ್ಕೃತಿಕ ನೃತ್ಯವಾಗಿ ಇದನ್ನು ಇನ್ನಿತರ ಸಂದರ್ಭಗಳಲ್ಲೂ ಕುಣಿಯಲಾಗುತ್ತದೆ. ಇಂದು ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ನಿರಂತರ ಕಾರ್ಯಕ್ರಮಗಳಲ್ಲಿ ಒಂದಾ ಶಾಲಾ ಮಕ್ಕಳಿಗೆ ಆಟ್-ಪಾಟ್ ಪಡಿಪು (ಹಾಡು-ನೃತ್ಯ ಕಲಿಕೆ) ಕಾರ್ಯಕ್ರಮದಡಿಯಲ್ಲಿ ಈ ಕುಣಿತವನ್ನು ಅಭ್ಯಾಸ ಮಾಡಿಸಲಾಗುತ್ತದೆ. ಹೀಗಾಗಿ ಸಾಮಾನ್ಯವಾಗಿ ಎಲ್ಲಾ, ಶಾಲಾ, ಕಾಲೇಜುಗಳಲ್ಲೂ ಒಂದೊಂದು ಕೊಡವ ಸಾಂಸ್ಕೃತಿಕ ಕಲೆಗಳನ್ನು ಕಲಿತಿರುವ, ಪ್ರದರ್ಶನಕ್ಕೆ ಸಿದ್ಧವಿರುವ ತಂಡಗಳಿವೆ.

ಕೋಲಾಟಕ್ಕಿರುವ ಸಾಹಿತ್ಯ, ಹಾಡಿನ ವಿಚಾರಗಳನ್ನು ಮುಂದೆ ಗಂಡಸರ ಆಟಗಳ ಭಾಗದಲ್ಲಿ ವಿಸ್ತಾರವಾಗಿ ಚರ್ಚಿಸಲಾಗುವುದು.

## ೬. ನೀತ ಬಡಿಪೊ (ಈಜಾಟ):

ಈಜು ಕಲಿತ ಗಂಡುಮಕ್ಕಳು ನದಿ, ತೋಡುಗಳಲ್ಲಿ, ಕೆರೆಗಳಲ್ಲಿ ಸಾಮಾನ್ಯವಾಗಿ ಈಜಾಡುತ್ತಾ ಸಂತೋಷ ಪಡುತ್ತಾರೆ. ಕೆಲವೊಮ್ಮೆ ಹೆಚ್ಚು ಜನ ಮಕ್ಕಳು ಒಟ್ಟಿಗೆ


ಈಜಾಡಲು ಹೋದಾಗ ಅವರಲ್ಲೇ ಪಂದ್ಯಕಟ್ಟುತ್ತಾ ಒಂದು ನಿರ್ದಿಷ್ಟ ಗುರಿಯನ್ನಿಟ್ಟುಕೊಂಡು ಯಾರು ಮೊದಲು ಗುರಿ ಮುಟ್ಟುತ್ತಾರೋ ಅವರು ಗೆದ್ದಂತೆ ಎಂದು ಆಟವನ್ನಾಡುತ್ತಾರೆ. ಅಪರೂಪಕ್ಕೆ ಹೆಣ್ಣುಮಕ್ಕಳೂ ಈ ಆಟವನ್ನು ಆಡುತ್ತಾರೆ.

## ೭. ಚಟ್ಟೆ ತೋಕ್‌ಕಳಿ (ಕೋವಿ ಆಟ):



ಇದೊಂದು ಅಳಿವಿನ ಅಂಚಿನಲ್ಲಿರುವ ಜನಪದ ಆಟವಾಗಿದೆ. ಮಕ್ಕಳು ಬಿದಿರಿನಲ್ಲಿ ಸಣ್ಣ ತೂತವಿರುವ ಕೋವಿಯಂತೆ ಸುಮಾರು ಒಂದಡಿಯಷ್ಟು ಉದ್ದದ ಕೊಳವೆಯನ್ನು ಮಾಡಿ ಅದರ ರಂಧ್ರದೊಳಗೆ ತೂರುವಂತೆ ಬಿದಿರಿನ ಕಡ್ಡಿಯನ್ನು ಮಾಡುತ್ತಾರೆ. ಅದರ ಒಂದು ಕಡೆ ಚೂಪಾಗಿದ್ದು ಮತ್ತೊಂದು ಬದಿ ತಡೆಯುವಂತೆ ಸ್ವಲ್ಪ ದಪ್ಪವಾಗಿರುತ್ತದೆ. ಇದಕ್ಕೆ ಕಾಡಿನಲ್ಲಿ ಸಿಕ್ಕುವ ಚಟ್ಟೆಕಾಯಿಯನ್ನು ಹಾಕಿ ಗುರಿಯಿಟ್ಟು ಹೊಡೆಯುತ್ತಾ ಆಡುತ್ತಾರೆ. ಬಿದಿರಿನ ಚಟ್ಟೆಯೊಳಗೆ ಈ ಕಾಯಿಯನ್ನು ಹಾಕಿ ಕೋಲಿನಿಂದ ಒತ್ತಡವನ್ನು ಕೊಟ್ಟು ಅಂಗೈಯಿಂದ ಒತ್ತುತ್ತಾರೆ. ಆ ಸಣ್ಣಕಾಯಿಯ ಗುರಿಯಿಟ್ಟು ಹೊಡೆದ ಜಾಗಕ್ಕೆ 'ಟಪಾರೆ'ಂದು ಶಬ್ದಮಾಡುತ್ತಾ ಹೋಗಿ ಬೀಳುತ್ತದೆ. ಹೀಗೆ ಮಕ್ಕಳು ಆಟವಾಡುತ್ತಾರೆ.

ಕೊಡವರ ಬದುಕಿನಲ್ಲಿ 'ಕೋವಿ'ಗೆ ವಿಶೇಷವಾದ ಸ್ಥಾನವಿದೆ. ಮಹಿಳೆಯರೂ ಸೇರಿದಂತೆ ಕೋವಿಯಿಂದ ಗುರಿಯಿಟ್ಟು ಹೊಡೆಯುವ ಸ್ಪರ್ಧೆಗಳಲ್ಲಿ, ಬೇಟೆಗಳಲ್ಲಿ ಗಂಡಸರು, ವಯಸ್ಕರು ಭಾಗವಹಿಸುತ್ತಾರೆ. ಈ ಕೋವಿಯನ್ನು ಬಳಸುವ ಅಭ್ಯಾಸವನ್ನು ಬಾಲ್ಯದಲ್ಲಿಯೇ ಕಲಿಸುವಂತೆ ಈ ಆಟವು ಪ್ರೇರೇಪಿಸುತ್ತದೆ.




ಬೊಳ್‌ಕಾಟ್, ಪರೆಯಕಳಿ ಹಾಗೂ ಪೀಲಿಯಾಟ್‌ಗಳು ಮುಖ್ಯವಾಗಿ ಗಂಡಸರ ಕುಣಿತಗಳಾಗಿ ಮುಖ್ಯವಾಗಿದ್ದರೂ, ಗಂಡುಮಕ್ಕಳೂ ಕೂಡ ಈ ಕುಣಿತಗಳನ್ನು ಅಭ್ಯಾಸಮಾಡುತ್ತಾರೆ. ಹಾಗೂ ಸಾರ್ವಜನಿಕ ಪ್ರದರ್ಶನದ ಸ್ಪರ್ಧೆಗಳಲ್ಲೂ ಇವುಗಳನ್ನು ಪ್ರದರ್ಶಿಸುತ್ತಾರೆ. ಈ ಎಲ್ಲಾ ಕುಣಿತಗಳನ್ನು ಗಂಡಸರ ಆಟಗಳಲ್ಲಿ ಚರ್ಚಿಸಲಾಗುವುದು. ಗಂಡುಮಕ್ಕಳು, ಹೆಣ್ಣುಮಕ್ಕಳು ಜೊತೆಯಾಗಿಯೇ ಆಡುವ ಆಟಗಳು ಹೆಚ್ಚಿರುವುದರಿಂದ ಪ್ರತ್ಯೇಕವಾಗಿ ಗಂಡುಮಕ್ಕಳು ಆಡುವ ಆಟಗಳು ಕೊಡವರಲ್ಲಿ ಕಡಿಮೆ ಇವೆ.

*******

# ವಯಸ್ಕರ ಆಟಗಳು

ನಡುವಯಸ್ಸಿನ ಮಹಿಳೆಯರು ಮತ್ತು ಪುರುಷರು ಆಡುವ ಆಟಗಳನ್ನು ಈ ಭಾಗದಲ್ಲಿ ವಿವರಿಸಲಾಗಿದೆ.

## ಅ) ಮಹಿಳೆಯರ ಆಟಗಳು:

ಮಹಿಳೆಯರಿಗೆ ಒಳಾಂಗಣದ ಆಟಗಳಾಗಿ ಯಾವುದೇ ಆಟಗಳು ಕಂಡುಬರುವುದಿಲ್ಲ. ಬಹುಶಃ ಮನೆಯ ಒಳಗೆ ಹಗಲು, ರಾತ್ರಿ ಮಾಡಿದರೂ ಮುಗಿಯಲಾರದಷ್ಟು ಮನೆಕೆಲಸಗಳಲ್ಲಿ ಅವರು ತೊಡಗಿಸಿಕೊಂಡಿರುವುದರಿಂದ ಒಳಾಂಗಣದ ಆಟಗಳ ಸ್ಥಾನವನ್ನು ಕೆಲಸಗಳೇ ಆಕ್ರಮಿಸಿಕೊಂಡಿವೆ ಎನ್ನಬಹುದು. ಹಾಗೆ ಹವ್ಯಾಸ ಅಥವಾ ಆಸಕ್ತಿಯನ್ನು ಬೆಳೆಸಿಕೊಂಡ ಮಹಿಳೆಯರು ಬಟ್ಟೆಗಳ ಮೇಲೆ ಹೊಲಿಗೆ, ಕಸೂತಿಹಾಕುವ ಕೆಲಸವನ್ನು ಮಾಡುತ್ತಾರೆ. ಇದಲ್ಲದೆ ಸಾರ್ವಜನಿಕ ಕ್ರೀಡಾಕೂಟಗಳಲ್ಲಿ, ಸಮಾರಂಭಗಳಲ್ಲಿ ಸಂತೋಷಕೂಟಗಳನ್ನು ನಡೆಸುವಾಗ ಅಲ್ಲಿ ಭಾಗವಹಿಸುವ ಮಹಿಳೆಯರು ಸಂತೋಷ, ವಿನೋದಗಳಿಗಾಗಿ ಕೆಲವು ಆಟಗಳನ್ನು ಆಡುವುದು ರೂಢಿಯಲ್ಲಿದೆ.

## ೧. ತೊಪ್ಪು ಕಳಿ (ಸೊಪ್ಪಿನಾಟ):

ಇದು ಬಹಳ ಪ್ರಾಚೀನವಾದ ಜನಪದ ಆಟಗಳಲ್ಲಿ ಒಂದು. ಹೆಣ್ಣುಮಕ್ಕಳ ಆಟಗಳ ಭಾಗದಲ್ಲೇ ಈ ಆಟವನ್ನು ಚರ್ಚಿಸಲಾಗಿದೆ. ಆಟದಲ್ಲಿ ಭಾಗವಹಿಸುವ ಮಹಿಳೆಯರು ವೃತ್ತಾಕಾರದಲ್ಲಿ ಚಲಿಸುತ್ತಿರಬೇಕು. ಆ ವೃತ್ತದ ನಡುವೆ ಜನರಿಗಿಂತ ಕಡಿಮೆ ಸಂಖ್ಯೆಯ ಸೊಪ್ಪಿನ ಗುಡ್ಡೆಗಳನ್ನಿಡಲಾಗುತ್ತದೆ. ಹೊರಗಿಂದ ಒಬ್ಬರು ಕೈಚಪ್ಪಾಳೆ ತಟ್ಟುವಾಗ, ಅಥವಾ ಸೀಟಿ ಊದುವಾಗ ಅವರು ಓಡಿಹೋಗಿ ಸೊಪ್ಪಿನ ಗುಡ್ಡೆಯ ಮೇಲೆ ನಿಂತುಕೊಳ್ಳಬೇಕು. ಸೊಪ್ಪಿನ ಗುಡ್ಡೆಯಿಂದ ಹೊರಗಿರುವವರು ಔಟಾದಂತೆ ಮತ್ತೆ ಉಳಿದವರು ವೃತ್ತಾಕಾರವಾಗಿ ಸುತ್ತಲು ಪ್ರಾರಂಭಿಸುತ್ತಾರೆ. ಹೀಗೆ ಕೊನೆಗೆ ಒಬ್ಬರು ಉಳಿಯುವವರೆಗೂ ಆಟ ಮುಂದು ವರಿಯುತ್ತದೆ. ಅವರು ಆಟದಲ್ಲಿ ಗೆಲ್ಲುತ್ತಾರೆ.

ಈಗ ಸೊಪ್ಪಿನ ಗುಡ್ಡೆಯ ಬದಲಾಗಿ ಕುರ್ಚಿಗಳನ್ನು ಇಟ್ಟು ಅದರ ಸುತ್ತಲೂ ಇದೇ ಆಟವನ್ನು ಆಡುತ್ತಾರೆ. ಕೈಚಪ್ಪಾಳೆ ಅಥವಾ ಸೀಟಿ ಊದುವುದರ ಬದಲು ಯಾವುದಾದರೂ ಸಂಗೀತವನ್ನು, ಹಾಡನ್ನ ಹಾಕಲಾಗುತ್ತದೆ. ಹಾಡನ್ನು ನಿಲ್ಲಿಸುವಾಗ ಕುರ್ಚಿಗಳ ಸುತ್ತಾ ನಡೆಯುತ್ತಾ ಸಾಗುತ್ತಿರುವವರು ಕುರ್ಚಿಯಲ್ಲಿ ಓಡಿಹೋಗಿ ಕುಳಿತುಕೊಳ್ಳಬೇಕು. ಕುರ್ಚಿ ಸಿಗದವರು ಔಟಾಗುತ್ತಾರೆ. ಮತ್ತೆ ಉಳಿದವರು ಮೊದಲಿನಂತೆ ಚಲಿಸಲಾರಂಭಿಸುತ್ತಾರೆ. ಹೀಗೆ ಆಟ ಕೊನೆಗೆ ಒಬ್ಬರು ಉಳಿಯುವವರೆಗೂ ಮುಂದುವರಿಯುತ್ತದೆ. ಸಂಗೀತದ ಮೂಲಕ ಈ ಆಟವನ್ನು ನಿಯಂತ್ರಿಸುವುದರಿಂದ ಈಗ ಈ ಆಟವನ್ನು 'ಮ್ಯೂಸಿಕಲ್ ಚೇರ್' ಎಂದೇ ಕರೆಯುತ್ತಾರೆ.

ಸಂತೋಷವನ್ನು ನೀಡುವುದರ ಜೊತೆಗೆ ಇದು ಜಾಣ್ಮೆಯನ್ನು, ನಿಗಾವಹಿಸುವ ಗುಣವನ್ನು ಹೆಚ್ಚಿಸುತ್ತದೆ.

## ೨. ಕೇರ್ ಬಲಿಪೊ ಕಳಿ (ಹಗ್ಗ-ಜಗ್ಗಾಟ):

ಈ ಆಟವೂ ಕೂಡ ಹಳೆಯ ಆಟಗಳಲ್ಲಿ ಒಂದು. ಮಕ್ಕಳ ಆಟಗಳ ಭಾಗದಲ್ಲಿ ಇದನ್ನು ಚರ್ಚಿಸಲಾಗಿದೆ. ಬಯಲಲ್ಲಿ ಮತ್ತು ಕೆಸರು ಗದ್ದೆಯಲ್ಲಿ ಕೂಡ ಈ ಆಟವನ್ನು ಸಂತೋಷಕ್ಕೆ ಹಾಗೂ ಸ್ಪರ್ಧೆಯ ರೀತಿಯಲ್ಲೂ ಆಡಲಾಗುತ್ತದೆ. ಆಟದಲ್ಲಿ ಭಾಗವಹಿಸುವವರು ಎರಡು ಗುಂಪುಗಳಾಗಿ ಮಾಡಿಕೊಂಡು ಬಲಪ್ರಯೋಗಿಸಿ

ಹಗ್ಗವನ್ನು ತಮ್ಮೆಡೆಗೆ ಜಗ್ಗುತ್ತಾರೆ. ಶಕ್ತಿಯುತವಾದ ತಂಡ ಮತ್ತೊಂದು ತಂಡವನ್ನು ಸೆಳೆದು ಹಾಕುತ್ತದೆ. ಕೆಸರು ಗದ್ದೆಯ ಒಳಗೂ ಈ ಆಟವನ್ನು ಆಡುತ್ತಾ ನೀರು-ಮಣ್ಣಿನೊಂದಿಗೆ ರೈತಾಪಿವರ್ಗಕ್ಕೆ ಇರುವ ಆತ್ಮೀಯತೆಯನ್ನು, ಸಂಭ್ರಮವನ್ನಿದು ದೃಢಪಡಿಸುತ್ತದೆ. ಬಲಪ್ರದರ್ಶನದ ಜೊತೆಗೆ ವ್ಯಾಯಾಮವನ್ನು ನೀಡುವ ಆಟವಾಗಿ ಇದು ಆತ್ಮಸ್ಥೈರ್ಯವನ್ನು ಹೆಚ್ಚಿಸುತ್ತದೆ.

## ೩. ಚೆಂಡ್ ಕಳಿ (ಚೆಂಡಾಟ):

ಮಕ್ಕಳು ಆಡುವ ಆಟದಲ್ಲಿ ಚೆಂಡನ್ನು ಮತ್ತೊಬ್ಬರ ಬೆನ್ನಿಗೆ ಎಸೆಯುವ ಅಥವಾ ಅಟ್ಟಿ ಇಟ್ಟು ಕಲ್ಲುಗಳ ಚೂರುಗಳ ಮೇಲೆ ಎಸೆದು ಬೀಳಿಸುವ ಕ್ರಮವಿದ್ದರೆ ಮಹಿಳೆಯರು ಆಡುವ ಆಟದಲ್ಲಿ ಸ್ವಲ್ಪ ಬದಲಾವಣೆಯಿದೆ. ದೂರದಲ್ಲಿ ಒಂದು ಪಾತ್ರೆಯಲ್ಲಿ (ಸಾಮಾನ್ಯವಾಗಿ ಬಕೆಟ್/ತೊಟ್ಟಿ) ನೀರಿಟ್ಟು ನಿರ್ದಿಷ್ಟ ಅಂತರದಿಂದ ಚೆಂಡನ್ನು ಗುರಿಯಿಟ್ಟು ತೊಟ್ಟಿಯ ಒಳಗೆ ಬೀಳಿಸಬೇಕು. ಯಾರು ಎಸೆದ ಚೆಂಡು ತೊಟ್ಟಿಗೆ ಬೀಳುವುದಿಲ್ಲವೋ ಅವರು ಆಟದಿಂದ ಮುಂದಿನ ಸುತ್ತಿಗೆ ಹೊರಗುಳಿಯುತ್ತಾರೆ. ತೊಟ್ಟಿಯ ಒಳಗೆ ಎಲ್ಲಾ ಸುತ್ತಿನಲ್ಲಿ ಅಂದರೆ ಹೆಚ್ಚು ಸಲ ಚೆಂಡನ್ನು ಬೀಳಿಸಿದವರು ಗೆಲ್ಲುತ್ತಾರೆ. ದೃಷ್ಟಿಯ ತೀಕ್ಷಣತೆಯನ್ನು ಹೆಚ್ಚಿಸುವ ಹಾಗೂ ಉತ್ತಮ ಗುರಿಯನ್ನು ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಈ ಆಟ ಬಹಳ ಫಲಕಾರಿಯಾಗಿದೆ.

ಚೆಂಡನ್ನು ಮತ್ತೊಂದು ರೀತಿಯಲ್ಲಿ ಆಡುವ ಕ್ರಮವೂ ಜಾರಿಯಲ್ಲಿದೆ. ಇದನ್ನು ಪಾಯಿಸನ್ ಬಾಲ್ (ವಿಷದ ಚೆಂಡಾಟ) ಎಂದು ಗುರುತಿಸುತ್ತಾರೆ.

## ೪. ವಿಷಚೆಂಡ್ ಕಳಿ (ಪಾಯಿಸನ್ ಬಾಲ್):

ಈ ಆಟವು 'ಸೊಪ್ಪಿನಾಟ'ದ ರೀತಿಯನ್ನೇ ಬಹುಪಾಲು ಹೋಲುತ್ತದೆ. ಆಟದಲ್ಲಿ ಭಾಗವಹಿಸುವ ಮಹಿಳೆಯರು ವೃತ್ತಾಕಾರವಾಗಿ ಸುತ್ತುತ್ತಿರುತ್ತಾರೆ. ಹೀಗೆ ಸುತ್ತುವಾಗ ಒಂದು ದೊಡ್ಡ ಚೆಂಡನ್ನು ಎಲ್ಲರೂ ಕೈಯಿಂದ ಕೈಗೆ ಕೈದಾಟಿಸುತ್ತಾ ಸಾಗುತ್ತಾರೆ. ಸೀಟಿ ಊದುವಾಗ ಚೆಂಡು ಯಾರ ಕೈಯಲ್ಲಿರುವುದೋ ಅವರು ಔಟಾದಂತೆ. ಕೈಯಲ್ಲಿ ಚೆಂಡು ಸಿಕ್ಕಿದವರು ಆಟದಿಂದ ಹೊರಗುಳಿಯಬೇಕಾಗುತ್ತದೆ. ಎಂಬ ಕಾರಣಕ್ಕೆ ಇದಕ್ಕೆ 'ವಿಷಚೆಂಡು' ಎಂಬ ಹೆಸರು ಬಂದಿರಬಹುದು. ಇದೊಂದು ಶ್ರಮವಿಲ್ಲದ ಸಂತೋಷಕೊಡುವ ಆಟವಾಗಿದೆ.

## ೫. ಬಸ್ ಕಳಿ (ಬಂಡಿಯಾಟ):

ಮಕ್ಕಳ ಬಂಡಿಯಾಟದಲ್ಲಿ ಒಬ್ಬರ ಬೆನ್ನನ್ನೊಬ್ಬರು ಹಿಡಿದುಕೊಂಡು ಅಂಗಳದ ತುಂಬೆಲ್ಲ ಉಗಿಬಂಡಿಯಂತೆ ಓಡಾಡಿದರೆ ಇಲ್ಲಿ ಆಟದಲ್ಲಿ ಭಾಗವಹಿಸುವ ಎಲ್ಲಾ ಮಹಿಳೆಯರು ಸಮ ಸಂಖ್ಯೆಯ ಎರಡು ಗುಂಪುಗಳನ್ನು ಮಾಡಿಕೊಂಡು ಒಬ್ಬೊಬ್ಬ ನಾಯಕಿಯರನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಆಟವನ್ನು ಆರಂಭಿಸಲು ಹಾಗೂ ಗುರಿಮುಟ್ಟಲು ಎರಡು ನಿರ್ದಿಷ್ಟ ಸ್ಥಳಗಳನ್ನು ನೇರವಾಗಿ ಗುರುತಿಸಲಾಗುತ್ತದೆ. ಆರಂಭಿಸುವ ಸ್ಥಳದಲ್ಲಿ ನಿಗಧಿಪಡಿಸಿದ ರೇಖೆಯ ಹಿಂದೆ ಆ ಗುಂಪಿನವರೆಲ್ಲಾ ಸಾಲಾಗಿ ನಿಂತಿರುತ್ತಾರೆ. ನಾಯಕಿಯಾದವರು ಮೊದಲು ಓಡಿ ಗುರಿಮುಟ್ಟಿ ಹಿಂಬದಿಯ ಚಲನೆಯೊಂದಿಗೆ ಆರಂಭಿಸಿದ ಸ್ಥಳಕ್ಕೆ ಬರುತ್ತಾರೆ. ಆಗ ಆ ಗುಂಪಿನ ಒಬ್ಬರು ನಾಯಕಿಯ ಬೆನ್ನಿನ ಬಟ್ಟೆಯನ್ನು ಹಿಡಿದುಕೊಂಡು ಅವರೊಂದಿಗೆ ಓಡುತ್ತಾರೆ. ಇಬ್ಬರು ಸೇರಿ ಗುರಿಮುಟ್ಟಿ ಹಿಂತಿರುಗದೆ ಹಿಂಚಲನೆಯಿಂದ ಆರಂಭದ ಸ್ಥಳಕ್ಕೆ ಬರುತ್ತಾರೆ. ಅಲ್ಲಿ ಮತ್ತೊಬ್ಬರು ಸೇರಿಕೊಳ್ಳುತ್ತಾರೆ. ಹೀಗೆ ಎಲ್ಲರೂ ಸೇರಿಕೊಳ್ಳುವವರೆಗೆ ಬಂಡಿಮುಂದಕ್ಕೂ ಹಿಂದಕ್ಕೂ ಚಲಿಸುತ್ತದೆ. ಮೊದಲು ಯಾವ ಗುಂಪು ಎಲ್ಲರನ್ನೂ ಸೇರಿಸಿಕೊಂಡು ಬಂಡಿಪೂರ್ಣವಾಗುತ್ತದೋ ಅವರು ಗೆಲ್ಲುತ್ತಾರೆ. ಬಹಳ ಸಂಭ್ರಮ ಕೊಡುವ ಆಟವಾಗಿರುವ ಇದರಲ್ಲಿ ನಾಯಕಿಯಾಗಿ ಮೊದಲು ಬಂಡಿಯ ಚಾಲಕನಾಗಿರುವವರು ಬಹಳ ಶಕ್ತಿಶಾಲಿಯಾಗಿರಬೇಕು. ಏಕೆಂದರೆ ಇವರು ಕೊನೆಯವರೆಗೂ ಎಷ್ಟು ಸಕ್ರಿಯವಾಗಿ, ಸಾಮರ್ಥ್ಯದಿಂದ ಕ್ರಿಯಾಶೀಲವಾಗಿ ಓಡಾಡುತ್ತಾರೋ ಆಗಮಾತ್ರ ತಂಡಕ್ಕೆ ಜಯ ಲಭಿಸುತ್ತದೆ. ಮಕ್ಕಳಂತೆಯೇ ಮಹಿಳೆಯರು ಕೇಕೆ ಹಾಕುತ್ತಾ, ಮನಬಿಚ್ಚಿ ನಕ್ಕು ನಲಿಯುತ್ತಾ ಮಕ್ಕಳಂತಾಗಿಬಿಡುವ ಆಟವಿದು.

## ೬. ತೆಂಗೆಬೊಡಿಬೆಪ್ಪೊ (ತೆಂಗಿನಕಾಯಿಗೆ ಗುಂಡು ಹೊಡೆಯುವ ಆಟ):

ಸಾಹಸಪ್ರಧಾನ/ಶೌರ್ಯಪ್ರಧಾನ ಆಟಗಳ ಸಾಲಿಗೆ ಸೇರುವ ಈ ಆಟವು ಕೊಡವರ ಜನಪದ ಆಟಗಳಲ್ಲಿ ವಿಶೇಷ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಮೂಲತಃ ಕೊಡಗಿನ ಪ್ರಾದೇಶಿಕ, ಸಾಮಾಜಿಕ ಸನ್ನಿವೇಶದಂತೆ ಒಂಟಿ ಮನೆಗಳಲ್ಲಿ, ತೋಟಗಳ ನಡುವೆ ವಾಸಿಸುವ ವ್ಯವಸ್ಥೆಯಿದೆ. ಮನೆಯ ಗಂಡಸರು ಬೇರೆ ಬೇರೆ ಕಾರಣಗಳಿಗೆ ಮನೆಬಿಟ್ಟು

ಹೊರಗೆ ಹೋಗಬೇಕಾದಾಗ ಕೊಡವ ಮಹಿಳೆಯರು ಒಂಟಿ ಮನೆಗಳಲ್ಲಿ ಒಂಟಿಯಾಗಿಯೇ ಇರಬೇಕಾದ ಸಂದರ್ಭಗಳು ಸಹಜವಾಗಿಯೇ ಎದುರಾಗುತ್ತವೆ. ಜೊತೆಗೆ ಗುಡ್ಡಗಾಡು ಪ್ರದೇಶವಾದ ಕೊಡಗಿನಲ್ಲಿ ಗ್ರಾಮೀಣ ಭಾಗಗಳಲ್ಲಿ ಇಂದಿಗೂ ಆನೆ, ಕರಡಿ, ಹುಲಿ, ಚಿರತೆಯಂತಹ ಕಾಡುಪ್ರಾಣಿಗಳು ಮನುಷ್ಯರಷ್ಟೇ ಸಹಜವಾಗಿ ತೋಟ, ಗದ್ದೆಗಳಲ್ಲಿ ಓಡಾಡುತ್ತಿರುವಾಗ ಅವುಗಳ ನಡುವೆ ಸೆಣಸಾಡುತ್ತಾ, ಸೂಕ್ಷ್ಮವಾಗಿ ಧೈರ್ಯದಿಂದ ಬದುಕು ಸಾಗಿಸಬೇಕಾದ ಅನಿವಾರ್ಯತೆ ಈ ನಾಡಿನಲ್ಲಿದೆ. ಹೀಗಾಗಿ ಇಲ್ಲಿ ಗಂಡಿನಷ್ಟೇ ಸಾಹಸ ಪ್ರಧಾನ ಗುಣಗಳನ್ನು, ಧೈರ್ಯವನ್ನು ಹೆಣ್ಣು ಅನಿವಾರ್ಯವಾಗಿ ಮೈಗೂಡಿಸಿಕೊಳ್ಳಲೇ ಬೇಕಾಗಿದೆ. ಇಂತಹ ಧೈರ್ಯಕ್ಕೆ ಬಹಳ ಮುಖ್ಯಮಾರ್ಗವೆಂದರೆ ಕೋವಿಯ ಬಳಕೆಯ ಅಭ್ಯಾಸಮಾಡುವುದು. ಬೇಟೆಯ ಜಾಡನ್ನ, ಶೈಲಿಯನ್ನು ಅರಿತುಕೊಳ್ಳುವುದು. ಗಂಡಸರಿಗೆ ಸಹಜವಾಗಿಯೇ ಕೂಡು ಬೇಟೆ (ಗುಂಪು ಬೇಟೆ)ಗಳಲ್ಲಿ ಇದರ ತರಬೇತು ದೊರಕಿರುತ್ತದೆ. ಈ ನೆಲೆಯಲ್ಲಿ ಹೆಣ್ಣು ಮಕ್ಕಳನ್ನು ತಯಾರು ಮಾಡಲು ಈ ಆಟ ಸಹಕಾರಿ.



ಕೊಡವರ 'ಜಮ್ಮಾ' ಹಿಡುವಳಿ (ಉಂಬಳಿಯಾಗಿ ವಂಶಪರಂಪರಾಗತವಾಗಿ

ಮುಂದುವರಿಯುವ ಆಸ್ತಿಯ ಹಕ್ಕುದಾರಿಕೆ) ಪ್ರಕಾರ ಪ್ರತೀ ಮನೆಗಳಲ್ಲೂ ಬಂದೂಕುಗಳನ್ನು (ಕೋವಿ) ಅಧಿಕೃತವಾಗಿ ಬಳಕೆಗಾಗಿ ಇಟ್ಟುಕೊಳ್ಳಲು ಪರವಾನಗಿ ಇದೆ. ಆದ್ದರಿಂದ ಕಳ್ಳ-ಕಾಕರಿಂದ, ಶತ್ರುಗಳಿಂದ ರಕ್ಷಣೆಯನ್ನು ಯಾವುದೇ ಹೊತ್ತಿನಲ್ಲಿ ಪಡೆದುಕೊಳ್ಳಬೇಕಾದರೆ ಬಂದೂಕಿನ ಬಳಕೆ ಮಹಿಳೆಗೂ ಅವಶ್ಯಕ. ಹೀಗೆ ಕೊಡಗಿನ ಸಾಮಾಜಿಕ ವ್ಯವಸ್ಥೆಯ ಭಾಗವಾಗಿರುವ ಬಂದೂಕಿನ ಬಳಕೆಯ ಕಲಿಕೆ ಆಟದ ನೆಲೆಯಲ್ಲೂ ಪ್ರಕಟಗೊಂಡಿದೆ. ಇಂದಿಗೂ ಕೂಡ ಕೊಡವ ಸಮುದಾಯಗಳ ಯಾವುದೇ ಸಂತೋಷಕೂಟ, ಕ್ರೀಡಾಕೂಟಗಳಲ್ಲಿ ಕಡ್ಡಾಯವಾಗಿ ನಡೆಸಲಾಗುವ ಆಟವಾಗಿ ಪರಂಪರಾಗತ ನೆಲೆಯಲ್ಲಿ ಮುಂದುವರಿಯುತ್ತಿದೆ.

ಬಂದೂಕಿನ ಬಳಕೆಯನ್ನು ಅಭ್ಯಾಸ ಮಾಡಿದ ಕೊಡವ ಹೆಣ್ಣು ಆತ್ಮರಕ್ಷಣೆಯ ನೆಲೆಯನ್ನು ಮೀರಿ ಸಾಮಾಜಿಕವಾಗಿಯೂ ಗುರುತಿಸಿಕೊಂಡಿರುವ ಸಂದರ್ಭಗಳಿವೆ. ಹೀಗಾಗಿ ಕೊಡಗಿನ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಹಲವಾರು ಜನ ಮಹಿಳೆಯರು ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ. ಹುಲಿಯನ್ನು ಕೊಂದು ಧೈರ್ಯಮೆರೆದಿದ್ದಾರೆ. ಹಾಗೆಯೇ ಕೆಲವೊಮ್ಮೆ ಸಾಂಸಾರಿಕ ವೈಮನ್ಯಸಗಳು ಬಂದಾಗ ಸಿಟ್ಟಿನ ಭರದಲ್ಲಿ ಗಂಡನನ್ನೇ ಗುಂಡಿಟ್ಟು ಕೊಂದು ದುರಂತವನ್ನೂ ಸೃಷ್ಟಿಸಿದ್ದಾಳೆ. ಈ ರೀತಿಯಲ್ಲಿ ಬಂದೂಕಿನ ಬಳಕೆಯ ಅರಿವು ಕೊಡವ ಹೆಣ್ಣಿನೊಂದಿಗೆ ಬಹುಮುಖ ಆಯಾಮದ ಸಂಬಂಧಗಳನ್ನು ಹೊಂದಿರುವುದನ್ನು ಕಾಣಬಹುದಾಗಿದೆ. ಬಯಲು ಸೀಮೆಯಲ್ಲಿ ತೆಂಗಿನಕಾಯಿಗೆ ಕಲ್ಲು ಎಸೆಯುವ ಆಟವನ್ನು ಆಡುತ್ತಾರೆ.

ಮಹಿಳೆಯರು ಧಾರ್ಮಿಕ ಆಚರಣೆಯ ಭಾಗವಾಗಿ ಕೆಲವಾರು ವೇಷಗಳನ್ನು ಹಾಕುವ ಹಾಗೆಯೇ ಕುಣಿತಗಳಲ್ಲಿ ತೊಡಗಿಸಿಕೊಳ್ಳುವುದನ್ನೂ ಕಾಣಬಹುದಾಗಿದೆ. ಉಮ್ಮತಾಟ್, ಶಿವರಾತ್ರಿಕಳಿ ಮುಂತಾದವುಗಳು ಮಹಿಳೆಯರು ಧಾರ್ಮಿಕ ಆಚರಣೆಗಳ ಅಂಗವಾಗಿ ಮಾಡುವ ಜನಪದ ಕುಣಿತಗಳಾಗಿವೆ ಹೊರತು ಜನಪದ ಆಟಗಳಲ್ಲ.

********

# ಆ) ಪುರುಷರ ಆಟಗಳು:

ನಡುವಯಸ್ಸಿನ ಗಂಡಸರು ಭಾಗವಹಿಸುವ ಆಟಗಳನ್ನು ಪುರಷರ ಆಟಗಳೆಂದು ಈ ಭಾಗದಲ್ಲಿ ಗುರುತಿಸಲಾಗಿದೆ. ಕೆಲವಾರು ಆಟಗಳು ಗಂಡುಮಕ್ಕಳು ಆಡುವಂತಹವೇ ಆಗಿದ್ದರೂ ಆಡುವ ನಿಯಮಗಳಲ್ಲಿ ವ್ಯತ್ಯಾಸವಿರುತ್ತದೆ. ಈ ದಿಸೆಯಿಂದ ಅಂತಹ ಆಟಗಳನ್ನೂ ಇಲ್ಲಿ ವಿವರಗಳೊಂದಿಗೆ ನೀಡಲಾಗಿದೆ.

ಗಂಡುಮಕ್ಕಳ ಆಟಗಳಲ್ಲಿ ಚರ್ಚಿಸಲಾಗಿರುವ ಭಾಗದಲ್ಲಿ ಹೆಚ್ಚಿನ ವಿವರಣೆಗಳನ್ನು ನೀಡಲಾಗಿದೆ.

## ೧. ಕಬಡ್ಡಿ ಕಳಿ (ಕಬಡ್ಡಿ ಆಟ):

ಸಾರ್ವಜನಿಕವಾಗಿ ಪಂದ್ಯಕಟ್ಟಿ ಸ್ಪರ್ಧೆಯಲ್ಲಿ ಆಡುವ ಆಟವಾಗಿ ಇದು ಬಹಳ ಮುಖ್ಯವಾಗಿದೆ. ಗ್ರಾಮೀಣ ಭಾಗಗಳಲ್ಲಿ ಇವತ್ತಿಗೂ ಜೀವಂತವಿರುವ ಆಟ ಇದಾಗಿದೆ. ದೊಡ್ಡವರು ಆಡುವುದರ ಕಡೆಗೆ ಆಕರ್ಷಿತರಾದ ಮಕ್ಕಳೂ ಕೂಡ ಈ ಆಟವನ್ನು ಸಂತೋಷದಿಂದ ಆಡುತ್ತಾರೆ. ಆಟದ ವಿಧಾನಗಳನ್ನು ಕುರಿತು ಮಕ್ಕಳ ಆಟಗಳ ಭಾಗದಲ್ಲೇ ಪರಿಚಯಿಸಲಾಗಿದೆ.

## ೨. ಕೇರ್ ಬಲಿಪೊ ಕಳಿ (ಹಗ್ಗ-ಜಗ್ಗಾಟ):

ಇದು ಮಕ್ಕಳು, ಮಹಿಳೆಯರು, ಪುರುಷರು ಹೀಗೆ ಎಲ್ಲರೂ ಆಸಕ್ತಿಯಿಂದ ಆಡುವ ಆಟವಾಗಿದೆ. ಈ ಆಟದ ವಿಧಾನ ಕುರಿತು ಈಗಾಗಲೇ ಮಕ್ಕಳ ಆಟಗಳ ಭಾಗದಲ್ಲಿ ಚರ್ಚಿಸಲಾಗಿದೆ.

## ೩. ಕೆತ್ತೆಬೇಲ್ ಓಟ (ಕೆಸರುಗದ್ದೆ ಓಟ):

ಇದು ಮಳೆಗಾಲದ ಆಟಗಳಲ್ಲಿ ಬಹಳ ಪ್ರಮುಖವಾದುದು. ಪೌರುಷ ಪ್ರಧಾನ ಕೃಷಿಸಂಬಂಧಿ ಆಟವಾದ ಇದು ಬಹಳ ಸಲ ಗಂಡಿನ ದೈಹಿಕ ಶಕ್ತಿ ಪ್ರದರ್ಶನದ ಭಾಗವೂ ಆಗಿರುತ್ತದೆ. ಕೆಸರುಗದ್ದೆಯಾಗಿ ವಿಸ್ತಾರವಾಗಿರುವ ಗದ್ದೆಯನ್ನು ಕೆಲವೊಮ್ಮೆ ಆಯ್ಕೆಮಾಡಿಕೊಳ್ಳುತ್ತಾರೆ. ಇದರಲ್ಲಿ ಎರಡು ರೀತಿಗಳಿವೆ. ಒಂದು ನಾಟಿ ನೆಡಲು ಸಿದ್ಧಗೊಳಿಸಿದ ಕೆಸರು ಗದ್ದೆಯಲ್ಲಿ ನಡೆಸುವ ಓಟದ ಸ್ಪರ್ಧೆಯಾದರೆ ಮತ್ತೊಂದು ನಾಟಿನೆಟ್ಟಿರುವ ಗದ್ದೆಯ ಒಳಗೆ ಓಡುವುದು.

ಅಗೆಗದ್ದೆಯನ್ನೆ ಓಟದ ಸ್ಪರ್ಧೆಯನ್ನು ನಡೆಸಲು ಆಯ್ಕೆಮಾಡಿಕೊಳ್ಳುವುದಿದೆ. ಈ ಅಗೆ ಗದ್ದೆಯಲ್ಲಿ ಓಡುವ ಆಟಕ್ಕೆ 'ಆಕನಾಟಿ ಓಟ' ಎಂದು ಹೆಸರು ('ಆಕ' ಎಂದರೆ 'ಅಗೆಗದ್ದೆ' ಎಂದರ್ಥ). ಕೊಡವರಲ್ಲಿ ಪ್ರತಿಯೊಂದು ಕುಟುಂಬವನ್ನು ಅದರ ವಂಶದ ಹೆಸರಿನಿಂದ (ವಕ್ಕಪೆದ) ಗುರುತಿಸಲಾಗುತ್ತದೆ. ಇಂತಹ ಪ್ರತೀ ವಕ್ಕಕ್ಕೂ ಇರುವ ಅಗೆಗದ್ದೆಯಲ್ಲಿ ಎರಡು ರೀತಿಗಳಿರುತ್ತವೆ. ಒಂದು ಓಟ್ ಆಕ ಮತ್ತೊಂದು ಗಣೋದಿ ಆಕ. ಓಟ್ ಆಕವೆಂದರೆ ಕೆಸರುಗದ್ದೆಯ ಓಟವನ್ನು ಏರ್ಪಡಿಸುವ ಅಗೆಗದ್ದೆ. 'ಗಣೋದಿ ಅಕ'ವೆಂದರೆ ತೆಂಗಿನಕಾಯಿಯನ್ನು ಒಡೆದು ಗಣಪತಿಗೆ ಪೂಜೆಯನ್ನು ಮಾಡುವ ಅಗೆಗದ್ದೆ. ಕೆಲವು ಕುಟುಂಬಗಳಲ್ಲಿ ಇವೆರಡೂ ಅಗೆಗದ್ದೆಗಳು ಒಂದೇ ಆಗಿರಬಹುದು. ಈ ಕೆಸರುಗದ್ದೆ ಓಟದಲ್ಲಿ ಓಡಿ ಮೊದಲು ಗುರಿ ತಲುಪಿ ಶೌರ್ಯ ಪ್ರದರ್ಶನ ಮಾಡುವ ಗಂಡುಗಳನ್ನು ಈ ಆಟವನ್ನು ನೋಡಲು ಬಂದ ಗುಂಪಿನ ಹೆಣ್ಣುಮಕ್ಕಳು ಮನದಲ್ಲೇ ಮೆಚ್ಚಿಕೊಳ್ಳುತ್ತಿದ್ದರು.

## ೪.ಚೀಲ ಪಾರುವೊ (ಗೋಣಿಚೀಲದಲ್ಲಿ ಹಾರುವುದು):

ಮಕ್ಕಳು ಕಪ್ಪೆಯಂತೆ ಹಾರುತ್ತಾ ಆಡುವ ಆಟದ ಮುಂದುವರಿದ ರೂಪವಾಗಿ

ಕಾಣುವ ಈ ಆಟವು ಬಹಳ ಪ್ರಮುಖವಾದ ಆಟವಾಗಿದ್ದು ಈಗ ನಶಿಸುವ ಅಂಚಿನಲ್ಲಿದೆ.

ಆಟದಲ್ಲಿ ಭಾಗವಹಿಸುವವರೆಲ್ಲರೂ ಒಂದೊಂದು ಗೋಣಿಚೀಲದೊಳಗೆ ಎರಡೂ ಕಾಲನ್ನಿಟ್ಟುಕೊಂಡು ಎದೆಯಮಟ್ಟಕ್ಕೆ ಎತ್ತಿ ಚೀಲದ ಎರಡೂ ಬದಿಯನ್ನು ಎರಡು ಕೈಗಳಲ್ಲಿ ಹಿಡಿದುಕೊಂಡು ನಿಗದಿಪಡಿಸಿದ ಸ್ಥಳದಿಂದ ಗುರಿಮುಟ್ಟಬೇಕಾದ ಸ್ಥಳದವರೆಗೆ ಕುಪ್ಪಳಿಸುತ್ತಾ ಸಾಗಿ ಗುರಿಮುಟ್ಟಬೇಕು. ಯಾರು ಮೊದಲು ಗುರಿಮುಟ್ಟುತ್ತಾರೋ ಅವರು ಗೆದ್ದಂತೆ. ಎರಡೂ ಕಾಲುಗಳನ್ನು ಏಕಕಾಲದಲ್ಲಿ ಎತ್ತಿ ಕುಪ್ಪಳಿಸಿದಂತೆ ಹಾರಬೇಕಾಗಿರುವುದರಿಂದ ಬಹಳ ಶ್ರಮವೂ ಬೇಕಾಗುತ್ತದೆ. ವ್ಯಾಯಾಮ ಸಂಬಂಧೀ ಆಟವಾಗಿಯೂ ಇದು ಕಂಡು ಬರುತ್ತದೆ.

## ೫. ಸಿದ್ಧಿಯಾಟ್ (ಸಿದ್ಧಿ ಆಟ):

ಹುತ್ತರಿಯ ಸಂದರ್ಭದಲ್ಲಿ ಆಡುವ ಆಚರಣಾ ಪ್ರಧಾನ ಆಟಗಳಲ್ಲಿ ಇದು ಒಂದು. ಕೈಗಳನ್ನು ಮಡಚಿಕೊಂಡು ಎರಡು ಕಾಲಲ್ಲೇ ಹಿಂದು ಮುಂದು ಮಾಡುತ್ತಾ ಆಡುವ ಆಟವಿದು. ಒಂದು ರೀತಿಯಲ್ಲಿ ಕುಣಿತದ ಭಾಗವಾಗಿಯೇ ಇದು ಮುಖ್ಯವಾಗಿದೆ ಎನ್ನಬಹುದು. ಇಂದು ಬಹುಪಾಲು ನಶಿಸಿಹೋಗಿರುವ ಆಟಗಳಲ್ಲಿ ಇದೂ ಸೇರಿಕೊಳ್ಳುತ್ತದೆ.

ಪುರುಷರು ಸಾಮಾನ್ಯ ಆಟವಾಗಿ ಆಡುವಂತಹ ಜನಪದ ಆಟಗಳು ಕಡಿಮೆಯೆಂದೇ ಹೇಳಬಹುದು. ಆದರೆ ಧಾರ್ಮಿಕ ಆಚರಣೆಯ ಅಂಗವಾಗಿ ಹಾಕುವ ವೇಷಗಳು, ಮಾಡುವ ಕುಣಿತಗಳು ಜನಪದ ಆಟಗಳಷ್ಟೇ ಸಂತೋಷವನ್ನು ನೀಡುತ್ತದೆ. ಈ ನೆಲೆಯಲ್ಲಿ ಕೊಡವ ಭಾಷೆಯಲ್ಲಿ ವೇಷ, ಆಚರಣೆಗಳನ್ನು ‘ಕಳಿ’ (ಆಟ) ಎಂಬ ಅರ್ಥದಲ್ಲೇ ಗುರುತಿಸಿರುವುದು ಗಮನಾರ್ಹ. ಹಾಗೂ ಸಾಂಕೇತಿಕವೇ ಆಗಿದೆ ಎನ್ನಬಹುದು. ಆಟಗಳ ಕೊನೆಯ ಭಾಗದಲ್ಲಿ ‘ಸಂಕೀರ್ಣ’ದಲ್ಲಿ ಇವುಗಳ ಕುರಿತು ವಿವರಗಳನ್ನು ನೀಡಲಾಗುವುದು.

## ೬. ಕುಂದ್‌ಕಾಡ್ ಓಟ (ಗುಡ್ಡಗಾಡು ಓಟ):

ಇದು ಸಾಹಸಪ್ರಧಾನ ಆಟವಾಗಿ ಗುರುತಿಸಿಕೊಂಡಿದೆ. ಮೂಲತಃ ಕೊಡಗಿನ ಭೌಗೋಳಿಕ ಪರಿಸರವೇ ಬೆಟ್ಟ-ಗುಡ್ಡಗಳಿಂದ, ಕಾಡು-ಮೇಡುಗಳಿಂದ ಕೂಡಿದೆ. ಇಲ್ಲಿನ

ಪರಿಸರದಲ್ಲಿ ದಿನನಿತ್ಯದ ಓಡಾಟವೇ ಸಾಹಸಪ್ರಧಾನ ನೆಲೆಯದ್ದು. ಎತ್ತರದ ಭಾಗದಲ್ಲಿ ಮನೆಕಟ್ಟಿಕೊಂಡಿರುವವರು ನಿತ್ಯಬಳಕೆಯ ವಸ್ತುಗಳೊಂದಿಗೆ ಗುಡ್ಡ ಹತ್ತಿ ಇಳಿಯುವುದಿರಬಹುದು, ನದಿ-ತೋಡುಗಳನ್ನು ಸಣ್ಣ ಕೈಪಾಲಗಳನ್ನು ಬಳಸಿದಾಟುವುದಿರಬಹುದು. ತೀವ್ರ ಚಳಿಗಾಲದಲ್ಲಿ ದಟ್ಟ ಮಂಜು ಮುಸುಕಿರುವಾಗಿನ ಪ್ರಯಾಸದ ಓಡಾಟವಿರಬಹುದು ಎಲ್ಲವೂ ಹೆಜ್ಜೆಹೆಜ್ಜೆಗೆ ಬದುಕಿನಲ್ಲಿ ಸವಾಲನ್ನೇ ಒಡ್ಡುತ್ತವೆ. ಅಂತಹುದರಲ್ಲಿ ಅತ್ಯಂತ ತೀವ್ರದಾದ ಗುಡ್ಡಗಾಡು ಪ್ರದೇಶಗಳನ್ನು ಆಯ್ಕೆ ಮಾಡಿ ಅಲ್ಲಿ ಒಂದು ನಿರ್ದಿಷ್ಟ ಸ್ಥಳದಿಂದ ಆಟಗಾರರು ಓಡಲಾರಂಭಿಸುವಂತೆ ನಿಗಧಿತ ಗುರಿಯನ್ನು ತಲುಪುವಂತೆ ಆಯೋಜಿಸಲಾಗುವ ಆಟವನ್ನು 'ಗುಡ್ಡಗಾಡು ಓಟ' ಎನ್ನತ್ತಾರೆ. ಯಾರು ಮೊದಲು ಗುರಿ ತಲುಪುತ್ತಾರೋ ಅವರು ಗೆಲ್ಲುತ್ತಾರೆ.

ಇದು ಕೊಡಗು ಜಿಲ್ಲೆಯಲ್ಲಿ ಯಾವುದೇ ಸಮುದಾಯದ ಭೇದವಿಲ್ಲದೆ ಎಲ್ಲರೂ ಭಾಗವಹಿಸುವ ಸಾಮಾನ್ಯ ಆಟವಾಗಿದೆ. ಇಲ್ಲಿ ಕೊಡವರೂ ತಮ್ಮನ್ನು ತೊಡಗಿಸಿಕೊಳ್ಳುವುದರಿಂದ ಈ ಆಟವನ್ನು ಕೊಡವರ ಆಟಗಳೊಂದಿಗೆ ಗುರುತಿಸಲಾಗಿದೆ.

ಅಪಾರ ದೈಹಿಕ ಸಾಮರ್ಥ್ಯವನ್ನು ಬಯಸುವ ಈ ಆಟವು ಆಟಗಾರನಲ್ಲಿ ಆತ್ಮಸ್ಥೈರ್ಯವನ್ನು ಹೆಚ್ಚಿಸುತ್ತದೆ. ದೇಹಕ್ಕೆ ವ್ಯಾಯಾಮವನ್ನು ನೀಡುತ್ತದೆ.

## ೩. ವೃದ್ಧರ ಆಟಗಳು:

ಆಟಗಳು ಮೂಲತಃ ಮನರಂಜನೆಯನ್ನು ನೀಡುವ ಉದ್ದೇಶವುಳ್ಳದ್ದರಿಂದ ಆಟಗಳಿಗೆ ಯಾವುದೇ ವಯೋಮಾನದ ಮಿತಿ ಇರಬೇಕಾಗಿಲ್ಲ. ಈ ನೆಲೆಯಲ್ಲಿ ವೃದ್ಧರೂ ಕೂಡ ಕೆಲವಾರು ಆಟಗಳಲ್ಲಿ ಭಾಗವಹಿಸುವುದರ ಮೂಲಕ ತಮ್ಮ ಮನಸ್ಸಿಗೆ ಉಲ್ಲಾಸವನ್ನು ತಂದುಕೊಳ್ಳುತ್ತಾರೆ. ತಾವು ಪ್ರತ್ಯೇಕವಾಗದೆ ಎಲ್ಲರೊಡನೆ ಬೆರೆಯಲು ಇದೊಂದು ಅವಕಾಶ.

### ೧. ಓಟ್‌ನಡತೆ (ಓಟದ ನಡಿಗೆ/ವೇಗದ ನಡಿಗೆ):

ಸಾಮಾನ್ಯವಾಗಿ ಒಂದೇ ವಯಸ್ಸಿನ ಸುತ್ತಮುತ್ತಲಿರುವ ವೃದ್ಧರಿಗೆ (ಮುದುಕರು ಹಾಗೂ ಮುದುಕಿಯರಿಗೂ ಸೇರಿದಂತೆ) ಚುರುಕಿನ ನಡಿಗೆಯ ಸ್ಪರ್ಧೆ ನಡೆಸಲಾಗುತ್ತದೆ.

ಬೇಗೆ ನಡೆದು ಗುರಿ ಮುಟ್ಟಿದವರು ಆಟದಲ್ಲಿ ಗೆದ್ದಂತೆ.

ಹೀಗೆ ನಡೆಯುವ ಸ್ಪರ್ಧೆಯನ್ನು ಏರ್ಪಡಿಸುವಾಗ ಕೈಬೀಸುತ್ತಾ ಕಾಲ್ನಡಿಗೆಯಲ್ಲಿ ಸಾಗಿ ಗುರಿಮುಟ್ಟುವುದು ಒಂದು ಕ್ರಮವಾಗಿದರೆ ಮತ್ತೊಂದರಲ್ಲಿ ಮಳೆಗಾಲದಲ್ಲಿ ಗದ್ದೆಗಳಲ್ಲಿ ಕೆಲಸಮಾಡುವವರು ಮಳೆಯಿಂದ ರಕ್ಷಣೆ ಪಡೆಯಲು ತಲೆಗೆ ಹಾಕಿಕೊಳ್ಳುತ್ತಿದ್ದ 'ಕೂವಲೆ ಕೊಡೆ' (ಕಾಡಿನಲ್ಲಿ ದೊರಕುವ ಅಗಲವಾದ ಎಲೆಗಳಿಂದ 'ಕುವಲೆ ಎಲೆ'ಗಳನ್ನು ಬಳಸಿ, ಬಿದಿರು ಅಥವಾ ಬೆತ್ತದ ಕಡ್ಡಿಗಳ ನಡುವೆ ಸಿಕ್ಕಿಸಿ ನೀರು ಬೀಳದಂತೆ ಮಾಡುವ ಕೊಡೆ) ಯನ್ನು ತಲೆಗೆ ಹಾಕಿಕೊಂಡು ನಡೆಯುತ್ತಾ ಸಾಗಿ ಗುರಿಮುಟ್ಟಬೇಕು.

ಇಂದು ಆಚರಣೆಯಲ್ಲಿ ಬಿಟ್ಟುಹೋಗಿರುವ ಆಟವಾಗಿ ಇದು ಮರೆಯಾಗುತ್ತಿದೆ. ಕೃಷಿ ಚಟುವಟಿಕೆಗಳೇ ಕಡಿಮೆಯಾಗುತ್ತಿರುವಾಗ, ಇಂತಹ ದೇಸೀ ನಿರ್ಮಿತ ಕೊಡೆಯ ಸ್ಥಾನವನ್ನ ಆಧುನಿಕ ಪ್ಲಾಸ್ಟಿಕ್ ಆಕ್ರಮಿಸಿಕೊಂಡು ಹಳೆಯ ವಸ್ತುಗಳೆಲ್ಲಾ ವಸ್ತುಸಂಗ್ರಹಾಲಯ ಸೇರುತ್ತಿವೆ.



## ೨. ಪೀರೆಕೆ ಪಡೆ (ಕಾಡು ಸೌತೆ ಎಸೆಯುವ ಆಟ):

ಇದು ಮುದುಕರು ಮಾತ್ರ ಆಡುವ ಆಚರಣಾ ಸಂಬಂಧೀ ಆಟ. ಹುತ್ತರಿ

ಹಬ್ಬದ ಆಚರಣೆಯ ಭಾಗವಾಗಿ ಮಕ್ಕಳು,ನಡು ವಯಸ್ಕರು ಬೇರೆ ಬೇರೆ ಆಟಗಳನ್ನು ಆಡುವಂತೆ ಮುದುಕರು ಈ ಆಟವನ್ನು ಆಡುತ್ತಾರೆ. ಇದು ಬಹುಪಾಲು ನಶಿಸಿಹೋಗಿರುವ ಆಟ. ಈಗ ಪ್ರಸ್ತುತ ಆಟವು ಹೆಚ್ಚಾಗಿ ಚಾಲ್ತಿಯಲ್ಲಿ ಕಂಡುಬರುವುದಿಲ್ಲ. 'ಹುತ್ತರಿ'ಯ ಸಂದರ್ಭದಲ್ಲಿ 'ಊರ್‌ಮಂದ್' (ಊರಿನ ಸಾಂಸ್ಕೃತಿಕ ಉತ್ಸವಗಳು ನಡೆಯುವ ಸ್ಥಳ) ನಲ್ಲಿ 'ವಾಲಗ'ಕ್ಕೆ (ವಾದ್ಯಗೋಷ್ಠಿಗೆ) ತಕ್ಕಂತೆ ಕುಣಿಯುತ್ತಾ ಮುದುಕರ ಮೊಣಕಾಲಿನಿಂದ ಕೆಳಗೆ ತಗುಲುವಂತೆ 'ಪೀರಕೆ' (ಕಾಡುಹಾಗಲಕಾಯಿ; ಇದು ಸೌತೆಕಾಯಿ ಆಕಾರದಲ್ಲಿರುವ ಕಿರುಬೆರಳಿನಷ್ಟು ಮಾತ್ರ ಉದ್ದವಿರುವ, ಅತ್ಯಂತ ಕಹಿಯಾಗಿರುವ ಒಂದು ಕಾಯಿ. ಇದನ್ನು 'ಕಾಡುಸೌತೆ' ಎಂದೂ ಕರೆಯುತ್ತಾರೆ.) ಕಾಯಿಯನ್ನು ಎಸೆಯುತ್ತಾರೆ. ಮುದುಕರು ಅದರಿಂದ ತಪ್ಪಿಸಿಕೊಳ್ಳುತ್ತಾ ಕುಣಿಯುತ್ತಾ ಓಡಾಡಬೇಕು. ಪೀರಕೆ ಮೊಣಕಾಲಿಂದ ಕೆಳಗೆ ತಗುಲಿದಾಗ ಅವರು ಆಟದಿಂದ ಹೊರಗುಳಿಯುತ್ತಾರೆ.

ಹೀಗೆ ಪೀರಕೆಯನ್ನು ಎಸೆಯುವವರು ಯಾರು ಬೇಕಾದರೂ ಆಗಬಹುದು. ಒಂದು ನಿರ್ದಿಷ್ಟ ಅಂತರದಲ್ಲಿ ಎಸೆಯುವವರು ಎರಡು ಗುಂಪುಗಳಾಗಿ ಕುಳಿತುಕೊಂಡು ನಡುವೆ ಕುಣಿಯುತ್ತಾ ಓಡಾಡುವ ಮುದುಕರ ಕಾಲಿಗೆ (ಮೊಣಕಾಲಿನಿಂದ ಕೆಳಗೆ) 'ಪೀರಕೆ' ಯನ್ನು ಎಸೆಯುತ್ತಾರೆ. ತಮಾಷೆಗಾಗಿ ಈ ಆಟವನ್ನು ಆಡುತ್ತಾರೆ. ಸೋಲು ಗೆಲುವಿನ ಪ್ರಶ್ನೆ ಇಲ್ಲಿಲ್ಲ. ಕೆಲವೊಮ್ಮೆ ಈ ಆಟವನ್ನು ನಡುವಯಸ್ಸಿನ ಗಂಡಸರೂ ಆಡುತ್ತಿದ್ದರು.

## ೨. ಕಟ್ಟೈಕಳಿ (ಚೌಕಾಬಾರ):

ಮಕ್ಕಳು ಹನೆಮರದ ಒಡೆದ ಕಾಯಿಗಳನ್ನು ಅಥವಾ ಹುಣಸೇಬೀಜವನ್ನು ಒಡೆದು ಅವುಗಳನ್ನು ಬಳಸಿಕೊಂಡು ನೆಲದಮೇಲೆ ಆಡುವ 'ಕವುಡಿಕಳಿ' (ಹುಣಸೇಬೀಜದಾಟ)ದ ನಿಯಮಗಳೇ ಇಲ್ಲೂ ಬಳಕೆಯಾಗುತ್ತವೆಯಾದ್ದರಿಂದ ಈ ಆಟವನ್ನು ಆಡುವ ಕ್ರಮವನ್ನು ಇಲ್ಲಿ ವಿವರಿಸಲಾಗಿಲ್ಲ. ಮಕ್ಕಳು ಗುಂಪಿನಲ್ಲಿ ಆಡುವ ಆಟಗಳ ಭಾಗದಲ್ಲೇ ವಿವರಗಳನ್ನು ನೀಡಲಾಗಿದೆ.

ಸಾಮಾನ್ಯವಾಗಿ ವೃದ್ಧರು ಅಂದರೆ ಮುದುಕ-ಮುದುಕಿಯರು ಸೇರಿಕೊಂಡು ಚೌಕದ ಗುರುತುಗಳನ್ನು ಮಾಡಿರುವ ಹಾಳೆಯನ್ನು ಹಾಸಿಕೊಂಡು ಅದರ ಮೇಲೆ

ಕಾಯಿಗಳಾಗಿ ಒಡೆದ ಹುಣಸೆ ಬೀಜ, ಹನೆಮರದ ಕಾಯಿ ಅಥವಾ ಕವುಡಿಯನ್ನು ಬಳಸಿಕೊಂಡು ಆಡುತ್ತಾರೆ. ಕಾಯಿಗಳು ಬಿದ್ದರೀತಿಗನುಗುಣವಾಗಿ ಚೌಕದಲ್ಲಿ ಕಾಯಿಗಳನ್ನು ಮುನ್ನಡೆಸಲಾಗುತ್ತದೆ.

ಸ್ಥೂಲವಾಗಿ ಪಗಡೆಯಾಟವನ್ನು ಹೋಲುವ ಈ ಆಟವು ಬಹುಪಾಲು ಆಧುನಿಕದ ಚೆಸ್ ಆಟದ ಮಾದರಿಗೆ ಸಮೀಪದಲ್ಲಿದೆ. ಒಳಾಂಗಣದ ಆಟಗಳಲ್ಲಿ ಮುಖ್ಯ ಆಟವಾಗಿರುವ ಇದನ್ನು ಮುದುಕಿಯರು ಪ್ರಧಾನವಾಗಿ ಆಡಿದರೂ ಮುದುಕರು, ಯುವಕ-ಯುವತಿಯರು ಆಟಬಲ್ಲ ಮಕ್ಕಳು ಎಲ್ಲರೂ ಒಟ್ಟಾಗಿ ಸೇರಿಕೊಂಡು ಆಡುತ್ತಿದ್ದರು. ಕೊಡವರು 'ಐನ್‌ಮನೆ' (ಪಾರಂಪರಿಕ ಮೂಲಮನೆಗಳು) ಗಳಲ್ಲೇ ವಾಸಿಸುತ್ತಿದ್ದ ಕಾಲಕ್ಕೆ ಎಲ್ಲರೂ ಗುಂಪಿನಲ್ಲಿ ಆಡುವ ಆಟವಾಗಿ ಇದು ವಿಶೇಷ ಆಕರ್ಷಣೆಯನ್ನು ಪಡೆದುಕೊಂಡಿತ್ತು. ಬದಲಾದ ಜೀವನ ಶೈಲಿಯಲ್ಲಿ ಇಂತಹ ಆಟಗಳೂ ಇಂದು ಮೂಲೆಗುಂಪಾಗಿವೆ.

ಶಿವರಾತ್ರಿಯಂತಹ ಸಂದರ್ಭದಲ್ಲಿ ರಾತ್ರಿಪೂರ್ತಿ ಮನೆಯವರೆಲ್ಲಾ ಸೇರಿಕೊಂಡು ಈ ಆಟವನ್ನು ಆಡುತ್ತಿದ್ದರು. ಇಂದು ದೇವಸ್ಥಾನದಲ್ಲಿ ನಡೆಸುವ ಪೂರ್ಣರಾತ್ರಿಯ ಪೂಜೆ, ಹರಿಕಥೆ, ಆರ್ಕೆಸ್ಟ್ರಾಗಳು, ಮನರಂಜನಾ ಕಾರ್ಯಕ್ರಮಗಳು ಈ ಆಟಗಳನ್ನು ಬದಿಗೆ ತಳ್ಳಿವೆ.



## ೪. ಕವುಡಿ ಕಳಿ (ಕವುಡಿ ಆಟ):

ಈ ಆಟವನ್ನು ಕೂಡ ಬಹಳ ಪ್ರಾಚೀನ ಜನಪದ ಆಟಗಳ ನಡುವೆ ಗುರುತಿಸಿಕೊಳ್ಳುವ ಆಟವಾಗಿದ್ದು ಹೆಣ್ಣುಮಕ್ಕಳ ಮುಖ್ಯ ಒಳಾಂಗಣದ ಆಟವಾಗಿ ವಿಶೇಷವಾಗಿದೆ. ಈಗಾಗಲೇ ಈ ಆಟದ ಕುರಿತ ವಿವರಗಳನ್ನು ಚರ್ಚಿಸಿರುವುದರಿಂದ ಇಲ್ಲಿ ಅವುಗಳನ್ನು ಕೈಬಿಡಲಾಗಿದೆ.

## ೪. 'ಕೊತ್ತಿಪರ'ಕಳಿ (ಕಲ್ಲಾಟ):

ಕೊಡವ ಭಾಷೆಯಲ್ಲಿ 'ಪರ' ಎಂದರೆ 'ಕಲ್ಲು' ಇದು ಹೆಣ್ಣುಮಕ್ಕಳ ಆಟವಾಗಿ ಪ್ರಾಮುಖ್ಯತೆಯನ್ನು ಪಡೆದುಕೊಂಡರೂ ಮನೆಯೊಳಗಿಂದ ಬಂದು ಹೊರಗೆ ಓಡಾಡಲಾಗದ ಮುದುಕ-ಮುದುಕಿಯರೂ ಕೂಡ ಈ ಆಟವನ್ನು ಒಳಾಂಗಣದ ಆಟವಾಗಿ ಆಡುತ್ತಿದ್ದರು ಎನ್ನುತ್ತಾರೆ ಕೊಡವ ಜಾನಪದ ತಜ್ಞರಾದ ಶ್ರೀ ಬಾಚರಣಿಯಂಡ ಅಪ್ಪಣ್ಣನವರು. ಹೆಣ್ಣುಮಕ್ಕಳ ಆಟಗಳನ್ನು ಚರ್ಚಿಸಿರುವುದರ ನಡುವೆ 'ಕಲ್ಲಾಟ' ವನ್ನಾಡುವ ಕ್ರಮವನ್ನು ವಿವರಿಸಿರುವುದರಿಂದ ಇಲ್ಲಿ ಹೆಚ್ಚಿನ ವಿವರಗಳನ್ನು ನೀಡಲಾಗಿಲ್ಲ.

## ೬. ಸ್ವರ್ಗ್‌ಕ್ ಪೋಪದ್ (ಸ್ವರ್ಗಕ್ಕೆ ಹೋಗುವುದು/ಸ್ವರ್ಗಾರೋಹಣ):

ಸುಮಾರಾಗಿ ಚೌಕಾಬಾರ ಆಟದ ರೀತಿಯನ್ನು ಹೋಲುವ ಈ ಆಟವು ಆಧುನಿಕ ಮಕ್ಕಳಾಟವಾದ ಹಾವು-ಏಣಿ ಆಟದ ಪ್ರಾಚೀನ ರೂಪದಂತಿದೆ. ಇದು ಮುದುಕ-ಮುದುಕಿಯರು ಆಡುವ ಒಳಾಂಗಣದ ಆಟ. ಸಂಪೂರ್ಣವಾಗಿ ನಶಿಸಿ ಹೋಗಿರುವ ಆಟಗಳಲ್ಲಿ ಇದೂ ಒಂದು.

'ಚೌಕಾಬಾರ' ಆಟದಲ್ಲಿ ಚೌಕಗಳಲ್ಲಿ ಕಾಯಿಗಳನ್ನು ಮುನ್ನಡೆಸುತ್ತಾ ಮೂಲೆಮನೆಯನ್ನು ಸೇರಿದರೆ ಸ್ವರ್ಗ ಸೇರಿದಂತೆ. ಕಾಯಿಗಳಾಗಿ ಇಲ್ಲೂ ಕವಡೆ, ಹನೆಮರದ ಕಾಯಿ ಅಥವಾ ಹುಣಸೇ ಬೀಜಗಳನ್ನೇ ಬಳಸಲಾಗುತ್ತಿತ್ತು. ಇಂದು ಹಾವು-ಏಣಿಯ ಚಿತ್ರವಿರುವ ಚೌಕಾಕೃತಿಯಲ್ಲಿ ಮನೆಗಳನ್ನು (ಚೌಕ) ಮಾಡಿ ಆಡಲು ಸಿದ್ಧ ಸಾಮಗ್ರಿಗಳು ಮಾರುಕಟ್ಟೆಯಲ್ಲೇ ದೊರಕುವುದರಿಂದ ಈ ಜನಪದ ಆಟ ಪರಿಪೂರ್ಣವಾಗಿ ಇಲ್ಲವಾಗಿದೆ. ಹಾವು-ಏಣಿ ಆಟ ಮಕ್ಕಳ ಪ್ರಮುಖ ಆಟವಾಗಿ ಸ್ಥಾನವನ್ನು ಪಡೆದುಕೊಂಡಿದೆ. ಮುದುಕ ಮುದುಕಿಯರು ಆಡುತ್ತಿದ್ದು ಈಗ ಮರೆವಿನ

ಅಂಚಿಗೆ ಸರಿದು ಹೋಗಿರುವ ಈ ಅಪರೂಪದ ಆಟದ ಕುರಿತು ಮಾಹಿತಿ ನೀಡಿದವರು ಶ್ರೀ ಬೊಳ್ಳಚೆಟ್ಟೀರ ಕುಶಾಲಪ್ಪನವರು.

## ೭.ಮೇದನೂ-ಮೇದಿಯೂ (ಮೇದನೂ ಆತನ ಹೆಂಡತಿಯೂ):

ಹುತ್ತರಿಯ ಆಚರಣೆಯ ಸಂದರ್ಭದಲ್ಲಿ 'ಮಂದ್'ನಲ್ಲಿ ವೃದ್ಧರು ಆಡುವ ಅಣಕು ಆಟವಿದು. ನಶಿಸಿಹೋಗಿರುವ ಆಟಗಳ ಗುಂಪಿಗೆ ಸೇರುವ ಈ ಆಟದ ಕುರಿತು ಮಾಹಿತಿಗಳೂ ಸಿಗುವುದಿಲ್ಲ. ಅಪರೂಪದ ಈ ಆಟದ ಕುರಿತು ಮಾಹಿತಿ ನೀಡಿದವರು ಶ್ರೀ ಬಾಚರಣಿಯಂಡ ಅಪ್ಪಣ್ಣನವರು.

ಕೊಡವರ ಸುಗ್ಗಿಹಬ್ಬವಾದ ಹುತ್ತರಿಯ ಸಂದರ್ಭದಲ್ಲಿ ಹಬ್ಬದ ಮರುದಿನದಿಂದ ವಾದ್ಯನುಡಿಸುವವರು (ವಾಲಗದವರು) ಪ್ರತೀ ಮನೆಗಳಿಗೆ ಭೇಟಿ ನೀಡಿ ಅವರಿಂದ ಆಹಾರ ಸಾಮಗ್ರಿಗಳನ್ನು ಸಂಗ್ರಹಿಸಿಕೊಂಡು ಮನೆಯ ಅಂಗಳದಲ್ಲಿ ಶುಭಸೂಚನೆಯಾಗಿ ವಾದ್ಯನುಡಿಸುತ್ತಾ ಹೋಗುತ್ತಾರೆ. ಈ ವಾದ್ಯನುಡಿಸುವವನನ್ನು 'ಮೇದ' ಎಂದೂ ಆತನ ಹೆಂಡತಿಯನ್ನು 'ಮೇದಿ' ಎಂದೂ ಕರೆಯುತ್ತರೆ. ಇವರು ಹೇಗೆ ಮನೆ ಮನೆಗೆ ತಿರುಗುತ್ತಾರೆಂಬುದನ್ನು 'ಮಂದ್'ನಲ್ಲಿ ವೃದ್ಧರು ಅಣಕು ಮಾಡಿ ಅಲ್ಲಿದ್ದವರನ್ನು ನಕ್ಕು ನಲಿಸುತ್ತಾರೆ. ಈ ಭಾಗ ಸಂಭಾಷಣಾ ಪ್ರಧಾನವಾಗಿದ್ದು ನಾಟಕೀಯವಾಗಿರುತ್ತದೆ. ಎಲ್ಲಿಗೆ ಹೊರಟೆ ಎಂದು ಮೇದನನ್ನು ಕೇಳಿದಾಗ ಅವನು ಮನೆ ಬೋಡ್ಲೊಕ್ (ಮನೆಯವರಲ್ಲಿ ಬೇಡಲು) ಎನ್ನುತ್ತಾನೆ. ಸಾಮಾನ್ಯವಾಗಿ ಪ್ರತಿಯೊಬ್ಬ ಕೊಡವರ ಮನೆಗಳಲ್ಲೂ ನಾಯಿಯನ್ನು ಸಾಕಿರುತ್ತಾರೆ. ಮೇದ-ಮೇದಿಯರು ಒಂದು ಮನೆ ಸಮೀಪಿಸುತ್ತಾರೆ. ಆಗ ನಾಯಿಗಳು ಅವರನ್ನು ಅಟ್ಟಿಸಿಕೊಂಡು ಹೋಗುತ್ತವೆ. ಆಗ ಮೇದ ಕೈಯಲ್ಲಿರುವ ಕೋಲಿನಿಂದ ನಾಯಿಗಳನ್ನು ಹೊಡೆದು ಅಟ್ಟುತ್ತಾನೆ. ಅಷ್ಟರಲ್ಲಿ ಇದನ್ನು ನೋಡುತ್ತಾ ಪಕ್ಕದಲ್ಲಿ ನಿಂತ ಯುವಕರು ಮೇದಿ ಒಬ್ಬಳೇ ನಿಂತಿರುವುದನ್ನು ನೋಡಿ ಬೀದಿ ಕಾಮಣ್ಣರಂತೆ ಅವಳನ್ನು ಸುತ್ತುಗಟ್ಟಿ ಚೇಷ್ಟೆಮಾಡುತ್ತಾರೆ. ಆಗ ಮೇದ ಓಡಿಬಂದು ತನ್ನ ಹೆಂಡತಿ ಮೇದಿಯನ್ನು ರಕ್ಷಣೆ ಮಾಡುತ್ತಾನೆ. ಅನಂತರ ಮೇದಿಯೊಂದಿಗೆ ಒಂದು ಮನೆಗೆ ಹೋಗುತ್ತಾನೆ. ಅಲ್ಲಿ ಮನೆಯ ಮುಂದೆ ನಿಂತು ಹಾಡುತ್ತಾ ಯಜಮಾನ/ಯಜಮಾನಿಯನ್ನು ಕರೆಯುತ್ತಾನೆ. ಆ ಹಾಡು ಹೀಗಿದೆ -

"ಆಕರಿ ಈ ಕರಿ ಕುರುಕರಿ
ಪುತ್ತರಿ ಕಳಂಜಿ ತಾರಿ
ಪುತ್ತರಿರ ಪುಳಕಂಜಿನೋ ತರೊಂಡು"
(ಆಸಾರು ಈ ಸಾರು ಕಾಳು ಸಾರು
ಹುತ್ತರಿಯ ಗೆಣಸನ್ನು ನೀಡಿರಿ
ಹುತ್ತರಿಯ ಸಾರಾಯಿಯ ಗಂಜಿಯನ್ನು ನೀಡಿರಿ)
ಎಂದು ಜೋರಾಗಿ ಹಾಡುತ್ತಾರೆ.

'ಪುಳಕಂಜಿ' ಎಂದರೆ ಹಿಂದೆ ಮನೆಗಳಲ್ಲಿ ಸಾರಾಯಿಯನ್ನು ಗ್ರಾಮೀಣ ಜನರು ತಾವೇ ತಯಾರಿಸಿಕೊಳ್ಳುತ್ತಿದ್ದರು. ಸಾರಾಯಿ ಕಾಯಿಸಲು ಬೇಕಾದ ಪದಾರ್ಥಗಳನ್ನು ಒಂದು ಮಡಕೆಯಲ್ಲಿಟ್ಟು ಮುಚ್ಚುತ್ತಿದ್ದರು. ಮೂರು ದಿವಸಗಳ ಅನಂತರ ಒಲೆಯಲ್ಲಿ ಇಟ್ಟು ಅದನ್ನು ಕಾಯಿಸಿ ಭಟ್ಟಿ ಇಳಿಸಿ ತಯಾರಿಸುತ್ತಿದ್ದ 'ಭತ್ತ ಸಾರಾಯಿ'ಗೆ ವಿಶೇಷವಾದ ಬೇಡಿಕೆ ಇತ್ತು. ಕಾಯಿಸಿದ ಸಾರಾಯಿ ಇಲ್ಲದಿದ್ದರೆ, ಕಾಯಿಸಲು ತಯಾರಿಸಿದ ಮಿಶ್ರಣವನ್ನಾದರೂ ಕೊಡಿ ಎಂದು ಕೇಳುತ್ತಿದ್ದರು. ಈ ಮಿಶ್ರಣವನ್ನು 'ಪುಳಕಂಜಿ' ಎನ್ನುತ್ತಾರೆ). ಮೇದನು 'ಪುಳಕಂಜಿ' ಕುಡಿದು ತೂರಾಡುತ್ತಾ ನಡೆದವರಂತೆ ನಡೆದು ಆಟಮುಗಿಸುತ್ತಾರೆ.

ಹುತ್ತರಿಯ ಹಬ್ಬದಲ್ಲಿ ಕೊಡಗಿನ ಎಲ್ಲಾ ಸಮುದಾಯದವರು ಪ್ರೀತಿಯಿಂದ, ಸಂತೋಷದಿಂದ ಭಾಗವಹಿಸುತ್ತಿದ್ದ ವಿವರಗಳೊಂದಿಗೆ ಪಡ್ಡೆಹುಡುಗರ ಚೇಷ್ಟೆಯನ್ನು ಈ 'ಅಣಕುವಾಡಿ'ನಂತಿರುವ ಆಟ ಪ್ರತಿನಿಧಿಸುತ್ತದೆ. ಸುಮಾರು ಒಂಬತ್ತು ದಿವಸಗಳವರೆಗೆ 'ಈಡ್' (ಹಬ್ಬದ ಆರಂಭ) ಕಟ್ಟುವುದರ ಮೂಲಕ ಆರಂಭವಾಗಿ ಹಾಡು-ಕುಣಿತ, ನೃತ್ಯ, ಆಟಗಳೊಂದಿಗೆ ಸಮಾಪ್ತಿಯಾಗುತ್ತಿದ್ದುದು ಕಡಿಮೆಯಾಗಿ ಇಂದು ಸಾಂಕೇತಿಕವಾಗಿ ಹಬ್ಬದ ಆಚರಣೆಗಳನ್ನು ಒಂದೆರಡು ದಿವಸಗಳಲ್ಲಿ ಮಾಡಿಮುಗಿಸುವಂತಾಗಿದೆ. ಈ ದಿಸೆಯಲ್ಲಿ ಹಬ್ಬದ ಆಚರಣೆಯ ಭಾಗಗಳಾಗಿ ಮಾಡುವ ಹಲವಾರು ಕುಣಿತಗಳು, ಆಟಗಳು ಇಂದು ಕಣ್ಮರೆಯಾಗಿವೆ.

## ೮. ತಾಳ ಎಡ್‌ಪೊ (ತಾಳ ತೆಗೆಯುವುದು):

ಕೊಡವರ ಮದುವೆಯ ಆಚರಣೆಯ ಸಂದರ್ಭದಲ್ಲಿ ತಾಮ್ರದ ದೊಡ್ಡ

ತಾಳಗಳನ್ನು ಕೈಯಲ್ಲಿ ಹಿಡಿದುಕೊಂಡು ಮದುವೆಮನೆಯಲ್ಲಿ 'ಉಮ್ಮತ್ತಾಟ'ದ ರೀತಿಯಲ್ಲೇ ಕುಣಿಯುತ್ತಿದ್ದರು. ಇದು ಇಪ್ಪತ್ತನೆಯ ಶತಮಾನದ ಪೂರ್ವಾರ್ಧದವರೆಗೂ ರೂಢಿಯಲ್ಲಿ ಇತ್ತು ಎಂಬುದಾಗಿ ಕೆಲವು ಹಿರಿಯರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಆದರೆ ಈಗ ಮದುವೆಯಲ್ಲಿ ಈ ರೀತಿಯ ಜನಪದ ಆಟ/ಕುಣಿತಗಳು ಕಂಡು ಬರುವುದಿಲ್ಲ.

ಉತ್ತರ ಕೊಡಗಿನ ಸೂರ್ಲಬ್ಬಿ ಭಾಗದಲ್ಲಿ ಆಚರಣೆಯ ಭಾಗವಾಗಿ ಸಾವಿನ ಅನಂತರದ ತಿಥಿಯ ಸಂದರ್ಭದಲ್ಲಿ 'ದುಡಿ-ತಾಳ ಎಡ್‌ಪೊ' (ದುಡಿ-ತಾಳ-ತೆಗೆಯುವುದು) ಎಂಬ ಆಚರಣೆಯಲ್ಲಿ ಸತ್ತವರನ್ನು ಗಂಡಸರು ದುಡಿಬಾರಿಸುತ್ತಾ ಹಾಡಿ ಹೊಗಳುವಾಗ ವೃದ್ಧರಾದ ಹೆಂಗಸರು ತಾಳವನ್ನು ತೆಗೆದುಕೊಂಡು ಒಂದು ಸುತ್ತು ಉಮ್ಮತ್ತಾಟದ ರೀತಿಯಲ್ಲಿ ಮನೆಯ 'ನಡುಬಾಡೆ'ಯಲ್ಲಿ (ನಡುಮನೆಯಲ್ಲಿ) ಕುಣಿಯುವ ಕ್ರಮವಿದೆ. ದಕ್ಷಿಣ ಕೊಡಗಿನ ಭಾಗದಲ್ಲಿ ಈ ಆಚರಣೆ ಇಲ್ಲ.

ಇವುಗಳಲ್ಲದೆ 'ನಾಡೆಕಾಕುವೊ' (ನಾಡೆ ಕರೆಯುವುದು) ಎಂಬ ಆಟವನ್ನೂ 'ಮಂದ್' ನಲ್ಲಿ ಆಡುತ್ತಾರೆ. ಇದು ಆಟ ಎನ್ನುವುದಕ್ಕಿಂತ ಆಚರಣೆಯ ಭಾಗವಾಗಿ ಕಂಡುಬರುವುದರಿಂದ ಇದನ್ನು 'ಸಂಕೀರ್ಣ'ದ ಭಾಗದಲ್ಲಿ ಚರ್ಚಿಸಲಾಗಿದೆ.

********

ಮಂಚದಡಿಯ ಸಾರಾಯಿಯಾಗಿ ಬಾ ಕೊರತಿ
ಅಣ್ಣನ ಮಡದಿಯಾಗಿ ಬಾ ಕೊರತಿ
ಆಡುತ್ತಾ ಹಾಡುತ್ತಾ ಬಾ ಕೊರತಿ)

ಎಂದು ಹಾಡುತ್ತಾ ಕುಣಿಯುತ್ತಾರೆ. ಆಗ ಅಂಗಿ ಚಡ್ಡಿಯನ್ನು ಧರಿಸಿ ಕೈಯಲ್ಲಿ ಗಿಡದ ರೆಂಬೆಯನ್ನು ಹಿಡಿದುಕೊಂಡು ಮೂರು ನಾಲ್ಕು ಜನ ಯುವಕರು ಕೊರತಿ ವೇಷವನ್ನು ಹಾಕಿದವರು ಬಂದು ಒಬ್ಬರಿಗೊಬ್ಬರು ರೆಂಬೆಯಿಂದ ಹೊಡೆಯುತ್ತಾ ಹಾಡುಗಾರರಿಗೆ ಸುತ್ತುಬಂದು ನಿಂತುಕೊಳ್ಳುತ್ತಾರೆ.

ದಕ್ಷಿಣ ಕನ್ನಡದ 'ಕೊರತಿ' ದೈವದ ಪ್ರಭಾವವಾಗಿ ಈ 'ಕೊರತಿ' ವೇಷ ಕೊಡವರ ಕುಣಿತಗಳ ನಡುವೆ ಸೇರಿಕೊಂಡಿರಬಹುದೆಂಬ ಅಭಿಪ್ರಾಯವನ್ನು ಕೆಲವು ವಿದ್ವಾಂಸರು ವ್ಯಕ್ತಪಡಿಸಿದ್ದಾರೆ.

## ೫. ಅಂಗಮರಿಯೊ (ದೇಹ ತಿರುಗಿಸುವುದು):

'ಹುತ್ತರಿ'ಯ ಸಂದರ್ಭದಲ್ಲಿ ಆಚರಣೆಯ ಭಾಗವಾಗಿ ಬರುವ ಕ್ರೀಡೆಯಾಗಿ ಇದನ್ನು ಪರಿಗಣಿಸಬಹುದು. ಗಂಡಸರು ಸಣ್ಣಮಕ್ಕಳನ್ನು ತಮ್ಮ ಹೆಗಲ ಮೇಲೆ ಇರಿಸಿಕೊಂಡು ಹಾಡುತ್ತಾ ಕುಣಿಯುತ್ತಾ ಕೈಯಲ್ಲಿ ಮರದ ರೆಂಬೆಯನ್ನು ಹಿಡಿದುಕೊಂಡು ನೆಲಕ್ಕೆ ಬಡಿಯುತ್ತಾ ಸುತ್ತುತ್ತಾರೆ.

## ೬. ಜೋೞಿಕಳಿ (ಜೋಗಿ ಕುಣಿತ):

ಕೊಡವ ಭಾಷೆಯಲ್ಲಿ 'ಜೋೞಿ' ಅಂದರೆ ಕನ್ನಡದಲ್ಲಿ 'ಜೋಗಿ' ಎಂದರ್ಥ. ಭದ್ರಕಾಳಿ ದೇವರಿಗೆ ಹರಕೆಯ ರೂಪದಲ್ಲಿ ಗಂಡುಮಕ್ಕಳು ಜೋಗಿಯ ವೇಷಹಾಕಿ. ಒಪ್ಪಿಸುವ ಕುಣಿತ. ಆರೇಳು ವರ್ಷದಿಂದ ಹದಿನೈದು ವರ್ಷ ವಯಸ್ಸಿನ ಮಕ್ಕಳಿಗೆ ಕಾಯಿಲೆ, ತೊಂದರೆಗಳು ಬಂದಾಗ ಈ ಹರಕೆಯನ್ನು ಹೊತ್ತುಕೊಳ್ಳುತ್ತಾರೆ. ಉತ್ತರ ಕೊಡಗಿನ ಕಾಲೂರು ಗ್ರಾಮದ ಭದ್ರಕಾಳಿ ದೇವತೆಗೆ ಹುತ್ತರಿಯ ಸಮಯದಲ್ಲಿ ಈ ಹರಕೆಯನ್ನು ಹೊತ್ತುಕೊಳ್ಳುತ್ತಾರೆ. (ಈ ಕುರಿತಹೆಚ್ಚಿನ ವಿವರಗಳಿಗೆ ಗಮನಿಸಿ ಕೊಡಗಿನ ಜನಪದ ಕುಣಿತಗಳ ಸಾಂಸ್ಕೃತಿಕ ಅಧ್ಯಯನ, ಡಾ.ಅಶೋಕ ಆಳ್ವ ೨೦೦೩, ಪು.೪೫, ೫೨)

## ೨. ಕಪ್ಪೆಯಾಟ್ (ಕಪ್ಪೆಕುಣಿತ):

ಹುತ್ತರಿಯ 'ಮಂದ್'ನಲ್ಲಿ ಕೊಡವ ಸಾಂಪ್ರದಾಯಿಕ ಉಡುಪುತೊಟ್ಟ ಯುವಕರು ಕುಕ್ಕರುಗಾಲಲ್ಲಿ ಕುಳಿತು ತಮ್ಮ ಎರಡೂ ಕೈಗಳನ್ನು ಆಯಾ ಕಾಲುಗಳ ಒಳಗಡೆಯಿಂದ ತಂದು ಕಪ್ಪೆಹಾರುವ, ಚಲಿಸುವ ರೀತಿಯಲ್ಲಿ ಕುಪ್ಪಳಿಸುವ ಒಂದು ಕಲೆ.

## ೩. ಪರಿಯ ಕಳಿ (ಗುರಾಣಿ ಕುಣಿತ):

ಕೊಡವರ ಸಮರ ಕಲೆ ಎಂದೇ ಪ್ರಸಿದ್ಧವಾಗಿರುವ ಕುಣಿತವಿದು. ಇದೊಂದು ಅಣಕುಕಾಳಗದಂತಿದೆ. ಈ ಕುಣಿತದ ಹೆಸರೇ ಸೂಚಿಸುವಂತೆ 'ಪರಿಯ' ಎಂದರೆ 'ಗುರಾಣಿ'. ಇದನ್ನು ಬೆತ್ತದಿಂದ ಮಾಡಿರುತ್ತಾರೆ. ಕೊಡವ ಸಾಂಪ್ರದಾಯಕ ಉಡುಗೆ ತೊಟ್ಟ ಇಬ್ಬರು ಯುವಕರು ಒಂದು ಕೈಯಲ್ಲಿ ಗುರಾಣಿ ಮತ್ತೊಂದು ಕೈಯಲ್ಲಿ ಕೋಲು ಹಿಡಿದುಕೊಂಡು ಎದುರು ಬದುರಾಗಿ ನಿಂತು ಮೊಣಕಾಲಿನಿಂದ ಕೆಳಗೆ ಕೋಲಿನಿಂದ ಹೊಡೆಯಬೇಕು. ಆಗ ಮತ್ತೊಬ್ಬ ತನ್ನ ಕಾಲಿಗೆ ಬೀಳುವ ಪೆಟ್ಟನ್ನು ಗುರಾಣಿಯನ್ನು ಅಡ್ಡಇಟ್ಟು ತಪ್ಪಿಸಿಕೊಳ್ಳುತ್ತಾ ಆತನ ಕಾಲಿಗೆ ಹೊಡೆಯಬೇಕು. ಆಟ ಮುಗಿದಾಗ ಇಬ್ಬರೂ ಪರಸ್ಪರ ಆಲಂಗಿಸಿಕೊಂಡು ಪ್ರೀತಿ ತೋರುತ್ತಾರೆ.

## ೪. ಕೊರತಿ ಕಳಿ (ಕೊರತಿ ಕುಣಿತ):

ಇದು ಕೂಡ ಹುತ್ತರಿಹಬ್ಬದ ಸಂದರ್ಭದಲ್ಲಿ ಮಾಡುವ ಕುಣಿತ. 'ಕೊರತಿ' ಎಂಬ ಹೆಣ್ಣುದೇವರನ್ನು ಕುರಿತು ಹಾಡಿ ಹೊಗಳುತ್ತಾ ಸಾಗುವ ಕುಣಿತವಿದು. ದಕ್ಷಿಣ ಕೊಡಗಿನ ಭಾಗದಲ್ಲಿ ಈ ಕುಣಿತ ಕಂಡು ಬರುವುದಿಲ್ಲ. ಉತ್ತರಕೊಡಗಿನಲ್ಲಿ ಕೊರತಿ ಕಳಿಯಲ್ಲದೆ ಕೊರತಿಗುಡಿಗಳನ್ನೂ ಕಾಣಬಹುದಾಗಿದೆ. ಕೊಡವ ಸಾಂಪ್ರದಾಯಿಕ ಉಡುಗೆ ತೊಟ್ಟ ನಾಲ್ಕಾರು ಜನ ಕೊಡವರು ದುಡಿಬಾರಿಸುತ್ತಾ -

"ತೇಂಗೊರತಿ ತೇಂಗೊರತಿ
ಕಟ್ಟಡಿ ಕಳ್ಳಾಯಿ ಬಾಕೊರತಿ,
ಅಣ್ಣಂಡ ಪೊಣ್ಣಾಯಿ ಬಾಕೊರತಿ,
ಆಡಿತ್ ಪಾಡಿತ್ ಬಾ ಕೊರತಿ."
(ಜೇನಿನಂತಹ ಕೊರತಿ ಜೇನಿನಂತಹ ಕೊರತಿ

ಮಂಚದಡಿಯ ಸಾರಾಯಿಯಾಗಿ ಬಾ ಕೊರತಿ
ಅಣ್ಣನ ಮಡದಿಯಾಗಿ ಬಾ ಕೊರತಿ
ಆಡುತ್ತಾ ಹಾಡುತ್ತಾ ಬಾ ಕೊರತಿ)

ಎಂದು ಹಾಡುತ್ತಾ ಕುಣಿಯುತ್ತಾರೆ. ಆಗ ಅಂಗಿ ಚಡ್ಡಿಯನ್ನು ಧರಿಸಿ ಕೈಯಲ್ಲಿ ಗಿಡದ ರೆಂಬೆಯನ್ನು ಹಿಡಿದುಕೊಂಡು ಮೂರು ನಾಲ್ಕು ಜನ ಯುವಕರು ಕೊರತಿ ವೇಷವನ್ನು ಹಾಕಿದವರು ಬಂದು ಒಬ್ಬರಿಗೊಬ್ಬರು ರೆಂಬೆಯಿಂದ ಹೊಡೆಯುತ್ತಾ ಹಾಡುಗಾರರಿಗೆ ಸುತ್ತುಬಂದು ನಿಂತುಕೊಳ್ಳುತ್ತಾರೆ.

ದಕ್ಷಿಣ ಕನ್ನಡದ 'ಕೊರತಿ' ದೈವದ ಪ್ರಭಾವವಾಗಿ ಈ 'ಕೊರತಿ' ವೇಷ ಕೊಡವರ ಕುಣಿತಗಳ ನಡುವೆ ಸೇರಿಕೊಂಡಿರಬಹುದೆಂಬ ಅಭಿಪ್ರಾಯವನ್ನು ಕೆಲವು ವಿದ್ವಾಂಸರು ವ್ಯಕ್ತಪಡಿಸಿದ್ದಾರೆ.

## ೫. ಅಂಗಮರಿಯೊ (ದೇಹ ತಿರುಗಿಸುವುದು):

'ಹುತ್ತರಿ'ಯ ಸಂದರ್ಭದಲ್ಲಿ ಆಚರಣೆಯ ಭಾಗವಾಗಿ ಬರುವ ಕ್ರೀಡೆಯಾಗಿ ಇದನ್ನು ಪರಿಗಣಿಸಬಹುದು. ಗಂಡಸರು ಸಣ್ಣಮಕ್ಕಳನ್ನು ತಮ್ಮ ಹೆಗಲ ಮೇಲೆ ಇರಿಸಿಕೊಂಡು ಹಾಡುತ್ತಾ ಕುಣಿಯುತ್ತಾ ಕೈಯಲ್ಲಿ ಮರದ ರೆಂಬೆಯನ್ನು ಹಿಡಿದುಕೊಂಡು ನೆಲಕ್ಕೆ ಬಡಿಯುತ್ತಾ ಸುತ್ತುತ್ತಾರೆ.

## ೬. ಜೋಯಿಕಳಿ (ಜೋಗಿ ಕುಣಿತ):

ಕೊಡವ ಭಾಷೆಯಲ್ಲಿ 'ಜೋಯಿ' ಅಂದರೆ ಕನ್ನಡದಲ್ಲಿ 'ಜೋಗಿ' ಎಂದರ್ಥ. ಭದ್ರಕಾಳಿ ದೇವರಿಗೆ ಹರಕೆಯ ರೂಪದಲ್ಲಿ ಗಂಡುಮಕ್ಕಳು ಜೋಗಿಯ ವೇಷಹಾಕಿ. ಒಪ್ಪಿಸುವ ಕುಣಿತ. ಆರೇಳು ವರ್ಷದಿಂದ ಹದಿನೈದು ವರ್ಷ ವಯಸ್ಸಿನ ಮಕ್ಕಳಿಗೆ ಕಾಯಿಲೆ, ತೊಂದರೆಗಳು ಬಂದಾಗ ಈ ಹರಕೆಯನ್ನು ಹೊತ್ತುಕೊಳ್ಳುತ್ತಾರೆ. ಉತ್ತರ ಕೊಡಗಿನ ಕಾಲೂರು ಗ್ರಾಮದ ಭದ್ರಕಾಳಿ ದೇವತೆಗೆ ಹುತ್ತರಿಯ ಸಮಯದಲ್ಲಿ ಈ ಹರಕೆಯನ್ನು ಹೊತ್ತುಕೊಳ್ಳುತ್ತಾರೆ. (ಈ ಕುರಿತಹೆಚ್ಚಿನ ವಿವರಗಳಿಗೆ ಗಮನಿಸಿ ಕೊಡಗಿನ ಜನಪದ ಕುಣಿತಗಳ ಸಾಂಸ್ಕೃತಿಕ ಅಧ್ಯಯನ, ಡಾ.ಅಶೋಕ ಆಳ್ವ ೨೦೦೩, ಪು.೪೫, ೫೨)

## ೯. ಪೀಲಿಯಾಟ್ (ನವಿಲುಗರಿ ಆಟ):

ಇದೂ ಕೂಡ ಧಾರ್ಮಿಕ ಆಚರಣೆಯ ಅಂಗವಾಗಿ ಬರುವ ಕುಣಿತ. ಕೊಡವ ಭಾಷೆಯಲ್ಲಿ 'ಪೀಲಿ' ಎಂದರೆ 'ನವಿಲುಗರಿ'. ಇದು ಕೊಂಬಾಟ್ ಕುಣಿತ ಶೈಲಿಯಲ್ಲೇ ಕುಣಿಯುವ ನೃತ್ಯ. ಆದರೆ ಕುಣಿಯುವವರು ಕೈಯಲ್ಲಿ ನವಿಲುಗರಿಗಳನ್ನು ಹಿಡಿದುಕೊಂಡು ಕುಣಿಯುತ್ತಾರೆ. ಅದಕ್ಕಾಗಿ ಈ ಹೆಸರು ಬಂದಿದೆ. ಇದು ಹಬ್ಬದ ಸಂದರ್ಭದಲ್ಲಿ ಮಾತ್ರ ಮಾಡುವ ನೃತ್ಯ. (ಹೆಚ್ಚಿನ ವಿವರಗಳಿಗೆ ನೋಡಿ ಕನ್ನಡ ವಿಷಯ ವಿಶ್ವಕೋಶ, ಜಾನಪದ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಪ್ರ.ಸಂ. ಡಾ.ಅರವಿಂದ ಮಾಲಗತ್ತಿ. ೨೦೦೬, ಪು. ೮೩೨.ರಲ್ಲಿರುವ ಎಂ.ಪಿ.ರೇಖಾರ ಲೇಖನ)

## ೧೦. ಉಮ್ಮತ್ತಾಟ್ (ಉಮ್ಮತ್ತಾಟ):

ಕೊಡವ ಮಹಿಳೆಯರು ಆಚರಣೆಯ ಅಂಗವಾಗಿ ನಡೆಸುವ ನೃತ್ಯ ಪ್ರಕಾರ. ಇಂದು ಇದು ಕೊಡವರ ಪ್ರಮುಖ ಮಹಿಳಾ ಪ್ರದರ್ಶನ ಕಲೆಯಾಗಿಯೂ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಕೊಡವತಿಯರು ಕೊಡವ ಸಾಂಪ್ರದಾಯಿಕ ರೀತಿಯ ಸೀರೆಯನ್ನುಟ್ಟು ಕೈಯಲ್ಲಿ ಕಂಚಿನ ತಾಳಗಳನ್ನು ಹಿಡಿದು ವೃತ್ತಾಕಾರವಾಗಿ ನಡುವಿನಲ್ಲಿ 'ಕುತ್ತ್‌ಂಬೊಳ್‌ಚ' (ದೀಪಾಲೆ ಕಂಬ) ವನ್ನಿಟ್ಟು ಸುತ್ತುತ್ತಾ ಪ್ರತೀ ಹಾಡಿಗೆ ಭಂಗಿ ಬದಲಾಯಿಸುತ್ತಾ ಮಾಡುವ ನೃತ್ಯ. ಇಂದು ಇದು ತನ್ನ ಮೂಲಸ್ವರೂಪದಿಂದ ಬಹಳಷ್ಟು ಬದಲಾವಣೆಗೊಂಡು ಆಧುನೀಕರಣಗೊಂಡಿದೆ.

## ೧೧. ನಾಡೆಕಾಕುವೊ ('ನಾಡೆ' ಕರೆಯುವುದು):

ಇದು ಹುತ್ತರಿಯ ಆಚರಣೆಯ ಭಾಗವಾಗಿ 'ಮಂದ್' ನಲ್ಲಿ ಮುದುಕರು ಮಾಡುವ ಆಚರಣಾವಿಧಿ. ಇದು ಪ್ರಹಸನದ ರೀತಿಯಲ್ಲಿರುತ್ತದೆ. ಮಂದ್‌ನಲ್ಲಿ ವೃತ್ತಾಕಾರವಾಗಿ ಕುಳಿತುಕೊಂಡವರಲ್ಲಿ ಇಬ್ಬರು ಮುದುಕರು ಸಂಭಾಷಣಾ ರೀತಿಯಲ್ಲಿ ಪ್ರಶ್ನೆ-ಉತ್ತರ ಹೇಳುತ್ತಾ ಹೋಗುತ್ತಾರೆ. ಉಳಿದವರು ಸ್ವರಕೊಟ್ಟು ದನಿ ಸೇರಿಸುತ್ತಾರೆ. ('ಕೂಹ' ಎಂಬ ಪದವನ್ನು ಒಕ್ಕೊರಲಿನಿಂದ ಉಚ್ಚರಿಸುವುದರ ಮೂಲಕ). ಇಲ್ಲಿನ ಸಂಭಾಷಣಾ ಭಾಗ ಬಹಳ ಅಶ್ಲೀಲ ಪದಗಳಿಂದ ತುಂಬಿರುತ್ತದೆ. (ಹೆಚ್ಚಿನ ಮಾಹಿತಿಗೆ ಗಮನಿಸಿ ಪಟ್ಟೋಲೆ ಪಳಮೆ, ಸಂ. ನಡಿಕೇರಿಯಂಡ ಚಿಣ್ಣಪ್ಪ, ೨೦೦೬ ಪು. ೨೧೨).

ಇವೆಲ್ಲವೂ ಆಚರಣೆ, ಆರಾಧನೆಗಳ ಭಾಗಗಳಾಗಿ ಬರುವ ಧಾರ್ಮಿಕ ಭಾವಪ್ರಧಾನವಾದ ಕುಣಿತಗಳಾಗಿರುವುದರಿಂದ ಇವುಗಳ ಕುರಿತ ಪೂರ್ಣ ಮಾಹಿತಿಯನ್ನು ನೀಡಲಾಗಿಲ್ಲ.

## ಕೊಡವ ಜನಪದ ಆಟಗಳನ್ನು ಅವಲೋಕಿಸಿದಾಗ ಕಂಡುಬರುವ ಅತಿಮುಖ್ಯ ಅಂಶಗಳೆಂದರೆ –

ಕೊಡವ ಸಂಸ್ಕೃತಿಯ ಅನನ್ಯ ಗುಣಗಳೆಂದು ಗುರುತಿಸಬಹುದಾದ ಗಂಡು-ಹೆಣ್ಣಿನ ಸಮಾನತೆಯ ಅಂಶ, ಹೆಣ್ಣುಮಕ್ಕಳಿಗೂ ಗಂಡು ಮಕ್ಕಳಷ್ಟೇ ಬದುಕಿನ ಪ್ರತಿಯೊಂದು ರಂಗದಲ್ಲೂ ನೀಡುತ್ತಾ ಬಂದಿರುವ ಸಮಪಾಲಿನ ಬದುಕು. ಆಟಗಳು ಜೀವನದ ತಳಹದಿಗಳೆಂದು ಭಾವಿಸಿದರೆ - ಸಂಪೂರ್ಣ ಬದುಕಿಗೆ ಬೇಕಾಗುವ ತಾಳ್ಮೆಯ, ಜಾಣ್ಮೆಯ, ಹೊಂದಾಣಿಕೆಯ, ಕ್ರಿಯಾಶೀಲತೆಯ ಗುಣಗಳನ್ನು ಈ ಆಟಗಳು ಬಾಲ್ಯದಲ್ಲೇ ಕಲಿಸುತ್ತವೆ. ಬಾಲ್ಯದಲ್ಲಿ ಕಲಿತದ್ದು ವೃದ್ಧಾಪ್ಯದವರೆಗೆ ಎಂಬಂತೆ. ಈ ನೆಲೆಯಲ್ಲಿ ಗಮನಿಸಿದಾಗ ಕೊಡವರಲ್ಲಿ ಗಂಡುಮಕ್ಕಳು, ಹೆಣ್ಣುಮಕ್ಕಳು ಪ್ರತ್ಯೇಕವಾಗಿ ಆಡುವಂತಹ ಆಟಗಳು ಕ್ರಮವಾಗಿ ೫ ಮತ್ತು ೬ ಆದರೆ ಇವರೆಲ್ಲರೂ ಸೇರಿ ಗುಂಪಿನಲ್ಲಿ ಆಡುವ ಆಟಗಳು ಸುಮಾರು ೪೪ರಷ್ಟಿವೆ. ಕರ್ನಾಟಕದ ಇತರೆ ಕಡೆಗಳಲ್ಲಿ ಗಂಡುಮಕ್ಕಳು ಮಾತ್ರ ಆಡುವ ಚಿಣ್ಣಿದಾಂಡು, ಕಬಡ್ಡಿ, ಬಸ್‌ಆಟ, ಉಗಿಬಂಡಿಯಾಟಗಳನ್ನು ಕೊಡವರಲ್ಲಿ ಹೆಣ್ಣುಮಕ್ಕಳೂ ಆಡುತ್ತಾರೆ. ಕೊಡವ ಸಂಸ್ಕೃತಿಯಲ್ಲಿ ಹಾಗೆ ನೋಡಿದರೆ ಮಹಿಳೆಯರು ಪ್ರತ್ಯೇಕವಾಗಿ ನಡೆಸುವ ಆಚರಣೆಗಳಾಗಲಿ, ಆಚರಿಸುವ ಹಬ್ಬಗಳಾಲಿ ಇಲ್ಲ. ಜನಪದ ಆಟಗಳೂ ಈ ದೆಸೆಯಲ್ಲೇ ರೂಢಿಯಲ್ಲಿರುವುದು ಕಂಡುಬರುತ್ತವೆ. ಜೊತೆಗೆ ಕೊಡಗಿನ ಪ್ರಾಕೃತಿಕ ಸನ್ನಿವೇಶದ ಪ್ರಭಾವವೂ ಸಮೂಹದಾಟಗಳಿಗೇ ಹೆಚ್ಚು ಒತ್ತು ನೀಡುವಂತಿರುವುದನ್ನು ಕಾಣಬಹುದಾಗಿದೆ.

ಕೊಡಗು ಬೆಟ್ಟ-ಗುಡ್ಡಗಳ ಪ್ರದೇಶವಾಗಿದ್ದು ಇಲ್ಲಿ ಮನೆಗಳೆಲ್ಲವೂ ದೂರದೂರದಲ್ಲಿದ್ದು ಬಹುಪಾಲು ಒಂಟಿಮನೆಗಳೇ ಆಗಿವೆ. ಪೂರ್ವಕಾಲದಲ್ಲಿ ಕೊಡವರು ತಮ್ಮ ತಮ್ಮ ಕುಟುಂಬಗಳಿಗೆ/ವಂಶಗಳಿಗೆ ಸೇರಿದ 'ಐನ್‌ಮನೆ' (ಮೂಲಮನೆ)ಗಳಲ್ಲಿ ವಾಸಿಸುತ್ತಿದ್ದರು. ಇಂತಹ ಮನೆಗಳು ಹೆಚ್ಚಿನ ಅಂತರದಲ್ಲಿ ಇರುತ್ತಿದ್ದವು. ಒಂದು 'ಐನ್‌ಮನೆ'ಯೊಳಗೆ ಎಂಟು, ಹತ್ತು ಕುಟುಂಬಗಳು

ವಾಸಿಸುತ್ತಿದ್ದವು. ಈ ಕುಟುಂಬಗಳ ಮಕ್ಕಳೆಲ್ಲಾ ಅನಿವಾರ್ಯವಾಗಿ ಒಂದೇ ಕಡೆ ಆಟವಾಡಬೇಕಾಗಿತ್ತು. ಹೀಗಾಗಿ ಸಮೂಹದಾಟಗಳೇ ಪ್ರತ್ಯೇಕ ಆಟಗಳಿಗಿಂತ ಹೆಚ್ಚಾಗಿರಬಹುದು ಎಂದೂ ಊಹಿಸಲು ಸಾಧ್ಯವಿದೆ.

ಮೂಲತಃ ಗುಡ್ಡಗಾಡು ಪ್ರದೇಶವಾದ ಕೊಡಗಿನಲ್ಲಿ ಪ್ರಾಕೃತಿಕವಾಗಿ ಹೆಚ್ಚು ಮಳೆ-ಗಾಳಿ-ಚಳಿಯನ್ನು ಎದುರಿಸಬೇಕಾಗಿರುವಂತೆ ಸಾಮಾಜಿಕವಾಗಿಯೂ ಕೂಡ ಬದುಕು ಸಾಗಿಸಲು ಕಾಡುಪ್ರಾಣಿಗಳ ನಡುವೆ ಹೋರಾಟಮಾಡುತ್ತಾ ಧೈರ್ಯದಿಂದಲೇ ಇರಬೇಕಾಗಿದೆ. ಇಂತಹ ಅನಿವಾರ್ಯತೆಗಳು ದೈಹಿಕ, ಮಾನಸಿಕ ಸದೃಢತೆಯನ್ನು ಈ ಸಮುದಾಯಗಳಲ್ಲಿ ಹುಟ್ಟು ಹಾಕಿವೆ. ಈ ಕಾರಣದಿಂದಲೇ ಶೌರ್ಯ, ಪರಾಕ್ರಮಕ್ಕೆ ಹೆಸರಾಗಿರುವ ನಾಡಾಗಿರುವ ಕೊಡಗು ದೇಶಕ್ಕೆ ಹೆಚ್ಚಿನ ಸಂಖ್ಯೆಯ ಸೈನಿಕರನ್ನು, ಕ್ರೀಡಾಪಟುಗಳನ್ನು ಕೊಟ್ಟಿದೆ. ಈ ಹಿನ್ನೆಲೆಯಿಂದ ಗಮನಿಸಿದಾಗ ಕೊಡವ ಸಮುದಾಯಗಳ ಬಹುಪಾಲು ಆಟಗಳು ಶೌರ್ಯ ಪ್ರಧಾನವಾದ, ಸಾಹಸಪ್ರಧಾನವಾದಗಳ ಆಟಗಳಾಗಿ ಕಂಡುಬರುತ್ತವೆ. 'ತೆಂಗೆಬೊಡಿ' (ತೆಂಗಿನಕಾಯಿಗೆ ಗುರಿಯಿಟ್ಟು ಗುಂಡು ಹೊಡೆಯುವುದು) ಪರೆಯಕಳಿ, ಮುಂತಾದವು 'ಸಮರ ಕಲೆ ಆಟಗಳೆಂದೇ ಪ್ರಸಿದ್ಧವಾಗಿವೆ.

ಮಹಿಳೆಯರು, ಪುರುಷರು ಗುಂಪಿನಲ್ಲಿ ಆಡುವ ಯಾವುದೇ ಆಟಗಳೂ ಕಂಡು ಬರುವುದಿಲ್ಲ. ಹಾಗೆಯೇ ಇವರು ಪ್ರತ್ಯೇಕವಾಗಿ ಆಡುವ ಆಟಗಳೂ ಹೆಚ್ಚಾಗಿ ಕಂಡುಬರುವುದಿಲ್ಲ. ಇವರಲ್ಲಿ ಕಾಣುವ ಬಹುಪಾಲು ಆಟಗಳು ವ್ಯವಸಾಯ ಸಂಬಂಧೀ ಆಟಗಳೇ ಆಗಿವೆ. ಕೃಷಿಕ ಸಮುದಾಯವಾದ ಕೊಡವರಲ್ಲಿ ನಡುವಯಸ್ಸಿನ ಪುರುಷರು, ಮಹಿಳೆಯರು ಬಹುಪಾಲು ಸಮಯವನ್ನು ಸಾಂಸಾರಿಕ ಜವಾಬ್ದಾರಿಗಳು, ಮನೆ, ಗದ್ದೆ, ತೋಟಗಳ ಜವಾಬ್ದಾರಿಯಲ್ಲೇ ಕಳೆಯಬೇಕಾಗಿರುವುದು ಅನಿವಾರ್ಯ. ಹೀಗಾಗಿ ಕೃಷಿಯ ನಡುವೆಯೇ ಸಂತೋಷವನ್ನು ನೀಡಬಲ್ಲಂತಹ ಕೆಸರುಗದ್ದೆ ಓಟ, ನಾಟಿಓಟ, ಹಗ್ಗಜಗ್ಗಾಟದಂತಹ ಆಟಗಳು ಪ್ರಮುಖ ಸ್ಥಾನವನ್ನು ಪಡೆದುಕೊಂಡಿವೆ.

ವೃದ್ಧರಿಗೆ ಸಂಬಂಧಿಸಿದ ಆಟಗಳನ್ನು ಗಮನಿಸಿದಾಗಲೂ ಅತೀ ಹೆಚ್ಚಿನ ಸಂಖ್ಯೆಯ ಆಟಗಳು ಸಿಗದಿದ್ದರೂ ಮುದುಕರು, ಮುದುಕಿಯರು ಪ್ರತ್ಯೇಕವಾಗಿ ಆಡುವ ಆಟಗಳೇ ಇಲ್ಲ. ಮಕ್ಕಳ ಸಮೂಹದಾಟಗಳಿಗಿರುವ ಕಾರಣಗಳೇ ಇಲ್ಲೂ ಇದ್ದರೂ ವೃದ್ಧಾಪ್ಯದಲ್ಲೂ ಇರಬೇಕಾದ ಸಾಮರಸ್ಯದ ಬದುಕಿಗೆ ಈ ಆಟಗಳು ಸಹಕಾರಿಯಾಗಿವೆ

ದಕ್ಷಿಣ ಕೊಡಗಿನಲ್ಲಿ ಜೋಯಿಕಳಿಯನ್ನು 'ಬೋಡ್‌ನಮ್ಮೆ' (ಬೇಡು ಹಬ್ಬ) ದಲ್ಲಿ ಹಾಕುವ ಹಲವು ವೇಷಗಳ ನಡುವೆ ಒಂದು ವೇಷವಾಗಿ ಹಾಕುತ್ತಾರೆ. ಇಲ್ಲೂ ಇದು ಹರಕೆಯ ಭಾಗವಾಗಿಯೇ ಬರುತ್ತದೆ.

## ೭. ಬೋಡ್ ಕಳಿ (ಬೇಡು ಕುಣಿತ):

ಧಾರ್ಮಿಕ ಹಿನ್ನೆಲೆಯಲ್ಲಿ ಕುಣಿತವನ್ನು ಪ್ರಧಾನವಾಗಿರಿಸಿಕೊಂಡು ಭಗವತಿ, ಚಾಮುಂಡಿ, ಅಯ್ಯಪ್ಪ, ದೇವರುಗಳ ಪ್ರೀತ್ಯರ್ಥವಾಗಿ ಹರಕೆಯ ರೂಪದಲ್ಲಿ ಈ ಕುಣಿತವನ್ನು 'ಬೇಡುಹಬ್ಬದ' ಭಾಗವಾಗಿ ಮಾಡಲಾಗುತ್ತದೆ. ಬೋಡ್‌ಕಳಿ-ಬೊಗ್‌ಡ್ ಕಳಿ ಎಂಬ ಪದದಿಂದ ಬಂದಿರಬಹುದು. 'ಬೊಗ್‌ಡ್' ಎಂದರೆ ಕೊಡವ ಭಾಷೆಯಲ್ಲಿ ತುಂಟಾಟ ಎಂದರ್ಥ. ಈ ಕುಣಿತದಲ್ಲಿ ವಿವಿಧ ವೇಷಗಳನ್ನು (ಕೋಡಂಗಿ, ಸೂಳೆ, ಒಡ್ಡ, ಜೋಗಿ, ಮುಂತಾದವು). ಹಾಕಿದ ಯುವಕರು ಹಗಲು ರಾತ್ರಿ ವೇಷಹಾಕಿ ಊರಿನ ಎಲ್ಲಾಮನೆಗಳಿಗೆ ತೆರಳಿ ಅಶ್ಲೀಲ ಹಾಡುಗಳನ್ನು ಹಾಡುತ್ತಾರೆ. ಕೊಡವ ರಂಗಭೂಮಿಯ ಪ್ರಾಗ್ರೂಪವನ್ನು ಈ ಕುಣಿತದ ವಿಧಾನದಲ್ಲಿ ಗಮನಿಸಬಹುದಾಗಿದೆ. (ಈ ಕುರಿತ ಹೆಚ್ಚಿನ ಮಾಹಿತಿಗೆ ಗಮನಿಸಿ: ಕೊಡವ ರಂಗಭೂಮಿ, ತೀತೀರ ರೇಖಾ ವಸಂತ, ೨೦೦೬.)

## ೮. ಕೊಂಬಾಟ್ (ಕೋಡಿನ ಕುಣಿತ):

ಇದು ಕೊಡವರ ಬೇಟೆಯ ಹಿನ್ನೆಲೆಯಲ್ಲಿ ನಡೆಸುವ ಪ್ರಮುಖ ಆರಾಧನಾ ಕುಣಿತವಾಗಿದೆ. ಕೊಡವ ಭಾಷೆಯಲ್ಲಿ 'ಕೊಂಬ್' ಎಂದರೆ 'ಕೋಡು' (ಪ್ರಾಣಿಗಳ ಕೋಡು) ಇದು ಉತ್ತರ ಕೊಡಗಿನಲ್ಲಿ ಹೆಚ್ಚು, ಪ್ರಚಲಿತದಲ್ಲಿರುವ ಕುಣಿತ. ಬೇಟೆಯನ್ನು ತಮ್ಮ ಬದುಕಿನ ಭಾಗವಾಗಿಸಿಕೊಂಡ ಕೊಡವರು ಬೇಟೆಯಾಡಿ ಪ್ರಾಣಿಗಳನ್ನು ಕೊಂದ ಪಾಪದ ಪರಿಹಾರಾರ್ಥವಾಗಿ ಅವುಗಳ ಕೋಡುಗಳನ್ನು ಕೈಯಲ್ಲಿ ಹಿಡಿದುಕೊಂಡು ಊರಿನ ಭದ್ರಕಾಳಿ ದೇವರ ಉತ್ಸವದ ಸಂದರ್ಭದಲ್ಲಿ ದೇವಸ್ಥಾನದ ಎದುರು, ಕೆಲವೊಮ್ಮೆ ಸುತ್ತಲೂ ಕುಣಿದು, ಕೋಡುಗಳನ್ನು ದೇವರಿಗೆ ಅರ್ಪಿಸುವ ಹಬ್ಬ. (ಹೆಚ್ಚಿನ ವಿವರಗಳಿಗೆ ಗಮನಿಸಿ ಕನ್ನಡ ವಿಷಯ ವಿಶ್ವಕೋಶ, ಜಾನಪದ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೨೦೦೬ ಪು.೩೭೧ರಲ್ಲಿರುವ ಎಂ.ಪಿ.ರೇಖಾ ಅವರ ಲೇಖನ)

ವಾಸಿಸುತ್ತಿದ್ದವು. ಈ ಕುಟುಂಬಗಳ ಮಕ್ಕಳೆಲ್ಲಾ ಅನಿವಾರ್ಯವಾಗಿ ಒಂದೇ ಕಡೆ ಆಟವಾಡಬೇಕಾಗಿತ್ತು. ಹೀಗಾಗಿ ಸಮೂಹದಾಟಗಳೇ ಪ್ರತ್ಯೇಕ ಆಟಗಳಿಗಿಂತ ಹೆಚ್ಚಾಗಿರಬಹುದು ಎಂದೂ ಊಹಿಸಲು ಸಾಧ್ಯವಿದೆ.

ಮೂಲತಃ ಗುಡ್ಡಗಾಡು ಪ್ರದೇಶವಾದ ಕೊಡಗಿನಲ್ಲಿ ಪ್ರಾಕೃತಿಕವಾಗಿ ಹೆಚ್ಚು ಮಳೆ-ಗಾಳಿ-ಚಳಿಯನ್ನು ಎದುರಿಸಬೇಕಾಗಿರುವಂತೆ ಸಾಮಾಜಿಕವಾಗಿಯೂ ಕೂಡ ಬದುಕು ಸಾಗಿಸಲು ಕಾಡುಪ್ರಾಣಿಗಳ ನಡುವೆ ಹೋರಾಟಮಾಡುತ್ತಾ ಧೈರ್ಯದಿಂದಲೇ ಇರಬೇಕಾಗಿದೆ. ಇಂತಹ ಅನಿವಾರ್ಯತೆಗಳು ದೈಹಿಕ, ಮಾನಸಿಕ ಸದೃಢತೆಯನ್ನು ಈ ಸಮುದಾಯಗಳಲ್ಲಿ ಹುಟ್ಟು ಹಾಕಿವೆ. ಈ ಕಾರಣದಿಂದಲೇ ಶೌರ್ಯ, ಪರಾಕ್ರಮಕ್ಕೆ ಹೆಸರಾಗಿರುವ ನಾಡಾಗಿರುವ ಕೊಡಗು ದೇಶಕ್ಕೆ ಹೆಚ್ಚಿನ ಸಂಖ್ಯೆಯ ಸೈನಿಕರನ್ನು, ಕ್ರೀಡಾಪಟುಗಳನ್ನು ಕೊಟ್ಟಿದೆ. ಈ ಹಿನ್ನೆಲೆಯಿಂದ ಗಮನಿಸಿದಾಗ ಕೊಡವ ಸಮುದಾಯಗಳ ಬಹುಪಾಲು ಆಟಗಳು ಶೌರ್ಯ ಪ್ರಧಾನವಾದ, ಸಾಹಸಪ್ರಧಾನವಾದಗಳ ಆಟಗಳಾಗಿ ಕಂಡುಬರುತ್ತವೆ. 'ತೆಂಗೆಬೊಡಿ' (ತೆಂಗಿನಕಾಯಿಗೆ ಗುರಿಯಿಟ್ಟು ಗುಂಡು ಹೊಡೆಯುವುದು) ಪರೆಯಕಳಿ, ಮುಂತಾದವು 'ಸಮರ ಕಲೆ ಆಟಗಳೆಂದೇ ಪ್ರಸಿದ್ಧವಾಗಿವೆ.

ಮಹಿಳೆಯರು, ಪುರುಷರು ಗುಂಪಿನಲ್ಲಿ ಆಡುವ ಯಾವುದೇ ಆಟಗಳೂ ಕಂಡು ಬರುವುದಿಲ್ಲ. ಹಾಗೆಯೇ ಇವರು ಪ್ರತ್ಯೇಕವಾಗಿ ಆಡುವ ಆಟಗಳೂ ಹೆಚ್ಚಾಗಿ ಕಂಡುಬರುವುದಿಲ್ಲ. ಇವರಲ್ಲಿ ಕಾಣುವ ಬಹುಪಾಲು ಆಟಗಳು ವ್ಯವಸಾಯ ಸಂಬಂಧೀ ಆಟಗಳೇ ಆಗಿವೆ. ಕೃಷಿಕ ಸಮುದಾಯವಾದ ಕೊಡವರಲ್ಲಿ ನಡುವಯಸ್ಸಿನ ಪುರುಷರು, ಮಹಿಳೆಯರು ಬಹುಪಾಲು ಸಮಯವನ್ನು ಸಾಂಸಾರಿಕ ಜವಾಬ್ದಾರಿಗಳು, ಮನೆ, ಗದ್ದೆ, ತೋಟಗಳ ಜವಾಬ್ದಾರಿಯಲ್ಲೇ ಕಳೆಯಬೇಕಾಗಿರುವುದು ಅನಿವಾರ್ಯ. ಹೀಗಾಗಿ ಕೃಷಿಯ ನಡುವೆಯೇ ಸಂತೋಷವನ್ನು ನೀಡಬಲ್ಲಂತಹ ಕೆಸರುಗದ್ದೆ ಓಟ, ನಾಟಿಓಟ, ಹಗ್ಗಜಗ್ಗಾಟದಂತಹ ಆಟಗಳು ಪ್ರಮುಖ ಸ್ಥಾನವನ್ನು ಪಡೆದುಕೊಂಡಿವೆ.

ವೃದ್ಧರಿಗೆ ಸಂಬಂಧಿಸಿದ ಆಟಗಳನ್ನು ಗಮನಿಸಿದಾಗಲೂ ಅತೀ ಹೆಚ್ಚಿನ ಸಂಖ್ಯೆಯ ಆಟಗಳು ಸಿಗದಿದ್ದರೂ ಮುದುಕರು, ಮುದುಕಿಯರು ಪ್ರತ್ಯೇಕವಾಗಿ ಆಡುವ ಆಟಗಳೇ ಇಲ್ಲ. ಮಕ್ಕಳ ಸಮೂಹದಾಟಗಳಿಗಿರುವ ಕಾರಣಗಳೇ ಇಲ್ಲೂ ಇದ್ದರೂ ವೃದ್ಧಾಪ್ಯದಲ್ಲೂ ಇರಬೇಕಾದ ಸಾಮರಸ್ಯದ ಬದುಕಿಗೆ ಈ ಆಟಗಳು ಸಹಕಾರಿಯಾಗಿವೆ



ಬಹುಪಾಲು ಉದ್ಯೋಗಗಳಲ್ಲಿ ತೊಡಗಿಸಿಕೊಂಡಿರುವುದರಿಂದ ಇವರ ಬಿಡುವಿನ ವೇಳೆ ತುಂಬಾ ಕಡಿಮೆಯಾಗಿದೆ. ವೃತ್ತಿನಿರತ ಜನ ಸಮೂಹಗಳು ಇಂತಹ ಆಟಗಳಿಂದ ಇಂದು ಬಹುದೂರ ಸರಿದಿರುವುದು ಅನಿವಾರ್ಯವಾಗಿದೆ.

ಹೀಗೆ ಮಕ್ಕಳು, ವಯಸ್ಕರು, ವೃದ್ಧರು ಎಲ್ಲರೂ ಆಧುನಿಕ ದಿನಮಾನಗಳಲ್ಲಿ ತಮ್ಮದೇ ಆದ ಕೋಟೆಯೊಳಗೆ ಕಳೆದುಹೋಗುತ್ತಿರುವುದರ ಮೂಲಕ ಜನಪದ ಆಟಗಳೂ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ.

ಇನ್ನು ಆಚರಣೆಗಳ, ಆರಾಧನೆಗಳ ವಿಚಾರವನ್ನು ಗಮನಿಸಿದಾಗ ಜನರು ಇತರ ಮನರಂಜನಾ ಮಾಧ್ಯಮಗಳನ್ನು ಹುಡುಕಿಕೊಂಡಿರುವುದರಿಂದ ಹಬ್ಬಗಳ ಆಚರಣೆಗಳ ಭಾಗಗಳಾಗಿ ಬರುವ ಕುಣಿತ/ನೃತ್ಯ/ಆಟಗಳು ಹೆಸರಿಗೆ ಮಾತ್ರ ಉಳಿದುಕೊಳ್ಳುವಂತಾಗಿದೆ. ಏಳೆಂಟು ದಿವಸಗಳು ನಡೆಯುತ್ತಿದ್ದ ಹಬ್ಬಗಳು ಇಂದು ಜನರ ಅನುಕೂಲಕ್ಕೆ ತಕ್ಕಂತೆ ಒಂದೆರಡು ದಿವಸಗಳಲ್ಲಿ ಮುಗಿದು ಹೋಗುವುದರಿಂದ ಆಚರಣೆಗಳ ಅವಧಿ ಕಡಿಮೆಯಾಗಿದೆ. ಈ ಕಡಿಮೆಯಾದ ಅವಧಿಯೊಳಗೆ ಪ್ರಾಚೀನ ಕಲೆ, ಆಟಗಳೂ ಕಳೆದುಹೋಗಿವೆ. ಪರಂಪರಾಗತವಾದ ಒಳಾಂಗಣದ ಆಟಗಳು ಸಂಪೂರ್ಣವಾಗಿ ಇಲ್ಲವಾಗುವ ಪರಿಸ್ಥಿತಿ ಉಂಟಾಗಿದ್ದರೆ ಹೊರಾಂಗಣದ ಆಟಗಳಿಗೆ ಆಗೊಮ್ಮೆ ಈಗೊಮ್ಮೆ ಅವಕಾಶಗಳಿವೆ.

ಇಂದು ತಮ್ಮ ಹುಟ್ಟೂರುಗಳಲ್ಲಿ ನೆಲೆಸಿರುವುದಕ್ಕಿಂತ ಹೆಚ್ಚು ಜನ ಕೊಡವರು ನಗರ, ಪಟ್ಟಣಗಳಲ್ಲಿ ಬಂದು ನೆಲೆ ನಿಂತಿದ್ದಾರೆ. ಈ ಸಂದರ್ಭದಲ್ಲಿ ಒಂದೊಂದು ಊರಿನ ಜನ 'ಕೊಡವ ಕೇರಿ'ಗಳನ್ನು, 'ಕೊಡವ ಸಂಘ', ಕೊಡವ ಸಮಾಜಗಳನ್ನು ಕಟ್ಟಿಕೊಂಡು ಅವುಗಳ ಮುಖಾಂತರ ಹಬ್ಬಹರಿದಿನಗಳನ್ನು ಸಾಮೂಹಿಕವಾಗಿ ಆಚರಿಸಿ ಸಂಭ್ರಮಿಸುತ್ತಾರೆ. ಇಂತಹ ಸಂದರ್ಭದಲ್ಲಿ ಹಲವಾರು ಆಧುನಿಕ ಆಟಗಳೊಂದಿಗೆ ಕೆಲವು ಗ್ರಾಮೀಣ ಆಟಗಳೂ ಸೇರಿಕೊಳ್ಳುತ್ತವೆ. ಮೊಬೈಲ್‌ನ ಒಳಗೂ ಸಿಗುವ ಹಲವು ವೈಜ್ಞಾನಿಕ ಆಟಗಳೊಳಗೆ ಮುಳುಗಿ ಹೋಗುತ್ತಿರುವ ಯುವಜನಾಂಗ ತನ್ನ ಪರಂಪರಾಗತ ಆಟಗಳ ಕುರಿತು ಆಸಕ್ತಿಯನ್ನು ಉಳಿಸಿಕೊಂಡಿಲ್ಲ.

ಈ ಎಲ್ಲಾ ಅಂಶಗಳನ್ನು ಗಮನಿಸಿ ಕೊಡವರ ಪರಂಪರಾಗತ ಮೌಲ್ಯಗಳನ್ನು, ಸಂಸ್ಕೃತಿಯ ಬೇರುಗಳನ್ನು ಪರಿಚಯಿಸುವ, ದೈಹಿಕ, ಮಾನಸಿಕ, ಸಧೃಢತೆಯನ್ನು ತುಂಬುವ ಕೊಡವ ಜನಪದ ಆಟಗಳನ್ನು ಕೊಡವ ಸಮುದಾಯದೊಳಗೆ ಪೂರ್ಣವಾಗಿ ಪರಿಚಯಿಸಿ ಅವರಿಗೆ ಆಟಗಳ ಮಹತ್ವವನ್ನು ತಿಳಿಸಬೇಕಿದೆ. ಈ ಮೂಲಕ ಸಮುದಾಯಗಳ ಸಾಮೂಹಿಕ ಸಮಾರಂಭಗಳಲ್ಲಿ ಜನಪದ ಆಟಗಳ ಸ್ಪರ್ಧೆ, ಪರಿಚಯವನ್ನು ಮಕ್ಕಳಿಂದ ಹಿಡಿದು ವೃದ್ಧರವರೆಗೆ ಎಲ್ಲರಿಗೂ ಏರ್ಪಡಿಸುವ

ಜವಾಬ್ದಾರಿಯನ್ನು ಸಂಸ್ಕೃತಿ ಚಿಂತಕರು ಮಾಡಬೇಕಿದೆ. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯಂತಹ ಸಂಸ್ಥೆ ಈ ನಿಟ್ಟಿನಲ್ಲಿ ಹೆಚ್ಚು ಕಾರ್ಯಪ್ರವೃತ್ತವಾಗಬೇಕಾಗಿದೆ. ಈ ಎಲ್ಲಾ ಆಟಗಳ ದಾಖಲೀಕರಣವನ್ನು ಬಹುಮಾಧ್ಯಮದಲ್ಲಿ ಮಾಡುವುದರ ಮೂಲಕ ಜನಸಾಮಾನ್ಯರ ಬಳಿಗೆ ತಲುಪಿ ಮರೆತುಹೋದ ಪರಂಪರೆಯ ಕೊಂಡಿಗಳನ್ನು ಮರುಸ್ಥಾಪಿಸಬೇಕಾಗಿದೆ. ಜಾನಪದ ಉಳಿವಿಗಾಗಿ ಎಲ್ಲರೂ ಅಗತ್ಯವಾಗಿ ಚಿಂತಿಸಿ, ಮೈಗೂಡಿಸಿಕೊಂಡಾಗ ಪ್ರಾದೇಶಿಕ ಸಂಸ್ಕೃತಿಯನ್ನು ಉಳಿಸುತ್ತಾ ದೇಶೀಯ ಸಂಸ್ಕೃತಿಯ ಬೇರುಗಳನ್ನು ಗಟ್ಟಿಗೊಳಿಸಬಹುದಾಗಿದೆ.

***********

# ಅನುಬಂಧ

**ಅ) ಆಟಗಳ ಪಟ್ಟಿ**

**I. ಮಕ್ಕಳ ಸಮೂಹದಾಟಗಳು:**

೧) ಗೋಲಿಕಳಿ (ಗೋಲಿ ಆಟ)

೨) ಬುಗುರಿಕಳಿ (ಬುಗರಿ ಆಟ)

೩) ಕಬಡ್ಡಿ ಕಳಿ (ಕಬಡ್ಡಿ ಆಟ)

೪) ಕಳ್ಳ-ಪೋಲಿಸ್ ಕಳಿ (ಮರಕೋತಿ ಆಟ)

೫) ಕಣ್ಣಾಮುಚ್ಚಾಲೆ ಕಳಿ (ಕಣ್ಣಾಮುಚ್ಚಾಲೆ ಆಟ)

೬) ಕಣ್ಣ್ ಕಟ್ಟಿಕಳಿ (ಕಣ್ಣುಕಟ್ಟುವ ಆಟ)

೭) ಪುಡಿಪಕಳಿ (ಹಿಡಿಯೋ ಆಟ)

೮) ಕೈಚೌಕ ಕಳಿ (ಕರವಸ್ತ್ರದಾಟ)

೯) ಕೋಟೆ ಕಳಿ (ಕೋಟೆ ಆಟ)

೧೦) ಕುದ್'ರೆಕಳಿ (ಕುದುರೆ ಆಟ)

೧೧) ಕೇರ್ ಬಲಿಪ್ಪೊ (ಹಗ್ಗ ಜಗ್ಗಾಟ)

೧೨) ಕೇರ್ ಪಾರುವೊ (ಹಗ್ಗ ಜಿಗಿತದಾಟ)

೧೩) ಬಸ್ ಕಳಿ (ಬಸ್ ಆಟ)

೧೪) ದೋಣಿ ಕಳಿ (ದೋಣಿ ಆಟ)

೧೫) ಪಾಸ್ ಫೈಲ್ ಕಳಿ (ಪಾಸ್ ಫೈಲ್ ಆಟ)

೧೬) ಆನೆ ಕಳಿ (ಆನೆ ಆಟ)

೧೭) ಯಾಪಾರ ಬೆನ್ನ್ ಕಳಿ(ಉಪ್ಪುಮೂಟೆ ಆಟ)

೧೮) ಕಾಂವ್ ಕಾಂವ್ ಕೊತ್ತಂಜಿ ಕಳಿ (ಕಾಗೆ ಆಟ)

೧೯) ಕಥೆ ಕಥೆ ಕುಂಬಳ ಕಳಿ (ಕಥೆ ಕಥೆ ಕುಂಬಳ ಆಟ)

೨೦) ನೀರ್ ಕನ್‌ಚಿ ಕಳಿ (ನೀರು ಎರಚುವ ಆಟ)

೨೧) ವನ್ನೇರಿ ಟಿವ್ವೇರಿ ಕಳಿ (ವನ್ನೇರಿ ಟಿವ್ವೇರಿ ಆಟ)

೨೨) ಕೊಡಮರಿಯೊ ಕಳಿ (ಲಾಗ ಹೊಡೆಯುವಾಟ)

೨೩) ತಾರ್‌ಕೋಲ್ ಕಳಿ (ಚಿಣ್ಣಿದಾಂಡು ಆಟ)

೨೪) ಲಗ್ಗೆ ಕಳಿ (ಲಗೋರಿ ಆಟ)

೨೫) ತೊಪ್ಪಿಯ ಕಳಿ (ಟೊಪ್ಪಿಯಾಟ)

೨೬) ಕಪ್ಪೆ ಪಾರೊ (ಕಪ್ಪೆ ಹಾರುವುದು)

೨೭) ಕಾಳ್ ಪೊರ್ಕುವ ಕಳಿ (ಕಾಲು ಹೆಕ್ಕುವ ಆಟ)

೨೮) ಕೆರೆದಡ ಕಳಿ (ಕೆರೆದಡ ಆಟ)

೨೯) ಸೂರ್ತಿಕಳಿ/ಚೆಂಡ್ ಕಳಿ (ಚೆಂಡಾಟ)

೩೦) ಮಂಗಲ ಕಳಿ (ಮದುವೆ ಆಟ)

೩೧) ಕೆತ್ತೆಬೇಲ್ ಓಟ್ (ಕೆಸರುಗದ್ದೆ ಓಟ)

೩೨) ಪಲ್ಲಿ ಕಳಿ (ಹಲ್ಲಿ ಆಟ)

೩೩) ಯಾವಕಳಿ/ದ್ಯಾವಕಳಿ (ದೇವರಾಟ)

೩೪) ಒಳಿಪ ಕಳಿ (ಅಡಗುವ ಆಟ)

೩೫) ತೊಟ್ಟ್ ಕುಂಞಿ ಕಳಿ (ತೊಟ್ಟಿಲ ಮಗುವಿನಾಟ)

೩೬) ಅಪ್ಪವ್ವೊ ಕಳಿ (ತಂದೆ ತಾಯಿ ಆಟ)

೩೭) ಅಡಿಗೆ ಕಳಿ (ಅಡುಗೆ ಆಟ)

೩೮) ಡ್ರೈವರ್ ಕಳಿ (ಡ್ರೈವರ್ ಆಟ)

೩೯) ಗಾಡಿ ಕಳಿ (ಗಾಡಿ ಆಟ)

೪೦) ಈಪ ಕಳಿ (ಅಡಿಕೆ ಹಾಪೆ ಆಟ)

೪೧) ಮನೆಕೆಟ್ಟೊ ಕಳಿ (ಮನೆ ಕಟ್ಟೋ ಆಟ)

೪೨) ಪೂಳೆಕುತ್ತಿಪಾರೊ (ಕೂಳೆ ಹಾರುವ ಆಟ)

೪೩) ಕಿರ್‌ಬೆರಕಿನ್ನಾಣಿ ಕಳಿ (ಬೆರಳಿನಾಟ)

೪೪) ಗಾಳಿಪಟ ಕಳಿ (ಗಾಳಿಪಟದಾಟ)

೪೫) ಬಾಣಬುಡುವ ಕಳಿ (ಬಾಣಬಿಡುವ ಆಟ)

೪೬) ಉಯ್ಯಾಲೆ ಕಳಿ (ಉಯ್ಯಾಲೆ ಆಟ)

## II. ಹೆಣ್ಣುಮಕ್ಕಳ ಆಟಗಳು:

೧) ಕಲ್ಲ್ ಪರ ಕಳಿ/ಕೊತ್ತಿಪರ ಕಳಿ (ಕಲ್ಲಾಟ)

೨) ಕುಂಟಿ ಕಳಿ (ಕುಂಟಾಟ)

೩) ಚಿಲ್‌ಕಿ ಕಳಿ(ಕುಂಟೆಬಿಲ್ಲೆ ಆಟ)

೪) ಬಳೆಚೂರ್ ಕಳಿ (ಬಳೆಚೂರಿನಾಟ)

೫) ಕಂಬಕಳಿ (ಕಂಬದಾಟ)

೬) ಕವುಡಿ ಕಳಿ (ಕವುಡಿ ಆಟ)

೭) ಟೀಚರ್ ಕಳಿ (ಟೀಚರ್ ಆಟ)

೮) ತೊಪ್ಪು ಕಳಿ (ಸೊಪ್ಪಿನಾಟ)

೯) ಚಪ್ಪಾಳೆ ತಟ್ಟೊ ಕಳಿ (ಚಪ್ಪಾಳೆ ಆಟ)

## III. ಗಂಡು ಮಕ್ಕಳ ಆಟಗಳು:

೧) ಕೊಡಮರಿಯೊ ಕಳಿ (ಪಲ್ಟಿಹೊಡೆಯುವ ಆಟ)

೨) ಮುಂಜುವ ಕಳಿ (ಮುಳುಗುವ ಆಟ)

೩) ನೀರ್‌ಕನಿಪ ಕಳಿ (ನೀರು ಎರಚಾಟ)

೪) ತೆಂಗೆಬಲ್‌ಚಿ ಕಳಿ (ತೆಂಗಿನಕಾಯಿ ಸೆಳೆ ದಾಟ)

೫) ಕೋಲಾಟ್ (ಕೋಲಾಟ)

೬) ನೀತ ಬಡಿಮೊ (ಈಜಾಟ)

೭) ಚಟ್ಟೆತೋಕ್ ಕಳಿ (ಕೋವಿಆಟ)

## IV. ಮಹಿಳೆಯರ ಆಟಗಳು:

೧) ತೊಪ್ಪು ಕಳಿ (ಸೊಪ್ಪಿನಾಟ)
೨) ಕೇರ್ ಬಲಿಪೊ (ಹಗ್ಗಜಗ್ಗಾಟ)
೩) ಚೆಂಡ್ ಕಳಿ (ಚೆಂಡಾಟ)
೪) ವಿಷಚೆಂಡ್ ಕಳಿ (ಪಾಯಿಸನ್ ಬಾಲ್)
೫) ಬಸ್ ಕಳಿ (ಬಂಡಿ ಆಟ)
೬) ತೆಂಗೆಬೊಡಿಬೆಪ್ಪೊ (ತೆಂಗಿನಕಾಯಿಗೆ ಗುಂಡು ಹೊಡೆಯುವ ಆಟ)

## V. ಪುರುಷರ ಆಟಗಳು:

೧) ಕಬಡ್ಡಿ ಕಳಿ (ಕಬಡ್ಡಿ ಆಟ)
೨) ಕೇರ್ ಬಲಿಪೊ (ಹಗ್ಗಜಗ್ಗಾಟ)
೩) ಕೆತ್ತೆ ಬೇಲ್ ಓಟ (ಕೆಸರುಗದ್ದೆ ಓಟ)
೪) ಚೀಲ ಪಾರುವೊ (ಗೋಣಿಚೀಲದಲ್ಲಿ ಹಾರುವುದು)
೫) ಕುಂದ್ ಕಾಡ್ ಓಟ್ (ಗುಡ್ಡಗಾಡು ಓಟ)

## VI. ವೃದ್ಧರ ಆಟಗಳು:

೧) ಓಟ್ ನಡತೆ (ಓಟದ ನಡಿಗೆ)
೨) ಪೀರಕೆ ಪಡೆ (ಕಾಡುಸೌತೆ ಎಸೆಯುವ ಆಟ)
೩) ಕಟ್ಟೆ ಕಳಿ (ಚೌಕಾಬಾರ)
೪) ಕೊತ್ತಿಪರ ಕಳಿ (ಕಲ್ಲಾಟ)
೫) ಸ್ವರ್ಗಕ್ ಪೋಪ ಕಳಿ (ಸ್ವರ್ಗಾರೋಹಣ)
೬) ಮೇದನೂ – ಮೇದಿಯೂ ಕಳಿ (ಮೇದನೂ ಆತನ ಮಡದಿಯೂ ಆಟ)
೭) ತಾಳವಡ್‌ಪೊಕಳಿ (ತಾಳ ತೆಗೆಯುವಾಟ)

## VII. ಸಂಕೀರ್ಣ:

೧) ಬೊಳಕಾಟ್ (ಬೆಳಕಿನ ಕುಣಿತ)
೨) ಕಪ್ಪೆಯಾಟ್ (ಕಪ್ಪೆ ಕುಣಿತ)
೩) ಪರಿಯಕಳಿ (ಗುರಾಣಿ ಕುಣಿತ)
೪) ಕೊರತಿ ಕಳಿ (ಕೊರತಿ ಆಟ)

೫) ಅಂಗ ಮರಿಯೊ (ದೇಹ ತಿರುಗಿಸುವುದು)
೬) ಜೋಯಿ ಕಳಿ (ಜೋಗಿ ಕುಣಿತ)
೭) ಬೋಡ್ ಕಳಿ (ಬೇಡು ಕುಣಿತ)
೮) ಕೊಂಬಾಟ್ (ಕೋಡಿನ ಕುಣಿತ)
೯) ಪೀಲಿಯಾಟ್ (ನವಿಲುಗರಿ ಆಟ)
೧೦) ಉಮ್ಮತ್ತಾಟ್ (ಉಮ್ಮತ್ತಾಟ)
೧೧) ನಾಡೆಕಾಕುವೊ (ನಾಡೆ ಕರೆಯುವುದು)

**ಆ) ಆಕರಗಳು**

**೧. ಮಾಹಿತಿದಾರರು:**

೧) ಶ್ರೀ. ಬಾಚರಣಿಯಂಡ.ಪಿ. ಅಪ್ಪಣ್ಣ
೨) ಶ್ರೀಮತಿ ಮಾಯಣಮಾಡ ಸುಮತಿ ಪೆಮ್ಮಯ್ಯ
೩) ಶ್ರೀ ಬೊಳ್ಳಚೆಟ್ಟೀರ ಕುಶಾಲಪ್ಪ
೪) ಶ್ರೀ ಪಾಲಂದೀರ ದೇವಯ್ಯ
೫) ಶ್ರೀ. ಚೌರೀರ ತಿಮ್ಮಯ್ಯ
೬) ಶ್ರೀ. ಬೊಳ್ಳಚೆಟ್ಟೀರ ಮುತ್ತಣ್ಣ
೭) ಶ್ರೀ. ಪಾಲಂದೀರ ಮೊಣ್ಣಪ್ಪ
೮) ಶ್ರೀ. ಪೆಬ್ಬಾಟಂಡ ಚಂಗಪ್ಪ
೯) ಶ್ರೀಮತಿ. ಪೇರಿಯಂಡ ಶಾರದಾ
೧೦) ಶ್ರೀಮತಿ. ಬೊಳ್ಳಚೆಟ್ಟೀರ ರತ್ನ ನಂಜಮ್ಮ
೧೧) ಶ್ರೀಮತಿ. ಆಂಗಿರ ಗೋಪಮ್ಮ
೧೨) ಶ್ರೀಮತಿ. ಬೊಳ್ತಂಡ ಚಿತ್ರಾ
೧೩) ಶ್ರೀ. ಐಚೋಡಿಯಂಡ ಜೋಯಪ್ಪ
೧೪) ಶ್ರೀ. ಐಚೋಡಿಯಂಡ ಸುರೇಶ್
೧೫) ಶ್ರೀ. ಕೊಂಗೀರಂಡ ತಮ್ಮಯ್ಯ
೧೬) ಶ್ರೀಮತಿ. ಬೊಳ್ಳಚೆಟ್ಟೀರ ಡಾಟಿ

೧೭) ಶ್ರೀಮತಿ. ಬೊಳ್ಳಚೆಟ್ಟೀರ ಯಮುನ

೧೮) ಶ್ರೀಮತಿ. ಪಾಲಂದೀರ ರೀಟಾ

೧೯) ಶ್ರೀ. ಬೊಳ್ತಂಡ ರಘು ಮೊಣ್ಣಪ್ಪ

೨೦) ಶ್ರೀ. ಬೊಳ್ತಂಡ ಸೋಮಣ್ಣ

೨೧) ಶ್ರೀ. ಪೇರಿಯಂಡ ಸುಬ್ರಮಣಿ

**ವಿಶೇಷ ನೆರವು: ಬಲಮುರಿ ಗಾಮಸ್ಥರು.**

**೨. ಕೃತಿಗಳು:**

೧. **ಪ್ರ.ಸಂ.ಡಾ.ಅರವಿಂದ ಮಾಲಗತ್ತಿ**
ಕನ್ನಡ ವಿಷಯ ವಿಶ್ವಕೋಶ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು – ೨೦೦೬.

೨. **ಡಾ.ಅಶೋಕ ಆಳ್ವ**
ಕೊಡಗಿನ ಜನಪದ ಕುಣಿತಗಳ ಸಾಂಸ್ಕೃತಿಕ ಅಧ್ಯಯನ
ಪ್ರಸಾರಾಂಗ
ಮಂಗಳೂರು ವಿಶ್ವವಿದ್ಯಾನಿಲಯ – ೨೦೦೩

೩. **ಪ್ರ.ಸಂ.ಡಾ.ಕರೀಂಖಾನ್ ಎಸ್.ಕೆ**
ಜನಪದ ಆಟಗಳು
ಕರ್ನಾಟಕದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು – ೧೯೯೦

೪. **ಡಾ.ತೀತೀರ ರೇಖಾ ವಸಂತ್**
ಕೊಡವ ರಂಗಭೂಮಿ
ಪ್ರಸಾರಂಗ, ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳೂರು – ೨೦೦೬

೫. **ಸಂ. ನಡಿಕೇರಿಯಂಡ ಚಿಣ್ಣಪ್ಪ**

ಪಟ್ಟೋಲೆ ಪಳಮೆ
ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ
ಮಡಿಕೇರಿ – ೨೦೦೬


೬. **ಡಾ.ಮಲ್ಲಿಕಾರ್ಜುನ ಸಂ. ಮೇತ್ರಿ**
ಜಾನಪದ ಆಟಗಳು
ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು – ೨೦೦೬

೭. **ಡಾ.ರೇಖಾ ಎಂ.ಪಿ**
ಆಧುನಿಕ ಕೊಡವ ಸಾಹಿತ್ಯ
ಸಿಂಚು ಮಲ್ಟಿಗ್ರಾಫ್ಸ್ ಮೈಸೂರು – ೨೦೧೦

# ಆಟಗಳ ಚಿತ್ರಗಳು





ಪುರುಷರ ಗುಡ್ಡಗಾಡು ಓಟ




ಮಹಿಳೆಯರ ಗುಡ್ಡಗಾಡು ಓಟ



ಯುವಕರ ಬೊಳ್‌ಕಾಟ – ಚೌರಿ ಆಟ




ಮಕ್ಕಳ ಗುಡ್ಡಗಾಡು ಓಟ



ಸಿದ್ಧಿ ಆಟ್



ದುಡಿಕೊಟ್ಟ್ ಪಾಟ್




ಪುರುಷರ ಕೋಲಾಟ



ಪುರುಷರ ಕೋಲಾಟ

ಮಹಿಳೆಯರ ಹಗ್ಗ ಜಗ್ಗಾಟದ ವಿವಿಧ ಭಂಗಿಗಳು



# ಅಕಾಡೆಮಿ ಅಧ್ಯಕ್ಷರು ಮತ್ತು ಸದಸ್ಯರು

| | |
|---|---|
| ಶ್ರೀ ಅಡ್ಡಂಡ ಸಿ. ಕಾರ್ಯಪ್ಪ | ಅಧ್ಯಕ್ಷರು |
| ಪ್ರೊ : ಇಟ್ಟೀರ ಕೆ. ಬಿದ್ದಪ್ಪ | ಸದಸ್ಯರು |
| ಶ್ರೀಮತಿ ಚೇಂದಿರ ನಿರ್ಮಲಾ ಬೋಪಣ್ಣ | ಸದಸ್ಯರು |
| ಶ್ರೀ ಮಾಳೇಟಿರ ಅಭಿಮನ್ಯುಕುಮಾರ್ | ಸದಸ್ಯರು |
| ಶ್ರೀ ಬೊಟ್ಟೋಳಂಡ ಮಿಟ್ಟು ಪೂಣಚ್ಚ | ಸದಸ್ಯರು |
| ಶ್ರೀ ಚರ್ಮಂಡ ಪೂವಯ್ಯ (ಅಪ್ಪುಣು) | ಸದಸ್ಯರು |
| ಶ್ರೀ ಕುಡಿಯರ ತಮ್ಮಯ್ಯ | ಸದಸ್ಯರು |
| ಶ್ರೀಮತಿ ಬಡಕಡಮ್ಮಂಡ ಕಸ್ತೂರಿ ಗೋವಿಂದಮ್ಮಯ್ಯ | ಸದಸ್ಯರು |
| ಶ್ರೀಮತಿ ಚೇಂದಂಡ ಸುಮಿ ಸುಬ್ಬಯ್ಯ | ಸದಸ್ಯರು |
| ಶ್ರೀ ಮೇಲತಂಡ ಎ. ರಮೇಶ್ | ಸದಸ್ಯರು |
| ಶ್ರೀಮತಿ ನೆರೆಯಂಡಮ್ಮಂಡ ಉಮಾ ಪ್ರಭು | ಸದಸ್ಯರು |
| ಶ್ರೀ ನಾಪಂಡ ರವಿ ಕಾಳಪ್ಪ | ಸದಸ್ಯರು |
| ಶ್ರೀ ಮೋಟನಾಳಿರ ಸನ್ನು ಕಾರ್ಯಪ್ಪ | ಸದಸ್ಯರು |
| ಶ್ರೀ ಮಂಡೇಪಂಡ ಬೋಸು ಮೊಣ್ಣಪ್ಪ | ಸದಸ್ಯರು |
| ಶ್ರೀಮತಿ ಎನ್. ಶಾಂತಮ್ಮ | ರಿಜಿಸ್ಟ್ರಾರ್ |
| ಶ್ರೀಮತಿ ಹೆಚ್.ವಿ. ಇಂದ್ರಮ್ಮ | ಅರ್ಥಸದಸ್ಯರು |



## ಡಾ. ಎಂ.ಪಿ. ರೇಖಾ

ಡಾ. ಎಂ.ಪಿ. ರೇಖಾ ಕೊಡವ, ಕನ್ನಡ ಸಾಹಿತ್ಯ ಸಂಶೋಧನಾ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು. ಕೊಡಗಿನ ಗೋಣಿಕೊಪ್ಪ ಕಾವೇರಿ ಪದವಿ ಕಾಲೇಜಿನಲ್ಲಿ ಕನ್ನಡ ಸಹಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕಾವೇರಿ ಕಾಲೇಜಿನಲ್ಲಿ ಬಿ.ಎಸ್ಸಿ ಪದವಿ, ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಸಾಹಿತ್ಯದಲ್ಲಿ ಎಂ.ಎ, ಎಂ.ಫಿಲ್ ಪದವಿ ಹಾಗೂ ಮೈಸೂರು ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ ಗಳಿಸಿದ್ದಾರೆ.

ಘಾತೀರ ರೇಖಾವಸಂತ ಎಂಬ ಹೆಸರಿನಲ್ಲಿ ಬರವಣಿಗೆ ಮಾಡುತ್ತಾರೆ. ಆಧುನಿಕ ಕೊಡವ ಸಾಹಿತ್ಯ (2010), ಅರಿಕಟ್ಟು (2010), ಕೊಡವ ರಂಗಭೂಮಿ (2006), ಕೂತಂಡ ಪಾರ್ವತಿ ಪೂವಯ್ಯ (2012), ಕಾಳಿದಾಸ (2009), ಕೊಡವರ ಕುಲಾಚಾರಾದಿ ತತ್ವೋಜ್ಜೀವಿನಿ (ಅನುವಾದ 2003) ಇವರ ಪ್ರಕಟಿತ ಕೃತಿಗಳು. 'ಆಧುನಿಕ ಕೊಡವ ಸಾಹಿತ್ಯ' ಇವರ ಪಿಎಚ್.ಡಿ. ಸಂಶೋಧನಾ ಮಹಾಪ್ರಬಂಧ. ಸುಮಾರು 25ಕ್ಕೂ ಹೆಚ್ಚು ಸಂಶೋಧನಾ ಲೇಖನಗಳ ಪ್ರಕಟಣೆಯೊಂದಿಗೆ ಹಲವಾರು ಅಂತರರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯ, ಜಿಲ್ಲಾಮಟ್ಟದ ವಿಚಾರ ಸಂಕಿರಣಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. ಅನೇಕ ಸಂಘ–ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಸಾಹಿತ್ಯ ಸೇವೆಗಾಗಿ ಕರ್ನಾಟಕ ನಾಟಕ ಅಕಾಡೆಮಿ ಪುರಸ್ಕಾರ, ಬಿ.ವಿ. ಕಾರಂತ ನವರಾತ್ರಿ ರಂಗೋತ್ಸವ ಸನ್ಮಾನ, ಕೊಡಗಿನ ಗೌರಮ್ಮ ಪ್ರಶಸ್ತಿ, ಕೊಡಗು ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗಳು ಇವರಿಗೆ ಸಂದಿವೆ.

ಪ್ರಸ್ತುತ 'ಕೊಡವ ಜನಪದ ಆಟಗಳು' ಇವರ ಸಂಶೋದನಾ ಕೃತಿ.

**ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ**